


ದುಡಿಯುವ ಜನರ ಪ್ರಾಣ ಮಿತ್ರ


ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 18 | ಏಪ್ರಿಲ್ 25–ಮೇ 1–2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com

ಜನದ್ರೋಹಿ ಸರ್ಕಾರ ತೊಲಗಬೇಕು



ಹಿಂದಿ ಭಾರತ ಕರೆ ಈಗೇಕೆ?



ಮುಸ್ಲಿಮರ ಮೇಲೆ ಹೊಸ ಮಟ್ಟದ ಧಾಳಿಗಳು



ಜಹಂಗೀರ್ ಪುರಿ ಹಿಂಸಾಚಾರ: ಪೊಲೀಸ್ ಪಾತ್ರದ ತನಿಖೆಯಾಗಬೇಕು



ಶ್ರೀಲಂಕಾ: ಸಾರ್ವಭೌಮತ್ವಕ್ಕೇ ಕುತ್ತು ತರಬಹುದಾದ ಆರ್ಥಿಕ ಬಿಕ್ಕಟ್ಟು





ಜಹಾಂಗೀರ್‌ಪುರಿ ಹಿಂಸಾಚಾರ–ಪೊಲೀಸ್ ಪಾತ್ರದ ಬಗ್ಗೆ ಸ್ವತಂತ್ರ ನಿಷ್ಪಕ್ಷಪಾತ ತನಿಖೆ ನಡೆಯಬೇಕು: ಬೃಂದಾ ಕಾರಟ್

ಹೊಣೆಗಾರ ಪೊಲೀಸ್ ಸಿಬ್ಬಂದಿಯ ವಿರುದ್ಧ ಕ್ರಮ ಜರುಗಿಸಬೇಕು–ದಿಲ್ಲಿ ಪೊಲೀಸ್ ಕಮಿಷನರರಿಗೆ ಪತ್ರ

ಏಪ್ರಿಲ್ 16 ರಂದು ದಿಲ್ಲಿಯ ಜಹಾಂಗೀರಪುರಿಯಲ್ಲಿ ಸಂಭವಿಸಿದ ಕೋಮು ಹಿಂಸಾಚಾರದ ಘಟನೆಗಳನ್ನು ಸಂಪೂರ್ಣವಾಗಿ ತಪ್ಪಿಸಬಹುದಾಗಿತ್ತು ಎಂದು ಹಲವಾರು ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾದ ವೀಡಿಯೊ ಚಿತ್ರಗಳಿಂದ ಮತ್ತು ಎಡಪಕ್ಷಗಳ ಸತ್ಯಶೋಧನಾ ತಂಡಕ್ಕೆ ಪ್ರತ್ಯಕ್ಷ ಸಾಕ್ಷಿಗಳಿಂದ ಸಿಕ್ಕ ವರದಿಗಳಿಂದಲೂ ಎದ್ದು ಕಾಣುತ್ತದೆ. ಇವು ಇದರಲ್ಲಿ ಪೊಲೀಸರ ಪಾತ್ರಕ್ಕೆ ಸಂಬಂಧಿಸಿದಂತೆ ಹಲವು ಸಂದೇಹಗಳನ್ನು ಉಂಟುಮಾಡಿವೆ. ಈಗ ಇದರ ತನಿಖೆಯನ್ನು ಕ್ರೈಂ ಬ್ರಾಂಚ್ ಗೆ ಒಪ್ಪಿಸಲಾಗಿದೆ. ಅದರೆ ಇದೂ ಜಹಾಂಗೀರ್‌ಪುರಿ ಘಟನೆಯ ಪ್ರಕರಣದಲ್ಲಿ ಜವಾಬ್ದಾರರಾಗಿರುವ ಪೋಲೀಸ್ ಪಡೆಯ ಒಟ್ಟಾರೆ ಅಧಿಕಾರ ವ್ಯಾಪ್ತಿಗೇ ಒಳಪಟ್ಟಿರುವ ಸಂಸ್ಥೆ. ಆದ್ದರಿಂದ ಈ ಘಟನೆಗಳ ಬಗ್ಗೆ ಒಂದು ನ್ಯಾಯಾಂಗ ತನಿಖೆ, ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯೆ ಬಂದಾಕಾರಟ್ ಹಾಗೂ ಕೇಂದ್ರ ಸಮಿತಿ ಸದಸ್ಯ ಮತ್ತು ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ. ತಿವಾರಿ ದಿಲ್ಲಿಯ ಪೊಲೀಸ್ ಕಮಿಷನರ್ ಅಸ್ಥಾನಾರವರಿಗೆ ಪತ್ರ ಬರೆದಿದ್ದಾರೆ. ಅಲ್ಲದೆ, ಈ ನಡುವೆ, ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಜರುಗಿಸಬೇಕು ಎಂದೂ ಅವರನ್ನು ವಿನಂತಿಸಿದ್ದಾರೆ.

ಮೆರವಣಿಗೆಯಲ್ಲಿ ಆಯುಧಗಳನ್ನು ಒಯ್ಯಲು ಅವಕಾಶ ನೀಡಿರುವ, ಸಮರ್ಪಕ ವ್ಯವಸ್ಥೆಗಳ ಕೊರತೆಗೆ ಕಾರಣರಾದ, ಮೆರವಣಿಗೆಯನ್ನು ಮಸೀದಿಯ ಮುಂದೆ ನಿಲ್ಲಿಸಲು ಅನುಮತಿ ನೀಡಿದ ಮತ್ತು ಏಕಪಕ್ಷೀಯವಾಗಿ ಪಕ್ಷಪಾತಪೂರ್ಣ ತನಿಖೆ ನಡೆಸುತ್ತಿರುವ ಪೊಲೀಸ್ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತಮ್ಮ ಪತ್ರದಲ್ಲಿ ಈ ಇಬ್ಬರು ಮುಖಂಡರು ಆಗ್ರಹಿಸಿದ್ದಾರೆ. ಎರಡೂ ಸಮುದಾಯಗಳ ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ಹೇಳಿದ್ದಾರೆ. ಆದರೆ ಘಟನೆಗಳು ನಡೆದಿರುವ ರೀತಿಯನ್ನು ನೋಡಿದರೆ ಇದರ ಮುಖ್ಯ ಪ್ರಚೋದನೆ ಮತ್ತು ಯೋಜನೆ ಮೆರವಣಿಗೆಯನ್ನು ನಡೆಸಿದ ಭಜರಂಗದಳದ ಅಂಗಸಂಘಟನೆಯದ್ದು ಎಂದು ಕಾಣಬರುತ್ತಿದ್ದರೂ ಬಂಧಿತರಲ್ಲಿ ಬಹುಪಾಲು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ ಎಂಬದನ್ನು ಈ ಪತ್ರ ಪೊಲೀಸ್ ಕಮಿಷನರ್ ರವರ ಗಮನಕ್ಕೆ ತಂದಿದೆ.

ಈ ಪತ್ರದ ಪೂರ್ಣಪಾಟವನ್ನು ಈ ಮುಂದೆ ಕೊಡಲಾಗಿದೆ:

ಆತ್ಮೀಯ ಶ್ರೀ ಅಸ್ಥಾನಾಜೀ,

ಏಪ್ರಿಲ್ 16 ರಂದು ಜಹಾಂಗೀರಪುರಿಯಲ್ಲಿ ಸಂಭವಿಸಿದ ಕೋಮು ಹಿಂಸಾಚಾರದ ಸಂಪೂರ್ಣ ತಪ್ಪಿಸಬಹುದಾದ ಘಟನೆಗಳಲ್ಲಿ ಪೊಲೀಸರ ಪಾತ್ರಕ್ಕೆ ಸಂಬಂಧಿಸಿದಂತೆ ನಾವು ನಿಮಗೆ ಪತ್ರ ಬರೆಯುತ್ತಿದ್ದೇವೆ. ಹಲವಾರು ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾದ ವೀಡಿಯೊ ಪುರಾವೆಗಳು ಮತ್ತು ನಮ್ಮ ಸತ್ಯಶೋಧನಾ ತಂಡಕ್ಕೆ ಪ್ರತ್ಯಕ್ಷ ಸಾಕ್ಷಿಗಳು ತಿಳಿಸಿರುವ ವರದಿಗಳು ಈ ಘಟನೆಗಳ ಬಗ್ಗೆ ತೀರ್ಮಾನಕ್ಕೆ ಬರಬಹುದಾದ ಪುರಾವೆಗಳನ್ನು ಒದಗಿಸುತ್ತವೆ. ಈ ಮೆರವಣಿಗೆಯಲ್ಲಿ ಬಜರಂಗ ದಳದ ಯುವ ಘಟಕದ ಸದಸ್ಯರು ಸಶಸ್ತ್ರರಾಗಿದ್ದರು, ಹಲವರು ಖಡ್ಗಗಳನ್ನು, ಲಾಠಿಗಳನ್ನು ಬಹಿರಂಗವಾಗಿಯೇ ಝಳಪಿಸುತ್ತಿದ್ದರು ಮತ್ತು ಬಂದೂಕುಗಳನ್ನು ಪ್ರದರ್ಶಿಸುವ ಆಘಾತಕಾರಿ ದೃಶ್ಯಗಳೂ ಕಾಣ ಬಂದಿವೆ. ಈ ಮೆರವಣಿಗೆಗೆ ತಮ್ಮ ಅನುಮತಿ ಇತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಶಸ್ತ್ರಾಸ್ತ್ರಗಳೊಂದಿಗೆ ಮೆರವಣಿಗೆ ನಡೆಸಲು ಪೊಲೀಸರು ಅನುಮತಿ ನೀಡಿದ್ದರೇ? ವಾಸ್ತವವಾಗಿ ಶಸ್ತ್ರಾಸ್ತ್ರಗಳನ್ನು ಹೊತ್ತಿದ್ದ ಮೆರವಣಿಗೆಗಾರರು ಶಸ್ತ್ರಾಸ್ತ್ರ ಕಾಯಿದೆಯನ್ನು ಸ್ಪಷ್ಟವಾಗಿ ಉಲ್ಲಂಘಿಸಿದ್ದಾರೆ, ಇಂತಹ ಉಲ್ಲಂಘನೆಗಳಿಗೆ ಶಸ್ತ್ರಾಸ್ತ್ರ ಕಾಯಿದೆ ಜೈಲು ಶಿಕ್ಷೆಯ ಕಠಿಣ ನಿಬಂಧನೆಗಳನ್ನು ಹೊಂದಿದೆ, ಮೆರವಣಿಗೆಯಲ್ಲಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ವ್ಯಕ್ತಿಗಳನ್ನು ನೀವು ಗುರುತಿಸಿದ್ದೀರಾ ಮತ್ತು ಹಾಗಿದ್ದರೆ ಅವರನ್ನು ಶಸ್ತ್ರಾಸ್ತ್ರ ಕಾಯ್ದೆ ಸೇರಿದಂತೆ ಕಾನೂನಿನ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಬಂಧಿಸಲಾಗಿದೆಯೇ ಎಂಬುದು ಮಾಧ್ಯಮಗಳಿಗೆ ನೀವು ನೀಡಿರುವ ಹೇಳಿಕೆಯಿಂದ ಸ್ಪಷ್ಟವಾಗುವುದಿಲ್ಲ. ಅಲ್ಲದೆ ಪೊಲೀಸರ ಪಾತ್ರದ ಬಗ್ಗೆ ಯಾವುದೇ ತನಿಖೆ ನಡೆಯುತ್ತದೆಯೇ ಎಂಬುದೂ ಸ್ಪಷ್ಟವಾಗಿಲ್ಲ. ರೋಜಾ ಉಪವಾಸ ಮುರಿಯುವ ಪ್ರಾರ್ಥನೆಗಳು ಪ್ರಾರಂಭವಾಗಬೇಕಿದ್ದ ಸಮಯದಲ್ಲಿಯೇ ನಿಖರವಾಗಿ ಸಶಸ್ತ್ರ ಮೆರವಣಿಗೆ ಮಸೀದಿಯ ಮುಂದೆ ನಿಲ್ಲಲು ಮತ್ತು ಪ್ರಚೋದನಕಾರಿ ಹಾಗೂ ಆಕ್ರಮಣಕಾರಿ ಘೋಷಣೆಗಳನ್ನು ಕೂಗಲು ಅವಕಾಶ ನೀಡಿರುವುದಕ್ಕೆ ಯಾರು ಹೊಣೆಗಾರರು? ಪೊಲೀಸರ ಲೋಪ–ದೋಷಪೂರಿತ ಉದ್ದೇಶಪೂರ್ವಕವಾದ ಕೃತ್ಯಗಳ ನೇರ ಫಲಿತಾಂಶವಾಗಿ ನಂತರದ ಘಟನೆಗಳು ಸಂಭವಿಸಿವೆ.

ಕರ್ತವ್ಯ ನೆರವೇರಿಸುವ ವೇಳೆಯಲ್ಲಿ ಕೆಲವು ಪೊಲೀಸ್ ಸಿಬ್ಬಂದಿ ಗಾಯಗೊಂಡಿರುವುದು ಅತ್ಯಂತ ದುರದೃಷ್ಟಕರ. ಆದರೆ ಮೆರವಣಿಗೆಗೆ ಅನುಮತಿ ನೀಡುವ ಮುನ್ನ ಈ ಪ್ರದೇಶದ ಹಿರಿಯ ಅಧಿಕಾರಿಗಳು ಅಗತ್ಯನಿಗಾ ವಹಿಸಿದ್ದರೆ, ಸಾಕಷ್ಟು ಪೊಲೀಸ್ ಬಂದೋಬಸ್ತ್ ಮಾಡಿದ್ದರೆ, ಆಯುಧಗಳನ್ನು ಹಿಡಿದಿದ್ದವರ ವಿರುದ್ಧ ಕ್ರಮ ಕೈಗೊಂಡಿದ್ದರೆ, ಮಸೀದಿಯ ಮುಂದೆ ಮೆರವಣಿಗೆಯನ್ನು ನಿಲ್ಲಿಸಲು ಅವಕಾಶ ನೀಡದೇ ಇದ್ದಿದ್ದರೆ ಈ ಘಟನೆಗಳು ನಡೆಯುತ್ತಿರಲಿಲ್ಲ. ಈ ಪ್ರದೇಶದಲ್ಲಿ ಹಿಂದೆಂದೂ ಕೋಮುವಾದಿ ಸ್ವರೂಪದ ಘಟನೆಗಳು ನಡೆದಿಲ್ಲ ಎಂಬುದನ್ನು ಗಮನಿಸಬೇಕು. ಎರಡು ಸಮುದಾಯಗಳು ಸಾಮರಸ್ಯದಿಂದ ಒಟ್ಟಾಗಿ ಬಾಳಿವೆ. ಶೋಭಾ ಯಾತ್ರೆಯ ಹೆಸರಿನಲ್ಲಿ ನಡೆದ ಮೆರವಣಿಗೆಯಲ್ಲಿ ಹೊರಗಿನವರು ಈ ಘಟನೆಗಳನ್ನು ಸೃಷ್ಟಿಸಿದ್ದಾರೆ ಎಂಬುದಕ್ಕೆ ಇದು ಇನ್ನಷ್ಟು ಪುರಾವೆ ನೀಡುತ್ತದೆ.

ರಾತ್ರಿ ವೇಳೆ ಸಿ ಬ್ಲಾಕ್‌ನ ಮನೆಗಳ ಮೇಲೆ ದಾಳಿ ನಡೆಸುತ್ತ ಪುರುಷ ಪೊಲೀಸರು ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿ ಥಳಿಸಿದ್ದಾರೆ ಎಂಬ ಮಾಹಿತಿಯೂ ನಮಗೆ ಲಭ್ಯವಾಗಿದೆ. ಇದು ಪುರುಷ ಪೊಲೀಸ್ ಸಿಬ್ಬಂದಿ ಮಹಿಳೆಯನ್ನು ಸ್ಪರ್ಶಿಸುವುದನ್ನು ನಿಷೇಧಿಸುವ ಎಲ್ಲಾ ನಿಬಂಧನೆಗಳ ಪುಟ 15 ಕ್ಕೆ

ಜಹಾಂಗಿರ್‌ಪುರಿ ನಾಗರಿಕರ ಮೇಲೆ ಆರೆಸ್ಸೆಸ್–ಬಿಜೆಪಿ ನಿರ್ದಯ ದಾಳಿ

ಬೃಂದಾ ಕಾರಟ್ ನೇತೃತ್ವದಲ್ಲಿ ಮಧ್ಯಪ್ರವೇಶದ ನಂತರವೇ ಸುಪ್ರಿಂ ಕೋರ್ಟ್ ಆದೇಶದ ಪಾಲನೆ



ಏಪ್ರಿಲ್ 16 ರಂದು ಗಲಭೆ ನಡೆಸುವ ವಿಹೆಚ್‌ಪಿ–ಭಜರಂಗ ದಳದ ಪ್ರಯತ್ನದಿಂದ ಪಾರಾದ ಜನಗಳ ಮೇಲೆ ಎಪ್ರಿಲ್ 20 ರಂದು ಬಿಜೆಪಿ ತನ್ನ 'ಬುಲ್‌ಡೋಝರ್ ಸಂಸ್ಕೃತಿ'ಯನ್ನು ಪ್ರಯೋಗಿಸಲು ಪ್ರಯತ್ನಿಸಿದೆ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿ ಖಂಡಿಸಿದೆ.

ಬಿಜೆಪಿ ದಿಲ್ಲಿ ರಾಜ್ಯ ಅಧ್ಯಕ್ಷ ಆದೇಶ ಗುಪ್ತ ವಿಹೆಚ್‌ಪಿ–ಭಜರಂಗದಳದ ಗಲಭೆ ನಡೆಸುವ ಪ್ರಯತ್ನವನ್ನು ಪ್ರತಿರೋಧಿಸಿದವರು ಆ ಪ್ರದೇಶದಲ್ಲಿ ಅಕ್ರಮ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದಾರೆ, ಅವನ್ನು ನೆಲಸಮ ಮಾಡಬೇಕು ಎಂದು ಉತ್ತರ ದಿಲ್ಲಿ ಮಹಾನಗರ ಪಾಲಿಕೆ (ಎನ್‌ಡಿಎಂಸಿ)ಯ ಕೇರ್‌ಟೇಕರ್ ಆಡಳಿತಕ್ಕೆ ನಿರ್ದೇಶನ ನೀಡಿದ್ದು ಅದನ್ನು ಜಾರಿಗೊಳಿಸಲು ಎನ್‌ಡಿಎಂಸಿ ಅತ್ಯಂತ ನಿರ್ದಯವಾಗಿ ಕಾನೂನು ಪ್ರಕಾರ ನೀಡಬೇಕಾದ ನೋಟೀಸುಗಳನ್ನೂ ಕೊಡದೆ ಇದ್ದಕ್ಕಿದ್ದಂತೆ ಬುಲ್‌ಡೋಝರ್‌ಗಳನ್ನು ಪ್ರಯೋಗಿಸಿ ಈ ಕ್ಷೇತ್ರದ ಅತ್ಯಂತ ಬಡ ಜನಗಳ ಜೀವನೋಪಾಯಗಳ ಮೇಲೆ ದಾಳಿ ಆರಂಭಿಸಿತು. ಇದಕ್ಕೆ ಕೇಂದ್ರ ಸರಕಾರದ ಅಡಿಯಲ್ಲಿರುವ ದಿಲ್ಲಿ ಪೋಲೀಸ್‌ನ ಪೂರ್ಣ ಬೆಂಬಲವನ್ನೂ ಪಡೆಯಿತು. ಇದನ್ನು ಅಖಿಲ ಭಾರತ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ ವಿ ಸುರೇಂದ್ರ ನಾಥ್ ಮತ್ತು ಕಪಿಲ್ ಸಿಬಾಲ್ ಹಾಗೂ ದುಷ್ಯಂತ ದವೆಯವರು ಪ್ರತ್ಯೇಕ ಅರ್ಜಿಗಳ ಮೂಲಕ ಸುಪ್ರಿಂ ಕೋರ್ಟಿನ ಗಮನಕ್ಕೆ ತಂದಾಗ ನ್ಯಾಯಾಲಯ 10.45ಕ್ಕೆ ಅಲ್ಲಿ ಯಥಾಸ್ಥಿತಿ ಕಾಪಾಡಬೇಕು ಎನ್ನುತ್ತ ಎನ್‌ಡಿಎಂಸಿ ಕಾರ್ಯಾಚರಣೆಗೆ ತಡೆಯಾಜ್ಞೆ ನೀಡಿತು. ಆದರೂ ನೆಲಸಮ ಕಾರ್ಯಾಚರಣೆ ನ್ಯಾಯಾಲಯದ ಆದೇಶವನ್ನೂ ಉಲ್ಲಂಘಿಸಿ ಮುಂದುವರೆಯಿತು. ಆಗ ಸುಪ್ರಿಂ ಕೋರ್ಟ್ ಆದೇಶದ ಪ್ರತಿಯೊಂದಿಗೆ ಸಿಪಿಐ(ಎಂ) ಹಿರಿಯ ಮುಖಂಡರಾದ ಬೃಂದಾ ಕಾರಟ್ ನೇತೃತ್ವದಲ್ಲಿ ಎಡಪಕ್ಷಗಳ ಕಾರ್ಯಕರ್ತರು ಮತ್ತು ಸ್ಥಳೀಯರು ಬುಲ್‌ಡೋಝರ್‌ಗಳ ಮುಂದೆ ಅಡ್ಡ ನಿಂತಾಗಲೇ 12.20 ರ ವೇಳೆಗೆ ಈ ಬುಲ್‌ಡೋಝರ್ ಕಾರ್ಯಾಚರಣೆ ಕೊನೆಗೂ ನಿಂತದ್ದು. ತನ್ನ ಆದೇಶದ ಈ ಉಲ್ಲಂಘನೆಯನ್ನು ಸುಪ್ರಿಂ ಕೋರ್ಟ್ ಗಂಭೀರವಾಗಿ ತಗೊಂಡಿದೆ ಎಂದು ವರದಿಯಾಗಿದೆ.



ಜಹಾಂಗಿರ್‌ಪುರಿಯ ಜನಗಳಲ್ಲಿ ಬಹುಪಾಲು ಸ್ವ–ಉದ್ಯೋಗಿಗಳು, ಅಲ್ಲಿ ಬುಲ್‌ಡೋಝರ್ ಸಂಸ್ಕೃತಿಯ ಪ್ರಯೋಗ ಅವರ ಜೀವನೋಪಾಯಗಳ ಮೇಲೆ ನಡೆಸಿರುವ ನೇರ ದಾಳಿ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಹೇಳಿದೆ. ಸದ್ಯಕ್ಕೆ ಸಿಪಿಐ(ಎಂ) ಮತ್ತು ಇತರ ಪ್ರಜಾಪ್ರಭುತ್ವ ಶಕ್ತಿಗಳು ಈ ಸಂಸ್ಕೃತಿಯನ್ನು ದೇಶದ ರಾಜಧಾನಿಯಲ್ಲೂ ಹರಡುವ ಪ್ರಯತ್ನವನ್ನು ವಿಫಲಗೊಳಿಸಿದ್ದಾರೆ. ಇಂತಹ ಪ್ರಜಾಪ್ರಭುತ್ವ–ವಿರೋಧಿ, ಸಂವಿಧಾನ–ವಿರೋಧಿ ಕೃತ್ಯಗಳಿಗೆ ಮುಂಬರುವ ದಿನಗಳಲ್ಲಿ ಜನಗಳ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ ಎಂದು ಅದು ಆರೆಸ್ಸೆಸ್–ಬಿಜೆಪಿಗೆ ಎಚ್ಚರಿಕೆ ನೀಡಿದೆ.

"ಬಿಜೆಪಿ ಬುಲ್‌ಡೋಝರ್ ರಾಜಕೀಯವನ್ನು ಕೋಮುವಾದಿ ಕೊನದಿಂದ ನಡೆಸುತ್ತಿದೆ. ಅವರು ಕಾನೂನು ಪ್ರಕ್ರಿಯೆ, ಸಂವಿಧಾನ ಮತ್ತು ಮಾನವತೆಯನ್ನೆ ಚಿಂದಿ ಮಾಡುತ್ತಿದ್ದಾರೆ" ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಬೃಂದಾ ಕಾರಟ್ ಹೇಳಿದ್ದಾರೆ.

ಸಂಪಾದಕೀಯ

ದುರಾಡಳಿತಕ್ಕೆ ದೊರೆತ ಅನುಮೋದನೆ

2022 ಎಪ್ರೀಲ್ 16, 17 ರಂದು ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಜರುಗಿದ ಭಾರತೀಯ ಜನತಾ ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆ ಜನತೆಯ ಸಂಕಷ್ಟಗಳಿಗೆ ಸರಕಾರ ಸ್ಪಂದಿಸುವಂತೆ ಮಾಡುವಲ್ಲಿ ಬೆನ್ನು ತೋರಿಸಿರುವುದು ಸ್ಪಷ್ಟ. ಜನತೆಯ ಯಾವ ಪ್ರಶ್ನೆಗಳೂ ಅಲ್ಲಿ ಚರ್ಚೆಗೆ ಬರಲಿಲ್ಲ. ಮುಂದಿನ ವರ್ಷದಲ್ಲಿ ಬರಲಿರುವ ವಿಧಾನಸಭಾ ಚುನಾವಣೆಯ ತಂತ್ರಗಳನ್ನು ಜಾರಿಗೊಳಿಸುವುದಷ್ಟನ್ನೇ ಮುಖ್ಯ ಅಜೆಂಡಾವಾಗಿಸಿಕೊಂಡ ಈ ಕಾರ್ಯಕಾರಿಣಿ ಜನತೆಯ ಜೀವನದ ಪ್ರಶ್ನೆಗಳನ್ನು ಪೂರ್ಣವಾಗಿ ನಿರ್ಲಕ್ಷಿಸಿದೆ. ಮಾತ್ರವಲ್ಲ, ದಿನ ದಿನವೂ ಬಯಲಾಗುತ್ತಿರುವ ಭಾರೀ ಭ್ರಷ್ಟಾಚಾರ, ಹಗರಣಗಳು, ವೈಫಲ್ಯಗಳು, ಬಿಜೆಪಿ ಸರಕಾರ ಅನುಸರಿಸುತ್ತಿರುವ ದಿವಾಳಿಖೋರ ನೀತಿಗಳಿಗೆ ಬಂದಿರುವ ಟೀಕೆಗಳಿಗೆ, ಆರೋಪಗಳಿಗೆ ಉತ್ತರದಾಯಿತ್ವ ತೋರಲಿಲ್ಲ. ಬದಲಾಗಿ ಇವೆಲ್ಲವನ್ನೂ ಮರೆ ಮಾಚಲು ರಾಜ್ಯದಲ್ಲಿ ಈಗಾಗಲೇ ಸಂಘಪರಿವಾರ ನಡೆಸಿರುವ ಕೋಮುವಾದೀ ಫ್ಯಾಶಿಸ್ಟ್ ಆಕ್ರಮಣಗಳಿಗೆ ಅನುಮೋದನೆಯನ್ನು ಈ ಕಾರ್ಯಕಾರಿಣಿ ನೀಡಿದೆ. ಅಂದರೆ ಸಂವಿಧಾನ, ಕಾನೂನು ಬದ್ಧ ಆಡಳಿತ ಕಾಯ್ದುಕೊಳ್ಳಬೇಕಿದ್ದ ಸರಕಾರ ಅದನ್ನು ಉಲ್ಲಂಘಿಸುವ ಕೃತ್ಯಗಳನ್ನು ಬೆಂಬಲಿಸಿದೆ.

ಕಾರ್ಯಕಾರಿಣಿ ಆರಂಭಗೊಳ್ಳುವ ಹೊತ್ತಿಗೆ ಸಚಿವ ಈಶ್ವರಪ್ಪ ಮತ್ತವರ ಆಪ್ತರು ಭಾಗಿಯಾದ, ಕಂಟ್ರಾಕ್ಟರ್ ಸಂತೋಷ್ ಪಾಟೀಲ ರ ಆತ್ಮಹತ್ಯೆಯ ಪ್ರಕರಣ ಘಟಿಸಿ ಈಶ್ವರಪ್ಪನವರನ್ನು ಬಂಧಿಸಲು ಹಾಗೂ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಿ ತೀಕ್ಷ್ಣ ಕ್ರಮ ವಹಿಸಲು ಆಗ್ರಹವಿತ್ತು. ಇಂತಹುದೇ ಹಲವು ಭ್ರಷ್ಟಾಚಾರದ ಪ್ರಕರಣಗಳು ಹೊರ ಬಂದು 40 ಪರ್ಸೆಂಟ್ ಲಂಚದ ಸರಕಾರ ಎನ್ನುವುದು ಕೇಂದ್ರ ವಿಷಯವಾಗಿ ಹೋಗಿತ್ತು. ಮಠಗಳಿಗೆ ನೀಡಿದ ಅನುದಾನ ಪಡೆಯಲು ಶೇ.30 ಲಂಚ ನೀಡಬೇಕೆಂದು ಪೀಡಿಸುವ, ಅಳುಕಿಲ್ಲದೇ ಕಿತ್ತುಕೊಳ್ಳುವ ಬಗ್ಗೆ ದಿಂಗಾಲೇಶ್ವರ ಸ್ವಾಮೀಜಿಯವರೇ ಬಹಿರಂಗವಾಗಿ ಆರೋಪಿಸಿದ್ದರು. ರಾಜ್ಯದಲ್ಲಿ ಸಂಘಪರಿವಾರ ಮತ್ತು ಇದಕ್ಕೆ ಪೂರಕವಾಗಿ ಕೆಲವು ಮತೀಯ ಮೂಲಭೂತವಾದಿಗಳು ರಾಜ್ಯದಲ್ಲಿ ಉಂಟು ಮಾಡಿದ ಕೋಮುದ್ವೇಷ, ಅಶಾಂತಿ, ಗಲಭೆಗಳು ಸಾಮರಸ್ಯಕ್ಕೆ ಹಾನಿ ಮಾಡುತ್ತಿದ್ದ ನಿರಂತರ ದುರ್ಘಟನೆಗಳು ಹಾಗೂ ಅದಕ್ಕೆ ಸರಕಾರದ ನೇರ ಬೆಂಬಲ ಕಣ್ಣೆದುರೇ ಇದ್ದವು. ಪರಿಣಾಮವಾಗಿ, ರಾಜ್ಯದಲ್ಲಿ ಬಂಡವಾಳದ ಹೂಡಿಕೆ, ಅಭಿವೃದ್ಧಿಗೆ ಆಗುತ್ತಿದ್ದ ಹಿನ್ನೆಡೆ, ಇತ್ಯಾದಿ ನಕಾರಾತ್ಮಕ ಪರಿಣಾಮಗಳ ಬಗ್ಗೆ ಉದ್ಯಮಿಗಳಿಂದ ತೀವ್ರ ಟೀಕೆಗಳು ವ್ಯಕ್ತಗೊಂಡಿದ್ದವು. ದೇಶ ವಿದೇಶಗಳಲ್ಲಿ ಕರ್ನಾಟಕದ ಇಮೇಜ್ ಗೆ ಮುಕ್ಕಾಗುತ್ತಿತ್ತು. ಬೆಲೆ ಏರಿಕೆಯ ಬಾಧೆಯಲ್ಲಿ ಜನ ತತ್ತರಿಸುತ್ತಿದ್ದುದು, ನಿರುದ್ಯೋಗದ ಹೆಚ್ಚಳ ಇಂತಹವುಗಳು ಕಾಡುತ್ತಿದ್ದವು, ಕಾಡುತ್ತಿವೆ. ತಾನೇ ಕೊಟ್ಟ ಭರವಸೆಯಂತೆ ಎಸ್.ಸಿ. ಮತ್ತು ಎಸ್.ಟಿ. ಸಮುದಾಯಗಳಿಗೆ ಮೀಸಲಾತಿಯ ಶೇಕಡವಾರು ಹೆಚ್ಚಳದ ಬಗ್ಗೆ 70 ದಿನಗಳನ್ನು ದಾಟಿ ವಾಲ್ಮೀಕಿ ಪೀಠದ ಸ್ವಾಮೀಜಿ ಹಾಗೂ ವಿವಿಧ ಸಮುದಾಯಗಳು ಆಗ್ರಹಿಸುತ್ತಿರುವುದಕ್ಕೆ ಖಚಿತ ಭರವಸೆ ನೀಡಲಿಲ್ಲ. ಹೀಗಿರುವಾಗ ಜನತೆಯನ್ನು ಆಧರಿಸಿದ, ಜನಹಿತಕ್ಕೆ ನಿಜವಾಗಲೂ ಬದ್ದವಾದ ಉತ್ತರದಾಯಿತ್ವವುಳ್ಳ ಯಾವುದೇ ರಾಜಕೀಯ ಪಕ್ಷ ಇಂತಹ ಪ್ರಶ್ನೆಗಳಿಗೆ ಬೆನ್ನು ತೋರಿಸಲಾದೀತೆ? ಅನೈತಿಕ ಮಾರ್ಗದಿಂದ ಅಧಿಕಾರ ಹಿಡಿದ ಬಿಜೆಪಿ ಕನಿಷ್ಠ ಚುನಾವಣೆಗೆ ಸಿದ್ಧವಾಗುವ ಮುನ್ನವಾದರೂ ಚುನಾವಣಾ ಪ್ರಣಾಳಿಕೆಯ ಜಾರಿಯ ಬಗ್ಗೆ ಸರಕಾರದ ಕ್ರಮಗಳನ್ನು ವಿಮರ್ಶಿಸಿ ಚರ್ಚಿಸಬೇಕಿತ್ತು. ಆದರೆ ಬಿಜೆಪಿ ಕಾರ್ಯಕಾರಿಣಿ ಇವೆಲ್ಲವನ್ನೂ ಪೂರ್ಣವಾಗಿ ನಿರ್ಲಕ್ಷಿಸಿತು.

ಎಲ್ಲಾ ರಂಗಗಳಲ್ಲಿ ಸಂಪೂರ್ಣ ವೈಫಲ್ಯವಾಗಿರುವ ಈ ಸರಕಾರಕ್ಕೆ ಮುಖ್ಯಮಂತ್ರಿ, ಮಂತ್ರಿಗಳಿಗೆ, ಪಕ್ಷದ ಅಧ್ಯಕ್ಷ, ಪದಾಧಿಕಾರಿಗಳಿಗೆ ಚಾಟಿ ಬೀಸಬೇಕಾದ ರಾಷ್ಟ್ರೀಯ ಅಧ್ಯಕ್ಷರೇ ಹದಗೆಟ್ಟು ಹಳ್ಳ ಹಿಡಿದಿರುವ 'ಬೊಮ್ಮಾಯಿ ಸರಕಾರದ್ದು ಸುವರ್ಣ ಆಡಳಿತ' ಎಂದು ಹಾಡಿ ಹರಸಿದ್ದು ಭ್ರಷ್ಟತೆಯಲ್ಲಿ ಶಾಮೀಲುತನದ ದಿಗ್ದರ್ಶನ ಹಾಗೂ ನೈತಿಕ, ತಾತ್ವಿಕ ದಿವಾಳಿತನದ ಪರಮಾವಧಿ. ಬಿಜೆಪಿ ಪಕ್ಷಕ್ಕೆ ಉತ್ತಮ ಆಡಳಿತ ಕೊಡಬೇಕೆನ್ನುವ ಕಾಳಜಿ, ಬದ್ಧತೆಗಿಂತ ಸಾರ್ವಜನಿಕ ಸಂಪತ್ತಿನ ಲೂಟಿ, ಕಾರ್ಪೋರೇಟ್ ಕಂಪನಿಗಳ ನಿಷ್ಠ ಸೇವೆ, ಜನರನ್ನು ಹಾದಿ ತಪ್ಪಿಸುವ, ಜನ ವಿಭಜಕ ವರಸೆಗಳೇ ಪ್ರಧಾನ ಲಕ್ಷ್ಯ ಎನ್ನುವುದನ್ನು ಯಾವುದೇ ಅಳುಕಿಲ್ಲದೇ ಕಾರ್ಯಕಾರಿಣಿ ಪ್ರತಿಪಾದಿಸಿತು. ಅದರೆ ಸಿ.ಟಿ. ರವಿಯಂತಹ 'ರಾಷ್ಟ್ರೀಯ ನಾಯಕರು' ಸರಕಾರದ ವೈಫಲ್ಯಗಳನ್ನು ವಿಮರ್ಶಿಸಿದ ವಿರೋಧ ಪಕ್ಷಗಳ ಮೇಲೆ ಧಾಳಿ ಮಾಡಿದರೇ ಹೊರತು ಆತ್ಮವಿಮರ್ಶೆಯತ್ತ ತಿರುಗಿಯೂ ನೋಡಲಿಲ್ಲ.

ಕಾರ್ಯಕಾರಿಣಿಯಲ್ಲಿ ಭಾಗವಹಿಸಿದ್ದ ಅಖಿಲ ಭಾರತ ಅಧ್ಯಕ್ಷ ಜೆ.ಪಿ. ನಡ್ಡಾ ರವರು ಗೃಹ ಸಚಿವ ಅಮಿತ್ ಶಾ ಹೇಳಿ ಹೋಗಿದ್ದ ಮಿಷನ್ 150 ರ ಯೋಜನೆಯನ್ನೇ ಪುನಃ ಪಾಠ ಹೇಳಿ ಹೋದರು. ಮಾತ್ರವಲ್ಲ, ಹೈಕಮಾಂಡ್ ಹೇಳಿದಂತೆ ಪದಾಧಿಕಾರಿಗಳು ಕೇಳಬೇಕೆಂದೂ ತಾಕೀತು ಮಾಡಿದರು. ವಿಚಿತ್ರವೆಂದರೆ ಯಾವ ಪದಾಧಿಕಾರಿಯಾಗಲೀ, ಸಚಿವರಾಗಲೀ ಜನರ ಪ್ರಶ್ನೆಗಳು, ಸರಕಾರದ ಕಾರ್ಯ ವೈಖರಿ ಬಗ್ಗೆ ಚರ್ಚೆ ಇರಲಿ ಚಕಾರವನ್ನೇ ಎತ್ತಲಿಲ್ಲ. ಬದಲಾಗಿ ಮಂತ್ರಿಮಂಡಲದ ವಿಸ್ತರಣೆ, ಮಂತ್ರಿಯಾಗಲು ಲಾಬಿ, ಹಪಾಹಪಿತನಕ್ಕೆ ಈ ಸಂದರ್ಭ ಅವರಿಗೆ ವೇದಿಕೆಯಾದುದು ಮತ್ತೊಂದು ರಾಜಕೀಯ ವ್ಯಂಗ್ಯ. ಹೊಸಪೇಟೆಯಲ್ಲಿ ಕಾರ್ಯಕಾರಿಣಿ ಯನ್ನು ಭಾರೀ ಅದ್ದೂರಿಯಾಗಿ ನಡೆಸುವ ಮೂಲಕ ಸಚಿವ ಆನಂದ್ ಸಿಂಗ್ ಮುನಿಸಿಕೊಂಡಿರುವ ಕೇಂದ್ರ ಹಾಗೂ ರಾಜ್ಯ ನಾಯಕರನ್ನು ಸಂತುಷ್ಟಗೊಳಿಸಲು ಒಂದು ಸಂದರ್ಭವಾಗಿ ಬಳಸಿಕೊಂಡಿದ್ದಾರೆ ಎನ್ನುವುದೂ ಒಂದು ವಾಸ್ತವ. ಒಟ್ಟಾರೆ ಬಿಜೆಪಿ ಒಂದು ಹೊಣೆಗೇಡಿ, ವಂಚಕ ಜನವಿರೋಧಿ ಹಾಗೂ ಆಂತರಿಕವಾಗಿಯೂ ಅಪ್ರಜಾಸತ್ತಾತ್ಮಕ ಎನ್ನುವುದನ್ನು ಈ ಸಂದರ್ಭದಲ್ಲೂ ತೋರಿಸಿತು.

ದ್ವೇಷವನ್ನು ಕಣ್ಣಿಗೆ ಮೆತ್ತಿಕೊಂಡ ಸರ್ಕಾರ ವೈಫಲ್ಯ ಮರೆಮಾಚಲು ಬೊಮ್ಮಾಯಿ ಹರಸಾಹಸ

ನಿತ್ಯಾನಂದಸ್ವಾಮಿ

ಮುಖ್ಯ ಮಂತ್ರಿ ಬಸವರಾಜ ಬೆಮ್ಮಾಯಿ ರವರು ನೋಡಲು ತುಂಬಾ ಮುಗ್ದರಂತೆ ಕಾಣುತ್ತಿದ್ದಾರೆ. ಆದರೆ ಅವರು ತೊಟ್ಟಿರುವ ಮುಖವಾಡ ಆಗಾಗ ಕಳಚಿ ಬೀಳುತ್ತಿದ್ದು ಅವರ ನಿಜ ಬಣ್ಣ ಬಯಲಾಗುತ್ತಿರುತ್ತದೆ.

ಕಮಿಷನ್ ಸರ್ಕಾರ ಎಂದೇ ಚರ್ಚಿಸಲ್ಪಡುತ್ತಿರುವ ಬೊಮ್ಮಾಯಿ ನೇತೃತ್ವದ ಬಿಜೆಪಿ ಸಕಾರ ಭ್ರಷ್ಟಾಚಾರದಲ್ಲಿ ಮಿಂದೇಳುತ್ತಿದೆ. ಕರ್ನಾಟಕದ ಬಿಜೆಪಿ ಭ್ರಷ್ಟಾಚಾರದ ಬ್ರಹ್ಮಾಂಡವೇ ಆಗಿದೆ ಎಂದರೆ ತಪ್ಪಾಗದು 40 ಪರ್ಸೆಂಟ್ ಕಮಿಷನ್ ಕೇಳುವ ಈ ಸರ್ಕಾರ ಸಂತೋಷ್ ಪಾಟೀಲ್ ಎಂಬ ಗುತ್ತಿಗೆದಾರನನ್ನು ಬಲಿ ಪಡೆದಿದೆ. ಕೊನೆಗೆ ಮಂತ್ರಿ ಈಶ್ವರಪ್ಪ ರಾಜಿನಾಮೆ ನೀಡಿ ಕೆಳಗೆ ಇಳಿದಿದ್ದಾರೆ. ಸರ್ಕಾರದ ಕೊಳಕು ತನವನ್ನು ಮರೆಮಾಚಲು ನೆರವಾಗಿದ್ದಾರೆ. ಇದು ಗೋಮುಖ ವ್ಯಾಘ್ರ ನೊಬ್ಬನ ಆಡಳಿತ ವೈಖರಿ. ಪಿಎಸ್ಐ ನೇಮಕಾತಿ ವಿಚಾರದಲ್ಲೂ ಪ್ರತಿಯೊಬ್ಬ ಅಭ್ಯರ್ಥಿಯಿಂದ ತಲಾ 80 ಲಕ್ಷ ರೂ. ಹಣದ ಬೇಡಿಕೆ ಇಟ್ಟಿರುವುದು ಸಹ ಬೆಳಕಿಗೆ ಬಂದಿದೆ. ಒಂದಿಲ್ಲೊಂದು ಕ್ಷೇತ್ರದಲ್ಲಿ ಸರ್ಕಾರವೇ ಭ್ರಷ್ಟಾಚಾರದಲ್ಲಿ ತೊಡಗಿರುವುದನ್ನು ಗಮನಿಸಿದರೆ, ರಾಜ್ಯದಲ್ಲಿ ಒಂದು ಜನಪರವಾದ ನೆಮ್ಮದಿಯ ಆಡಳಿತ ನೀಡುವಲ್ಲಿ ಬೊಮ್ಮಾಯಿ ನೇತೃತ್ವದ ಬಿಜೆಪಿ ಸಂಪೂರ್ಣ ಅಸಮರ್ಥವಾಗಿದೆ ಎಂದು ರುಜುವಾತು ಆಗುತ್ತಿದೆ.

ಬೊಮ್ಮಾಯಿ ಸರ್ಕಾರ ತನ್ನ ಆಡಳಿತಾತ್ಮಕ ವೈಫಲ್ಯವನ್ನು ಮರೆಮಾಚಲು ಕೋಮು ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುತ್ತಿದೆ. ರಾಜ್ಯದಲ್ಲಿ ಹಿಜಾಬ್, ಹಲಾಲ್ ಕಟ್, ಮುಸ್ಲಿಂ ವ್ಯಾಪಾರಸ್ಥರಿಗೆ ಜಾತ್ರೆಗಳಲ್ಲಿ ನಿಷೇಧ, ಅಜ಼ಾನ್ ಮತ್ತಿತ್ತರ ವಿಚಾರಗಳನ್ನು ಬಡಿದೆಬ್ಬಿಸಿ ಕೋಮು ಗಲಭೆಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಇದು ಬೊಮ್ಮಾಯಿ ಕೈಗೊಂಡಿರುವ ತಂತ್ರಗಾರಿಕೆ. ಗಲಭೆಗಳ ಮೂಲಕ ಜನರ ಗಮನ ಬೇರೆಡೆಗೆ ಸೆಳೆಯುತ್ತಿದ್ದಾರೆ.

ಕಳೆದ ಕೆಲವು ತಿಂಗಳ ಹಿಂದೆ ಮುಖ್ಯ ಮಂತ್ರಿ ಬೊಮ್ಮಾಯಿರವರು ಕರಾವಳಿ ಜಿಲ್ಲೆಗಳಲ್ಲಿ ಕೋಮು ಗಲಭೆ ಬುಗಿಲೆದ್ದಾಗ 'ಪ್ರತಿಯೊಂದು ಕೃತಿಗೂ ಒಂದು ಕಾರಣ ಇದ್ದೇ ಇರುತ್ತದೆ' ಎಂದು ಹೇಳುವ ಮೂಲಕ ಪುಂಡರು ನಡೆಸುತ್ತಿರುವ ಕೋಮು ಹಿಂಸಾಚಾರವನ್ನು ಬೆಂಬಲಿಸಿದ್ದರು. ಆದರೆ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಜರುಗಿದ ಕೋಮು ಗಲಭೆ ಸಂಧರ್ಭದಲ್ಲಿ ಮುಖ್ಯ ಮಂತ್ರಿಗಳು ಈ ರೀತಿ ಹೇಳಲಿಲ್ಲ.

ಹುಬ್ಬಳ್ಳಿಯಲ್ಲಿ ಜರುಗಿದ್ದು ಕೇವಲ ಮುಸ್ಲಿಂರವರಿಂದ ಜರುಗಿದ ದುಷ್ಕತ್ಯ ಎಂಬುದು ಬೊಮ್ಮಾಯಿರವರ ವಾದ. ಹಿಂದುಗಳ ಹಿಂಸಾಚಾರಕ್ಕೆ ಕಾರಣ ವಿರುತ್ತದೆ, ಆದರೆ ಮುಸ್ಲಿಂರಿಂದ ನಡೆಯುವ ಹಿಂಸಾಚಾರಕ್ಕೆ ಸಕಾರಣ ಇರುವುದಿಲ್ಲ ಎಂಬುದು ಬೊಮ್ಮಾಯಿ ರವರ ಅಭಿಪ್ರಾಯ. ಇದು ಶುದ್ಧ ತಪ್ಪು. ಇತ್ತೀಚೆಗೆ ಸ್ವಾಮಿಜಿಯೊಬ್ಬರು ಹೇಳಿದ ಮಾತು ಇಲ್ಲಿ ಉಲ್ಲೇಖಾರ್ಹವಾಗಿದೆ. ಅವರು ವ್ಯಕ್ತಪಡಿಸಿದ ಅಭಿಪ್ರಾಯ ಏನೆಂದರೆ "ಯಾವುದೇ ಹಿಂಸಾಚಾರ ಧರ್ಮವಾಗಲಾರದು."

ಹಿಂಸಾಚಾರ ಸಮರ್ಥನೀಯವೇ ಅಲ್ಲ. ರಾಜಕೀಯ ಅಧಿಕಾರ ಉಳಿಸಿಕೊಳ್ಳಲು ನಡೆಸುವ ಹಿಂಸಾಚಾರ ಅಕ್ಷಮ್ಯವಾದುದು. ಬೊಮ್ಮಾಯಿಯವರು ಬಿಜೆಪಿ, ಆರೆಸ್ಸೆಸ್ ಕುಮ್ಮಕ್ಕಿನಿಂದ ಹಿಂಸೆಗೆ ಕುಮ್ಮಕ್ಕು ನೀಡುವುದು ಹಿಂದು ಧರ್ಮವಲ್ಲ. ಅದು ರಾಷ್ಟ್ರಕವಿ ಕುವೆಂಪುರವರ ಸಂದೇಶದಂತೆ ಸರ್ವ ಜನಾಂಗದ ಶಾಂತಿಯ ತೋಟವಾಗಿರಬೇಕು.

ರಾಜ್ಯದಲ್ಲಿ ಬೊಮ್ಮಾಯಿ ಸರ್ಕಾರ, ಕೇಂದ್ರದಲ್ಲಿ ಮೋದಿ ಸರ್ಕಾರ ಒಂದೇ ನಾಣ್ಯದ ಎರಡು ಮುಖಗಳು. ನಮ್ಮ ಜನಗಳಿಗೆ ಈ ಸರ್ಕಾರಗಳ ವಿಷಕಾರಿ ಸ್ವರೂಪ ಇನ್ನೂ ಅರ್ಥವಾಗಿರುವದು ವಿಷಾದದ ಸಂಗತಿ. ಅವರು ಸಮಾಜಕ್ಕೆ ವಿಷ ಉಣಿಸುತ್ತಾರೆ. ನಮ್ಮ ಯುವ ಜನರು ತಿಳಿದೋ ತಿಳಿಯದೋ ಆರೆಸ್ಸೆಸ್ ವಿಷವನ್ನು ಸೇವಿಸುತ್ತಾರೆ. ಸರ್ಕಾರದ ಆರ್ಥಿಕ, ಸಾಮಾಜಿಕ ವೈಫಲ್ಯ ಮರೆಯಾಗುತ್ತಿದೆ. ಬಡತನ ಕಿತ್ತು ತಿನ್ನುವಂತಾದರೂ ನಿರುದ್ಯೋಗ ವ್ಯಾಪಕವಾಗಿ ಹರಡಿಕೊಂಡರೂ ಅದನ್ನು ಕಾಣದಂತವರಾಗುತ್ತಾರೆ. ಮುಸ್ಲಿಂ ಮತ್ತು ಇತರ ಕೋಮಿನ ಯುವಕರೂ ಸಹ ಪ್ರಚೋದನೆಗೆ ಒಳಗಾಗುತ್ತಾರೆ. ದ್ವೇಷವನ್ನು ಕಣ್ಣಿಗೆ ಮೆತ್ತಿಕೊಂಡವರಂತೆ ವರ್ತಿಸುತ್ತಾರೆ. ಜನತೆಯ ಆಕ್ರೋಶದಿಂದ ಸರ್ಕಾರ ಪಾರಾಗುತ್ತಿದೆ. ಬೊಮ್ಮಾಯಿ ಸರ್ಕಾರಕ್ಕೆ ಬೆಲೆ ಏರಿಕೆ ತಡೆಗಟ್ಟಲು ಸಾಧ್ಯವಾಗಿಲ್ಲ. ಅಸಂಘಟಿತ ವಲಯದ ಕಾರ್ಮಿಕರಿಗೆ ನ್ಯಾಯಬದ್ಧವಾದ ವೇತನ ನೀಡುವಲ್ಲಿ ವಿಫಲವಾಗಿದೆ. ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡುವ ವಿಷಯದಲ್ಲಿ ಆಸಕ್ತಿ ಇಲ್ಲ. ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡಲಾಗುತ್ತಿಲ್ಲ. ದಲಿತರ, ಮಹಿಳೆಯರ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಯುತ್ತಿರುವುದನ್ನು ತಡೆಯಲು ಈ ಸರ್ಕಾರ ಮುಂದಾಗುತ್ತಿಲ್ಲ. ಇಂತಹ ಸರ್ಕಾರದ ಮುಖವಾಡ ಕಳಚಿಹಾಕಬೇಕಾಗಿದೆ. ಬಿಜೆಪಿಯಿಂದ ಜನತೆ ಇನ್ನು ಮುಂದಾದರೂ ಮೋಸ ಹೋಗಬಾರದು.



ದ.ಕ. ಜಿಲ್ಲೆಯಲ್ಲಿ ಹಲವೆಡೆ ಅಂಬೇಡ್ಕರ್ ಜಯಂತಿ

ವರದಿ: **ವಾ.ಉ.**

ಅಂಬೇಡ್ಕರ್ ಜಯಂತಿಯನ್ನು ದಲಿತ ಹಕ್ಕುಗಳ ಸಮಿತಿ ಘಟಕಗಳು ಇರುವಲ್ಲಿ ಎಲ್ಲೆಡೆಯೂ ಆಚರಿಸಬೇಕೆಂದು ಕಳೆದ ಕೆಲವು ವರ್ಷಗಳಿಂದ ಕರೆಕೊಡುತ್ತಾ ಬರಲಾಗಿದೆ. ಈ ಸಾರಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಪಕ್ಷದ ಎಲ್ಲಾ ವಲಯಗಳಲ್ಲೂ, ಡಿಎಚ್‌ಎಸ್ ಘಟಕಗಳಿರುವಲ್ಲಿಯೂ ಅಂಬೇಡ್ಕರ್ ಜಯಂತಿಯನ್ನು ಆಚರಿಸಿ, ಸಾಮಾಜಿಕ ಸಮಾನತೆಯ ಮಹತ್ವದ ಬಗ್ಗೆ ಪ್ರಚಾರ ಮಾಡಬೇಕೆಂದು ಕರೆ ನೀಡಿದೆ. ಅದರಂತೆ ಹತ್ತಾರೆಡೆ ಅಂಬೇಡ್ಕರ್ ಜಯಂತಿಯನ್ನು ದ.ಕ.ಜಿಲ್ಲೆಯಲ್ಲಿ ಆಚರಿಸಲಾಯಿತು. ಕುಲಶೇಖರ ಕೋಟಿಮುರದಲ್ಲಿ ಎಪ್ರಿಲ್ 15 ರಂದು ಕಾರ್ಯಕ್ರಮ ನಡೆದರೆ, ಉಳಿದೆಡೆ ಎಪ್ರಿಲ್ 14ರಂದೇ ಆಚರಿಸಲಾಯಿತು.

ಉರ್ವಸ್ಟೋರ್‌ನಲ್ಲಿ ಡಿಎಚ್‌ಎಸ್ ಮತ್ತು ಡಿವೈಎಫ್‌ಐ ಸ್ಥಳೀಯ ಘಟಕಗಳು ಜೊತೆಯಾಗಿ ಏರ್ಪಡಿಸಿದ ಕಾರ್ಯಕ್ರಮವನ್ನು ಡಿವೈಎಫ್‌ಐ ಘಟಕಾಧ್ಯಕ್ಷ ಪ್ರಶಾಂತ್ ಎಂ.ಬಿ. ಉದ್ಘಾಟಿಸಿದರು. ಡಿಎಚ್‌ಎಸ್ ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ರಘುವೀರ್, ಕಟ್ಟಡ ಕಾರ್ಮಿಕ ಸಂಘಟನೆಯ



ಮನೋಜ್ ಕುಲಾಲ್, ಸಿಪಿಐ(ಎಂ) ಶಾಖಾ ಕಾರ್ಯದರ್ಶಿ ಇಕ್ಬಾಲ್ ಉಪಸ್ಥಿತರಿದ್ದರು.

ವಾಮಂಜೂರಿನಲ್ಲಿ ಸಿಪಿಐ(ಎಂ) ಶಾಖೆ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಡಿಎಚ್‌ಎಸ್ ಮಾರ್ಗದರ್ಶಕ ಡಾ.ಕೃಷ್ಣಪ್ಪ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು, ಸಿಪಿಐ(ಎಂ) ಹಿರಿಯ ಮುಖಂಡ ಗಂಗಯ್ಯ ಅಮೀನ್, ಡಿವೈಎಫ್‌ಐನ ಮನೋಜ್ ವಾಮಂಜೂರು ಭಾಗವಹಿಸಿದ್ದರು.

ಕುಪ್ಪೆಪದವು ಸಿಐಟಿಯು ಕಚೇರಿಯಲ್ಲಿ ಸಿಪಿಐ(ಎಂ) ನಡೆಸಿದ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಗುರುಪುರ ವಲಯ ಮುಖಂಡರಾದ ಸದಾಶಿವ ದಾಸ್ ಮತ್ತು ವಸಂತಿ ಕುಪ್ಪೆಪದವು ಭಾಗವಹಿಸಿದ್ದರು.

ಬಜಾಲ್ ಪಕ್ಕಲಡ್ಕದಲ್ಲಿ ಅಲ್ಲಿನ ಡಿವೈಎಫ್‌ಐ ಘಟಕ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಡಿವೈಎಫ್‌ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ವ್ಯಾಯಾಮ ಶಾಲಾ ಶಿಕ್ಷಕರಾದ ಅಶೋಕ್ ಸಾಲ್ಯಾನ್, ಸ್ಥಳೀಯ ಗಣ್ಯರಾದ ನಾಗೇಶ್ ಶೆಟ್ಟಿ ಉಪಸ್ಥಿತರಿದ್ದರು.

ಎಯ್ಯಾಡಿ ಕೊಂಚಾಡಿಯಲ್ಲಿ ಅಲ್ಲಿನ ಸ್ಥಳೀಯ ಡಿಎಚ್‌ಎಸ್ ಘಟಕ ಸಾರ್ವಜನಿಕ ಸಭೆಯಾಗಿ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಸಿಪಿಐ(ಎಂ) ಮುಖಂಡ ಸುನಿಲ್ ಕುಮಾರ್ ಬಜಾಲ್, ಡಿಎಚ್‌ಎಸ್ ಮಂಗಳೂರು ನಗರಾಧ್ಯಕ್ಷ ರಾಧಾಕೃಷ್ಣ ಬೊಂಡಂತಿಲ, ಸ್ಥಳೀಯ ಘಟಕದ ಅಧ್ಯಕ್ಷ ಚಂದ್ರಹಾಸ್ ಕಾರ್ಯದರ್ಶಿ ಪ್ರವೀಣ್ ಕೊಂಚಾಡಿ, ಡಿವೈಎಫ್‌ಐ ಮಂಗಳೂರು ನಗರ ಮುಖಂಡರಾದ ನವೀನ್ ಕೊಂಚಾಡಿ ಭಾಗವಹಿಸಿದ್ದರು.

ಬೆಳ್ತಂಗಡಿ ಸಿಪಿಐ(ಎಂ) ತಾಲೂಕು ಸಮಿತಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಮುಖಂಡ ಹರಿದಾಸ್ ಎಸ್.ಎಂ, ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ರವಿಕಿರಣ ಪುಣಚ ಭಾಗವಹಿಸಿದ್ದರು.

ಮೂಡಬಿದ್ರೆ ವಲಯ ಡಿಎಚ್‌ಎಸ್ ಏರ್ಪಡಿಸಿದ ಕಾರ್ಯಕ್ರಮದಲ್ಲಿ ರಾಜ್ಯ ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರಾದ ಕೆ.ಮಹಾಂತೇಶ್ ಮಾತನಾಡಿದರು. ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸ್ಥಳೀಯ ಮುಖಂಡರಾದ ರಮಣಿ, ರಾಧಾ, ಡಿಎಚ್‌ಎಸ್ ದ.ಕ.ಜಿಲ್ಲಾ ಕಾರ್ಯದರ್ಶಿ ಗಿರಿಜಾ, ವಲಯ ಕಾರ್ಯದರ್ಶಿ ಕೃಷ್ಣಪ್ಪ ಕೊಣಾಜೆ ಭಾಗವಹಿಸಿದ್ದರು.

ಎಪ್ರಿಲ್ 15 ರಂದು ಕುಲಶೇಖರದ ಕೋಟಿಮುರದ ಕೊರಗ ಕಾಲನಿಯಲ್ಲಿ ಡಿಎಚ್‌ಎಸ್ ನಡೆಸಿದ ಕಾರ್ಯಕ್ರಮದಲ್ಲಿ ಆದಿವಾಸಿ ಹಕ್ಕುಗಳ ರಾಜ್ಯ ಸಹ ಸಂಚಾಲಕ ಡಾ.ಕೃಷ್ಣಪ್ಪ ಕೊಂಚಾಡಿ, ಡಿಎಚ್‌ಎಸ್ ಮಂಗಳೂರು ನಗರಾಧ್ಯಕ್ಷ ರಾಧಕೃಷ್ಣ ಬೊಂಡಂತಿಲ, ಸಿಪಿಐ(ಎಂ) ಮುಖಂಡರಾದ ಸುನಿಲ್ ಕುಮಾರ್ ಬಜಾಲ್, ಯೋಗೀಶ್ ಜಪ್ಪಿನಮೊಗರು ಭಾಗವಹಿಸಿದ್ದರು.

ಬೆಲೆ ಏರಿಕೆ ವಿರುದ್ಧ ಕುಂದಾಪುರದಲ್ಲಿ ವಾಹನ ಚಾಲಕರ ಪ್ರತಿಭಟನೆ:

ಡೀಸೆಲ್, ಪೆಟ್ರೋಲ್, ಗ್ಯಾಸ್ ಬೆಲೆ ಏರಿಕೆಯ ವಿರುದ್ಧ ಕುಂದಾಪುರ ತಾಲೂಕು ಆಟೋ ರಿಕ್ಷಾ ಮತ್ತು ವಾಹನ ಚಾಲಕರ ಸಂಘ (ಸಿಐಟಿಯು) ನೇತೃತ್ವದಲ್ಲಿ ಕುಂದಾಪುರ ಶಾಸ್ತ್ರಿ ವೃತ್ತದಲ್ಲಿ ಎಪ್ರಿಲ್ 20 ರಂದು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ತಾಲೂಕು ಸಮಿತಿ ಸಂಚಾಲಕ ಎಚ್.ನರಸಿಂಹ ಮಾತನಾಡಿ, ಬೆಲೆ ಏರಿಕೆಗೆ ಕೇಂದ್ರ ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ಕಾರಣವಲ್ಲದೆ ವಿರೋಧ ಪಕ್ಷಗಳಾಗಲೀ ರಶ್ಯಾ-ಉಕ್ರೇನ್ ಯುದ್ಧವಾಗಲೀ ಕಾರಣವಲ್ಲ ಎಂದು ಹೇಳಿದರು.

ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಕೂಡಾ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ರಿಕ್ಷಾ ಚಾಲಕರ ಮುಖಂಡ ಚಂದ್ರಶೇಖರ, ಸಂಘದ ಅಧ್ಯಕ್ಷ ಲಕ್ಷ್ಮಣ, ಕಾರ್ಯದರ್ಶಿ ರಾಜು ದೇವಾಡಿಗ ಉಪಸ್ಥಿತರಿದ್ದರು.

ಹುತಾತ್ಮರಾದ ತುಳುನಾಡಿನ ಸೂರ್ಯ ಭಾಸ್ಕರ ಕುಂಬಳೆ

ಎಳೆಯ ಪ್ರಾಯದಲ್ಲೇ ಎಡಪಂಥೀಯ ವಿಚಾರಧಾರೆಯನ್ನು ಮೈಗೂಡಿಸಿಕೊಂಡು ವಿದ್ಯಾರ್ಥಿ ಯುವಜನ ಚಳುವಳಿಯಲ್ಲಿ ಗುರುತಿಸಿಕೊಂಡ ಭಾಸ್ಕರ ಕುಂಬ್ಳೆಯವರು ಎಲ್ಲಾ ವಿಭಾಗದ ಜನತೆಯ ಪ್ರೀತಿ ವಿಶ್ವಾಸಗಳನ್ನು ಗಳಿಸಿದ್ದರು. ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ ಉತ್ತಮ ಕ್ರೀಡಾಪಟುವಾಗಿ ಆಕರ್ಷಕ ವ್ಯಕ್ತಿತ್ವದ ಭಾಸ್ಕರರವರು ಸಾವಿರಾರು ಯುವಜನತೆಯ ಸ್ಫೂರ್ತಿಯ ಚಿಲುಮೆಯಾಗಿದ್ದರು. ಇದನ್ನು ಸಹಿಸದ ಆರ್‌ಎಸ್‌ಎಸ್ ಗೂಂಡಾಗಳು ವ್ಯವಸ್ಥಿತ ಸಂಚು ನಡೆಸಿ ಭಾಸ್ಕರರವರನ್ನು ಮಂಗಳೂರಿನ ಎಕ್ಕೂರಿನ ಬಳಿಯಲ್ಲಿ ಬರ್ಬರವಾಗಿ ಕೊಲೆಗೈದರು. ಚಾಕು ಚೂರಿ ಸಂಸ್ಕೃತಿಯ ಮೂಲಕ ಕೊಲೆ ರಾಜಕೀಯ ನಡೆಸುವ ಆರ್‌ಎಸ್‌ಎಸ್ ಭಾಸ್ಕರರವರನ್ನು ದೈಹಿಕವಾಗಿ ಇಲ್ಲವಾಗಿಸಿದರು. ಆದರೆ ಅವರ ವಿಚಾರಧಾರೆಯನ್ನು ನಾಶ ಮಾಡಲು ಎಂದಿಗೂ ಸಾಧ್ಯವಿಲ್ಲ. ಗಡಿನಾಡ ಪ್ರದೇಶದಲ್ಲಿ ಸೌಹಾರ್ದತೆಗಾಗಿ ಪ್ರಾಣವನ್ನೇ ಸಮರ್ಪಿಸಿ ಹುತಾತ್ಮರಾದ ಮೊದಲ ಸಂಗಾತಿ ಭಾಸ್ಕರ ಕುಂಬ್ಳೆ ಎಂದು ಪ್ರಗತಿಪರ ಚಿಂತಕರೂ, ಹಾಗೂ ಭಾಸ್ಕರ ಕುಂಬಳೆಯವರ ಕಾಲೇಜ್ ಸಹಪಾಠಿಯಾದ ಡಾ. ಕ್ರಷ್ಣಪ್ಪ ಕೊಂಚಾಡಿಯವರು ಹೇಳಿದರು.

ಕೋಮುವಾದಿ ಪಡೆಗಳ ಕರಾಳ ಖಡ್ಗಕ್ಕೆ ಬಲಿಯಾದ ತುಳುನಾಡಿನ ಹೆಮ್ಮೆಯ ಪುತ್ರ, ಯುವಜನ ಚಳುವಳಿಯ ಧ್ರುವತಾರೆಯಾದ ಸಂಗಾತಿ ಭಾಸ್ಕರ ಕುಂಬಳೆಯವರ 25ನೇ ಹುತಾತ್ಮ ದಿನಾಚರಣೆಯ ಅಂಗವಾಗಿ ಜರುಗಿದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾ ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಡಿವೈಎಫ್‌ಐ ದ.ಕ. ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ರವರು ಮಾತನಾಡುತ್ತಾ, ಕಾಸರಗೋಡು ಜಿಲ್ಲೆಯಲ್ಲಿ ಯುವಜನ ಚಳುವಳಿಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ ಭಾಸ್ಕರ ಕುಂಬ್ಳೆಯವರು, ಅವಿನಾವಭಾವ ಸಂಬಂಧ ಹೊಂದಿದ ಮಂಗಳೂರಿನಲ್ಲಿಯೂ ಚಳುವಳಿಯ ಮುನ್ನಡೆಗೆ ಭಾರೀ ಕನಸು ಕಂಡವರು.ಮಾತ್ರವಲ್ಲ ಮಂಗಳೂರನ್ನು ಸೌಹಾರ್ದತಾ ತಾಣವನ್ನಾಗಿಸಲು ಅವಿಶ್ರಾಂತ ವಾಗಿ ಶ್ರಮಿಸಿದ್ದರು. ಕೋಮುವಾದಿ ಶಕ್ತಿಗಳ ಪ್ರಯೋಗ ಶಾಲೆಯಂತಾದ ಮಂಗಳೂರನಲ್ಲಿ ಮತ್ತೆ ಸೌಹಾರ್ದತಾ ಪರಂಪರೆಯನ್ನು ಉಳಿಸಿ ಬೆಳೆಸುವುದೇ ಭಾಸ್ಕರ ಕುಂಬಳೆಯವರಿಗೆ ನೀಡುವ ಗೌರವ ಸಮರ್ಪಣೆ ಎಂದು ಹೇಳಿದರು.

ಪ್ರಾರಂಭದಲ್ಲಿ ಸುನಿಲ್ ಕುಮಾರ್ ಬಜಾಲ್ ರವರು ಸ್ವಾಗತಿಸಿದರೆ, ಕೊನೆಯಲ್ಲಿ ಅಶೋಕ್ ಶ್ರೀಯಾನ್ ರವರು ವಂದಿಸಿದರು.

ಆಳುವ ವರ್ಗದ ಆಕ್ರಮಣಕಾರಿ ನೀತಿಗಳನ್ನು ಸೋಲಿಸಲು ಮೇ ದಿನಾಚರಣೆ ಕಾರ್ಮಿಕ ವರ್ಗದ ಅಸ್ತ್ರವಾಗಬೇಕು

ನವ ಉದಾರೀಕರಣ ನೀತಿಗಳನ್ನು ಅತ್ಯಂತ ವೇಗವಾಗಿ ಜಾರಿಗೊಳಿಸುತ್ತಿರುವ ಕೇಂದ್ರ ಸರಕಾರವು ಜನತೆಯ ಹಿತಾಸಕ್ತಿಗಳನ್ನು ಕಾಪಾಡುವ ಬದಲು ಕಾರ್ಪೊರೇಟ್ ಕಂಪೆನಿಗಳ ಏಳಿಗೆಗಾಗಿ ಶ್ರಮಿಸುತ್ತಿದೆ.ತನ್ನ ಜನವಿರೋಧಿ ನೀತಿಗಳಿಂದಾಗಿ ದೇಶದ ಅರ್ಥ ವ್ಯವಸ್ಥೆಯನ್ನೇ ಬುಡಮೇಲುಗೊಳಿಸಿದ ಕೇಂದ್ರ ಸರಕಾರ ಕಾರ್ಮಿಕ ಕಾನೂನುಗಳನ್ನು ಬಂಡವಾಳಶಾಹಿಗಳ ಪರವಾಗಿ ತಿದ್ದುಪಡಿ ಮಾಡುವ ಮೂಲಕ ಕಾರ್ಮಿಕ ವರ್ಗದ ಬದುಕನ್ನೇ ನಾಶಗೊಳಿಸಿದೆ.ಇಂತಹ ಅಪಾಯಕಾರಿ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಉಸಿರಾದ ಮೇ ದಿನಾಚರಣೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸುವ ಮೂಲಕ ಆಳುವ ವರ್ಗದ ಆಕ್ರಮಣಕಾರಿ ನೀತಿಗಳನ್ನು ಸೋಲಿಸಬೇಕೆಂದು ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಜಿಲ್ಲೆಯ ಕಾರ್ಮಿಕ ವರ್ಗಕ್ಕೆ ಕರೆ ನೀಡಿದರು.



ವಿಶ್ವ ಕಾರ್ಮಿಕರ ದಿನವಾದ ಮೇ 1 ನ್ನು ಮಂಗಳೂರು ನಗರದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಸಲು ಆಯೋಜಿಸಲಾದ ವಿವಿಧ ಕಾರ್ಮಿಕ ಸಂಘಟನೆಗಳ ಮಧ್ಯಮ ವರ್ಗದ ನೌಕರರ ಸಂಘಟನೆಗಳ ಹಾಗೂ ಹಿತೈಷಿಗಳನ್ನೊಳಗೊಂಡ ಮೇ ದಿನ ಆಚರಣಾ ಸಮಿತಿ ರಚನಾ ಸಭೆಯಲ್ಲಿ ಭಾಗವಹಿಸುತ್ತಾ ಈ ಮಾತುಗಳನ್ನು ಹೇಳಿದರು.

ಬ್ಯಾಂಕ್ ಅಧಿಕಾರಿಗಳ ಸಂಘಟನೆ ಯ ರಾಜ್ಯ ನಾಯಕರಾದ ರಾಘವ ಕೆ.ಯವರು ಮಾತನಾಡುತ್ತಾ, ದುಡಿಯುವ ವರ್ಗದ ದಿನವನ್ನು ಕಾರ್ಮಿಕರನ್ನು ಮದ್ಯೆ ವ್ಯಾಪಕ ಪ್ರಚಾರ ನಡೆಸಿ ಸರಕಾರದ ನೀತಿಗಳನ್ನು ಹಿಮ್ಮೆಟ್ಟಿಸಿ ಕಾರ್ಮಿಕರ ಐಕ್ಯತೆಯನ್ನು ಪ್ರದರ್ಶಿಸಲು ಸದಾವಕಾಶವಾಗಿದೆ ಎಂದು ಹೇಳಿದರು

ಸಭೆಯಲ್ಲಿ ಭಾಗವಹಿಸಿದ ಪ್ರಗತಿಪರ ಚಿಂತಕರಾದ ಡಾ.ಕ್ರಷ್ಣಪ್ಪ ಕೊಂಚಾಡಿ, ಬ್ಯಾಂಕ್ ನೌಕರರ ಮುಖಂಡರಾದ ಸುರೇಶ್ ಹೆಗ್ಡೆ, ವಿಮಾ ನೌಕರರ ಸಂಘದ ನಾಯಕರಾದ ಬಿ.ಎನ್.ದೇವಾಡಿಗ, ಕಟ್ಟಡ ಕಾರ್ಮಿಕರ ಮುಖಂಡರಾದ ರವಿಚಂದ್ರ ಕೊಂಚಾಡಿ, ಹಮಾಲಿ ಕಾರ್ಮಿಕರ ಮುಖಂಡರಾದ ವಿಲ್ಲಿ ವಿಲ್ಸನ್, ಬೀಡಿ ಕಾರ್ಮಿಕರ ಮುಖಂಡರಾದ ಭಾರತಿ ಬೋಳಾರ, ಡಿವೈಎಫ್‌ಐ ನಾಯಕರಾದ ನವೀನ್ ಕೊಂಚಾಡಿ ಮುಂತಾದವರು ಮಾತನಾಡಿ ಮೇ ದಿನಾಚರಣೆಯನ್ನು ಯಶಸ್ವಿಗೊಳಿಸಲು ಉತ್ತಮ ಸಲಹೆ ಸೂಚನೆಗಳನ್ನು ನೀಡಿದರು. ಬಳಿಕ ಮೇ ದಿನ ಆಚರಣಾ ಸಮಿತಿಯನ್ನು ರಚಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, 8 ಗಂಟೆಯ ದುಡಿಮೆಗಾಗಿ ಧೀರೋದತ್ತ ಹೋರಾಟ ನಡೆದು ತ್ಯಾಗ ಬಲಿದಾನಗಳ ಪರಂಪರೆ ಹೊಂದಿರುವ ಮೇ ದಿನಾಚರಣೆಯನ್ನು ಇಲ್ಲವಾಗಿಸಲು ಬಂಡವಾಳಶಾಹಿಗಳು ಪಿತೂರಿ ನಡೆಸಿ ಮತ್ತೆ ಕಾರ್ಮಿಕರನ್ನು ಜೀತದಾಳುಗಳನ್ನಾಗಿ ದುಡಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ ಎಂದು ಹೇಳಿದರು.

ಪ್ರಾರಂಭದಲ್ಲಿ ಸಿಐಟಿಯು ಮಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಸ್ವಾಗತಿಸಿದರೆ, ಕೊನೆಯಲ್ಲಿ ಸಿಐಟಿಯು ಮುಖಂಡರಾದ ಅಶೋಕ್ ಸಾಲ್ಯಾನ್ ರವರು ವಂದಿಸಿದರು.

ಶೇ. 40 ಕಮಿಷನ್ ಭ್ರಷ್ಟಾಚಾರ, ಬಿಟ್ ಕಾಯಿನ್ ಲೂಟಿಯನ್ನು ನ್ಯಾಯಾಂಗ ತನಿಖೆಗೊಳಪಡಿಸಿ ಇಲ್ಲವೇ ತೊಲಗಿ



ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ಆಡಳಿತದಲ್ಲಿ ಭ್ರಷ್ಟಾಚಾರದ ಪ್ರಮಾಣ ಮಿತಿ ಮೀರಿದ್ದು, ಸರ್ಕಾರಿ ಇಲಾಖೆಯ ಎಲ್ಲಕಡೆಗಳಲ್ಲಿ ವ್ಯಾಪಿಸಿದೆ. ಈ ನಡುವೆ ಶೇ. 40 ಕಮಿಷನ್ ಭ್ರಷ್ಟಾಚಾರ ಮತ್ತು ಬಿಟ್ ಕಾಯಿನ್ ಲೂಟಿ ಅವ್ಯವಹಾರ ಭಾರೀ ಸದ್ದು ಮಾಡುತ್ತಿದೆ. ಇದರಲ್ಲಿ ನೇರವಾಗಿ ಆಡಳಿತ ಪಕ್ಷದವರೇ ಭಾಗಿಯಾಗಿರುವುದು ಒಂದೊಂದಾಗಿ ಬೆಳಕಿಗೆ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಏಳು ಪಕ್ಷಗಳ ಜಂಟಿ ಪತ್ರಿಗೋಷ್ಠಿಯನ್ನು ನಡೆಸಿ ಶೇ. 40 ಕಮಿಷನ್ ಭ್ರಷ್ಟಾಚಾರ, ಬಿಟ್ ಕಾಯಿನ್ ಲೂಟಿಯನ್ನು ನ್ಯಾಯಾಂಗ ತನಿಖೆಗೊಳಪಡಿಸಿ ಇಲ್ಲವೇ ತೊಲಗಿ? ಎಡ ಮತ್ತು ಪ್ರಜಾಸತ್ತಾತ್ಮಕ ಏಳು ಪಕ್ಷಗಳ ಒತ್ತಾಯಸಿವೆ.

ನಗರದ ಪ್ರೆಸ್ ಕ್ಲಬ್‌ನಲ್ಲಿ ನಡೆದ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಯು ಬಸವರಾಜ ಅವರು ಪ್ರತಿಯೊಂದು ಗುತ್ತಿಗೆ ಕೆಲಸದಲ್ಲಿ ರಾಜ್ಯ ಸರಕಾರದ ಸಚಿವರು, ಶಾಸಕರು, ಅಧಿಕಾರಿಗಳು, ಒಟ್ಟು ಕಾಮಗಾರಿಯ ಶೇ. 40ರಷ್ಟು ಕಮಿಷನ್ ಪಡೆಯುತ್ತಿರುವುದಾಗಿ ಮತ್ತು ಇದರಿಂದ ಕಾಮಗಾರಿ ನಿರ್ವಹಣೆಗೆ, ಗುತ್ತಿಗೆದಾರರಿಗೆ ತೀವ್ರ ತೊಂದರೆಯಾಗಿದೆಯೆಂದು, ಇದನ್ನು ತಡೆಯಲು ಕ್ರಮವಹಿಸಬೇಕೆಂದು ಸ್ವತಃ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು ದೇಶದ ಪ್ರಧಾನ ಮಂತ್ರಿಗಳಿಗೆ ಕಳೆದ ಐದಾರು ತಿಂಗಳುಗಳ ಹಿಂದೆಯೇ ಬಹಿರಂಗ ಪತ್ರ ಬರೆದು ಒತ್ತಾಯಿಸಿದ್ದಾರೆ. ಆದರೆ, ಇಂತಹ ಗಂಭೀರ ವಿಚಾರವನ್ನು ಗಣನೇಗೆ ತೆಗೆದುಕೊಳ್ಳದಿರುವುದು, ಈಗ ಬೆಳಕಿಗೆ ಬರುತ್ತಿರುವ ಪ್ರಕರಣಗಳು ನೇರವಾಗಿ ಆಡಳಿತ ಪಕ್ಷದವರೇ ಶಾಮೀಲಾಗಿರುವುದು ಸಾಬೀತಾಗುತ್ತಿದೆ ಎಂದು ಹೇಳಿದರು.

ಬೆಳಗಾವಿಯ ಬಿಜೆಪಿ ಕಾರ್ಯಕರ್ತ ಹಾಗೂ ಗುತ್ತಿಗೆದಾರ ಸಂತೋಷ ಪಾಟೀಲ್ ಗುತ್ತಿಗೆ ಕಾಮಗಾರಿಯ ಶೇ. 40 ಕಮಿಷನ್ ಒತ್ತಡದಿಂದ ಉಂಟಾದ ಸಾಲದ ಬಾಧೆಯೇ ಡೆತ್‌ನೋಟ್ ಬರೆದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ಈ ಪ್ರಕರಣದ ಪ್ರಮುಖ ಆರೋಪಿ ಕೆ.ಎಸ್. ಈಶ್ವರಪ್ಪ ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಿದ್ದಾರೆ. ಇದರ ನಂತರ ಗೋಶಾಲೆಗಳಿಗೆ ಮೇವು ಒದಗಿಸುವ ಗುತ್ತಿಗೆದಾರರು ಮತ್ತು ಮಠಾಧೀಶರುಗಳು ಮಠಗಳಿಗೆ ನೀಡುವ ಅನುದಾನದಲ್ಲೂ ಈ ಕಮಿಷನ್ ವ್ಯವಹಾರವು ದಟ್ಟವಾಗಿರುವುದನ್ನು ಬಹಿರಂಗಪಡಿಸಿದ್ದಾರೆ ಎಂದು ವಿವರಿಸಿದರು.

ಭಾರತ ಕಮ್ಯೂನಿಸ್ಟ್ ಪಕ್ಷ–ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್ ಮಾತನಾಡಿ, ದಶ ಸಾವಿರ ಕೋಟಿ ರೂ. ಮೌಲ್ಯದ ಬಿಟ್ ಕಾಯಿನ್ ಹಣಕಾಸು ಸಂಸ್ಥೆಗಳ ಸರ್ವರ್‌ಗಳ ಹ್ಯಾಕಿಂಗ್ ಹಗರಣದಲ್ಲಿ ಪಾಲ್ಗೊಂಡ ಆರೋಪಿಯು, ರಾಜ್ಯ ಸರಕಾರದ ಇಲಾಖೆಗಳು ಮತ್ತು ಸಂಸ್ಥೆಗಳ ಸರ್ವರ್‌ಗಳಿಗೆ ಕನ್ನ ಹಾಕಿ ಅಪಾರ ಪ್ರಮಾಣದ ಹಣವನ್ನು ಲಪಟಾಯಿಸಿರುವುದು ಮತ್ತು ಈತನ ಜೊತೆ ರಾಜ್ಯದ ಕೆಲ ಪ್ರಭಾವಿ ರಾಜಕಾರಣಿಗಳು, ಹಿರಿಯ ಅಧಿಕಾರಿಗಳು ಕೈ ಜೋಡಿಸಿ ಪಾಲು ಪಡೆದಿರುವುದು ಈಗಾಗಲೇ ಬಯಲಾಗಿದೆ. ಜನಾಧನ ಖಾತೆಯೊಂದರಿಂದಲೇ ಸುಮಾರು 6,000 ಕೋಟಿ ರೂ. ಲಪಟಾಯಿಸಲಾಗಿದೆಯೆನ್ನಲಾಗಿದೆ.

ಇದೇ ಭ್ರಷ್ಟತೆಯ ದುರಾಡಳಿತವನ್ನು ರಾಜ್ಯ ಸರಕಾರದ ವಿವಿಧ ಇಲಾಖೆಗಳು ಮತ್ತು ಅಭಿವೃದ್ಧಿ ನಿಗಮಗಳಲ್ಲಿಯೂ ವ್ಯಾಪಕವಾಗಿ ಕಾಣಬಹುದಾಗಿದೆ. ಇವುಗಳ ಫಲಾನುಭವಿಗಳು ನಿಜವಾದ ಜನತೆಯಾಗದೇ, ಬಹುತೇಕ ಶಾಸಕರುಗಳ ಹಿಂಬಾಲಕರು ಮತ್ತು ಹಣ ಅಥವಾ ದೊಡ್ಡ ಪ್ರಮಾಣದ ಲಂಚ ನೀಡುವವರಾಗಿದ್ದಾರೆ. ನಿಜ ಫಲಾನುಭವಿಗಳು ಶಾಸಕರುಗಳ ಕೃಪೆಯಿಲ್ಲದೇ, ಲಂಚ ನೀಡಲಾಗದೇ ಕಛೇರಿಗಳ ಸುತ್ತ ಗಿರಕಿ ಹೊಡೆದು ಬೇಸ್ತು ಬೀಳುತ್ತಿದ್ದಾರೆ ಎಂದರು.

ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ–ಆರ್‌ಪಿಐ ರಾಜ್ಯ ಅಧ್ಯಕ್ಷ ಮೋಹನ್ ರಾಜ್ ಮಾತನಾಡಿ, ಇತ್ತೀಚೆಗೆ ಗಂಗಾ ಕಲ್ಯಾಣ ಯೋಜನೆಯಲ್ಲಿನ ಸಾವಿರಾರು ಕೋಟಿ ರೂ.ಗಳ ಭಾರಿ ಪ್ರಮಾಣದ ಅವ್ಯವಹಾರ ಮತ್ತು ಭ್ರಷ್ಟಾಚಾರವನ್ನು ಸರಕಾರ ರಚಿಸಿದ ಸದನ ಸಮಿತಿಯೇ ಬಹಿರಂಗ ಪಡಿಸಿದೆ. ಆಸ್ತಿ–ಪಾಸ್ತಿಗಳ ವರ್ಗಾವಣೆ ಮತ್ತು ಪಾಲು ವಿಭಾಗದ ಸಂದರ್ಭಗಳಲ್ಲಿಯೂ, ಭೂಮಿಗಳ ಸರ್ವೇ ಮಾಡಿಸುವಾಗಲೂ, ರೈತರೂ ಸೇರಿದಂತೆ ಎಲ್ಲ ನಾಗರೀಕರು ತೀವ್ರ ಆಕ್ರೋಶಗೊಂಡಿದ್ದಾರೆ. ಕಂದಾಯ ಇಲಾಖೆಯು ಗಬ್ಬೆದ್ದು ನಾರುತ್ತಿದೆ. ಪೊಲೀಸ್ ಇಲಾಖೆಯು ಸೇರಿದಂತೆ ಇತರೆಲ್ಲಾ ಇಲಾಖೆಗಳು ಇದರಿಂದ ಹೊರತಲ್ಲ ಎಂದು ಹೇಳಿದರು.

ಸ್ವರಾಜ್ ಇಂಡಿಯಾ ರಾಜ್ಯ ಅಧ್ಯಕ್ಷ ಚಾಮರಸ ಮಾಲೀ ಪಾಟೀಲ ಮಾತನಾಡಿ, ವೃದ್ಧಾಪ್ಯ, ವಿಧವಾ, ಅಂಗವಿಕಲರ ಮತ್ತು ದೇವದಾಸಿ ಮುಂತಾದ ದುರ್ಬಲರಿಗೆ ನೀಡುವ ಮಾಸಿಕ ಪಿಂಚಣಿಗಳಲ್ಲೂ ಭ್ರಷ್ಟತೆಯ ಮುಖಕ್ಕೆ ರಾಚುತಿದೆ. ಈ ಎಲ್ಲವೂ ದೇಶದ ಮುಂದೆ ರಾಜ್ಯವನ್ನು ತಲೆ ತಗ್ಗಿಸುವಂತೆ ಮಾಡಿವೆ. ಭ್ರಷ್ಟಾಚಾರದಲ್ಲಿ ರಾಜ್ಯವನ್ನು ಪ್ರಥಮ ಸ್ಥಾನಕ್ಕೆ ದೂಡಿವೆ. ಈ ಎಲ್ಲಾ ಅನುಚಿತ ಬೆಳವಣಿಗೆಗಳಿಗೆ ಕಾರಣವಾದ ರಾಜ್ಯ ಸರಕಾರದ ದುರ್ನಡೆಗಳನ್ನು ನಾವು ಬಲವಾಗಿ ಖಂಡಿಸುತ್ತೇವೆ ಎಂದರು.

ಕರ್ನಾಟಕ ಸರಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಸ್ವತಂತ್ರ ನ್ಯಾಯಾಂಗ ತನಿಖೆಗೊಳಪಡಿಸಿ ನಿಯಂತ್ರಿಸಲು ಕ್ರಮವಹಿಸಬೇಕೆಂದು ಒತ್ತಾಯವನ್ನು ರಾಜ್ಯದ ಜನತೆ, ರಾಜಕೀಯ ಶಕ್ತಿಗಳು ನಿರಂತರವಾಗಿ ಮಾಡುತ್ತಿದ್ದರೂ, ಆ ಕುರಿತು ಏನೊಂದು ಗಂಭೀರ ಕ್ರಮವಹಿಸದೇ ಮುಂದುವರೆಯುತ್ತಿರುವುದು ತೀವ್ರ ನಾಚಿಕೆ ಗೇಡಿನ ವಿಚಾರವಾಗಿದೆ ಎಂದು ಮುಖಂಡರು ತಿಳಿಸಿದರು.

ಆದ್ದರಿಂದ, ಈ ಕೂಡಲೇ ಸದರಿ ಈ ಎಲ್ಲ ಭ್ರಷ್ಟಾಚಾರದ ವಿಚಾರಗಳನ್ನು ಉನ್ನತ ನ್ಯಾಯಾಂಗದ ಸುಪರ್ಧಿಯಲ್ಲಿ ಸ್ವತಂತ್ರ ನ್ಯಾಯಾಂಗದ ತನಿಖೆಗೆ ಒಳಪಡಿಸಬೇಕು. ಇಲ್ಲವೇ ಈ ಎಲ್ಲದಕ್ಕೂ ತಮ್ಮದೇ ಸರಕಾರ ಮತ್ತು ಮಂತ್ರಿಮಂಡಲವೇ ನೇರ ಹೊಣೆಗಾರನಾಗಿರುವುದರಿಂದ ತಕ್ಷಣವೇ ರಾಜೀನಾಮೆ ನೀಡಿ ಜನರಿಂದ ಮರಳಿ ಆದೇಶ ಪಡೆಯಲು ಚುನಾವಣೆಗೆ ಮುಂದಾಗಬೇಕೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಏಳು ಪಕ್ಷಗಳ ಮುಖಂಡರು ತಿಳಿಸಿದರು.

ಗೋಷ್ಠಿಯಲ್ಲಿ ಸೋಷಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್), ಎಸ್‌ಯುಸಿಐ(ಸಿ), ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ, ಲೆನಿನ್‌ವಾದಿ)–ಲಿಬರೇಷನ್, ಸಿಪಿಐ(ಎಂಎಲ್)–ಲಿಬರೇಷನ್, ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್, ಎಐಎಫ್‌ಬಿ ಪಕ್ಷಗಳನ್ನು ಪ್ರತಿನಿಧಿಸಿ ರಾಜ್ಯ ಮುಖಂಡರು ಮಾತನಾಡಿದರು.

ಗುಬ್ಬಿ ತಾಲೂಕಿನ ದಲಿತ ಯುವಕರಿಬ್ಬರ ಭೀಕರ ಕೊಲೆ – ಸಿಪಿಐಎಂ ಖಂಡನೆ



ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಪೆದ್ದ ಹಳ್ಳಿಯಲ್ಲಿ ಇಬ್ಬರು ದಲಿತ ಯುವಕರ ಬರ್ಬರ ಹತ್ಯೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಕೂಡಲೇ ಅಪರಾಧಿಗಳನ್ನು ಬಂಧಿಸಿ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳುವಂತೆ ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ.

ಯುವಕರು ತಪ್ಪು ಮಾಡಿದ್ದಾರೆಂಬ ಕಾರಣ ನೀಡಿ, ಕೊಲೆಗಳ ಸಮರ್ಥನೆಗೆ ಮುಂದಾಗುವುದನ್ನು ಒಪ್ಪಲಾಗದು.

ಭೀಕರ ಕೊಲೆಯ ಪರಿಸ್ಥಿತಿಯನ್ನು ಗಮನಿಸಿದರೆ ಅದರ ಹಿಂದೆ ವ್ಯವಸ್ಥಿತ ಸಂಚು ಮತ್ತು ತಂಡ ಇರುವುದು ಕಂಡು ಬರುತ್ತದೆ. ಸಂಚನ್ನು ಭೇಧಿಸಿ ರಾಜ್ಯದ ಜನತೆಗೆ ನಿಜವೇನೆಂದು ತಿಳಿಸಲು ರಾಜ್ಯ ಸರಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ಕೊಲೆಯಾದ ಕುಟುಂಬಗಳಿಗೆ ತಕ್ಷಣವೇ ಅಗತ್ಯ ಪರಿಹಾರವನ್ನು ಘೋಷಿಸುವಂತೆ ಸಿಪಿಐಎಂ ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ.

ಸೌಹಾರ್ದ ಸಂಸ್ಕೃತಿ ಸಮಾವೇಶ
ಸೌಹಾರ್ದತೆಗಾಗಿ ಧರ್ಮಗುರುಗಳ ಸಂದೇಶ

05.05.2022 ಗುರುವಾರ ದಂದು ಡಾ. ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು ನಲ್ಲಿ ಸಂಜೆ 4.30 ಕ್ಕೆ.

ನಮ್ಮ ದೇಶಕ್ಕೆ ಬಹುದೊಡ್ಡ ಸೌಹಾರ್ದ ಪರಂಪರೆಯಿದೆ. ಬಹು ಸಂಸ್ಕೃತಿ, ಬಹು ಭಾಷೆ ಮತ್ತು ಬಹು ಧರ್ಮಗಳ ನಮ್ಮ ದೇಶದ ಎಲ್ಲರೂ ಪರಸ್ಪರ ಸೌಹಾರ್ದದಿಂದ ಬದುಕುತ್ತ ಆರೋಗ್ಯಕರ ಸಮಾಜ ನಿರ್ಮಾಣವನ್ನು ಆದ್ಯತೆಯಾಗಿಸಲು ಅನೇಕರು ಶ್ರಮಿಸಿದ್ದಾರೆ. ಜಾತಿ, ಧರ್ಮಗಳನ್ನು ಮೀರಿ ಒಟ್ಟಾಗಿ ಬದುಕುತ್ತ ಬಂದ ಸೋದರತ್ವದ ಮೌಲ್ಯವನ್ನು ಪ್ರತಿನಿಧಿಸಿದ್ದಾರೆ. ವಿವಿಧ ಹಬ್ಬಾದಿ ಆಚರಣೆಗಳನ್ನು ಒಟ್ಟಾಗಿ ಮಾಡಿ ಸಂಭ್ರಮಿಸಿದ ಸಂಕೇತಪೂರ್ಣ ನಿದರ್ಶನಗಳಿಗೂ ನಮ್ಮ ದೇಶವು ಉತ್ತಮ ಸಾಕ್ಷಿಸ್ವರೂಪಿಯಾಗಿದೆ. ಬಹುತ್ವದ ಬದುಕಿನ ಮಾದರಿಯಾಗಿ ವಿಶ್ವಕ್ಕೆ ದಾರಿತೋರಿಸಿದೆ. ಕರ್ನಾಟಕವು ಇಂತಹ ಸೌಹಾರ್ದ ಪರಂಪರೆಯನ್ನು ಉನ್ನತ ಮಟ್ಟದಲ್ಲಿ ಪಾಲಿಸಿಕೊಂಡು ಬಂದ ಆದರ್ಶ ರಾಜ್ಯವಾಗಿದೆ. ವಚನಕಾರರು, ದಾಸರು, ಚಿಂತಕರು, ಸೂಫಿ ಸಂತರು, ತತ್ವಪದಕಾರರು, ಕವಿಗಳು, ಸಮಾನತೆ ಮತ್ತು ಸಹಿಷ್ಣುತೆಯ ಆದರ್ಶ ಮಾದರಿಗಳನ್ನು ಬಿತ್ತಿ ಬೆಳೆದಿದ್ದಾರೆ. ಆದರೆ ಇತ್ತೀಚಿನ ಕೆಲವು ಅಹಿತಕರ ಘಟನೆಗಳು ಕರ್ನಾಟಕದ ಸೌಹಾರ್ದ ಸಂಸ್ಕೃತಿಗೆ ಧಕ್ಕೆ ತರುತ್ತಿವೆ. ದ್ವೇಷದ ದಾಹವನ್ನು ಹೆಚ್ಚಿಸುತ್ತಿವೆ. ಮಾನವೀಯ ಮೌಲ್ಯಗಳನ್ನು ಮಣ್ಣು ಮಾಡುತ್ತಿವೆ. ಆದರೂ ಕರ್ನಾಟಕದ ಮಣ್ಣಿನಲ್ಲಿ ಸೌಹಾರ್ದದ ಬೆಳೆ ಹಾಳಾಗುವುದಿಲ್ಲ. ಬದಲಾಗಿ ಬೆಂಕಿಯನ್ನು ಬೆಳಕಾಗಿಸುತ್ತದೆ. ಕೆಂಡವನ್ನೂ ಕರುಳಾಗಿಸುತ್ತದೆ.

ಇಂಥ ಪರಂಪರೆಯ ಭರವಸೆಯನ್ನು ಬಿತ್ತರಿಸುವುದು ಎಲ್ಲ ಮಾನವೀಯ ಮನಸ್ಸುಗಳ ನೈತಿಕ ಹೊಣೆಯಾಗಿದೆ. ವಿಶೇಷವಾಗಿ ಧರ್ಮಗುರುಗಳ ಪಾತ್ರ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ಪರ–ವಿರೋಧಗಳನ್ನು ಮೀರಿದ ಸೌಹಾರ್ದ ಸಂಸ್ಕೃತಿ ಸಮಾವೇಶವನ್ನು ಆಯೋಜಿಸಲಾಗಿದೆ. ಅನೇಕ ಧರ್ಮಗುರುಗಳು ಸೌಹಾರ್ದ ಸಂದೇಶವನ್ನು ನೀಡಲಿದ್ದಾರೆ.

ಮೇ 5 ರ ಸಂಜೆ 4 ಗಂಟೆಗೆ ಸೌಹಾರ್ದ ಸಂಸ್ಕೃತಿ ಸಮಾವೇಶ ದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಸೌಹಾರ್ದ ಕರ್ನಾಟಕ ವು ಮನವಿ ಮಾಡಿದೆ. ಈ ಸಮಾವೇಶವನ್ನು ಸೌಹಾರ್ದ ಕರ್ನಾಟಕ, ವಿವಿಧ ದಲಿತ, ರೈತ ಕೂಲಿಕಾರ, ಕಾರ್ಮಿಕ, ಮಹಿಳಾ, ವಿದ್ಯಾರ್ಥಿ– ಯುಜನ, ಅಲ್ಪಸಂಖ್ಯಾತ, ಸಮುದಾಯ, ಬಂಡಾಯ, ಮುಂತಾದ ಸಂಘಟನೆಗಳು ವ್ಯವಸ್ಥೆಗೊಳಿಸಿವೆ.

ಸಂಚಾಲಕ ಸಮಿತಿ:

ಪ್ರೊ. ಬರಗೂರು ರಾಮಚಂದ್ರಪ್ಪ, ಮಾವಳ್ಳಿ ಶಂಕರ್, ಮೋಹನ್‌ರಾಜ್, ಆಶಾ, ಡಾ. ಎಸ್.ವೈ. ಗುರುಶಾಂತ್, ಬಿ.ಎಂ. ಹನೀಫ್, ಎ. ಜ್ಯೋತಿ, ಮಲ್ಲಿಗೆ, ಪರಿಕೊ ಪ್ರಭು.

ಸಂಘಪರಿವಾರ ಮತ್ತು ಧರ್ಮ

ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ

ಹಿಂದುತ್ವದ ರಾಷ್ಟ್ರೀಯವಾದವು ಧಾರ್ಮಿಕ ರಾಷ್ಟ್ರೀಯವಾದವಾಗಿ ರೂಪ ಪಡೆಯುತ್ತದೆ. ಬ್ರಾಹ್ಮಣ ಧರ್ಮವು ಪ್ರತಿಪಾದಿಸುವ ಜಾತಿಮೂಲದ ಮೇಲು–ಕೀಳಿನ ತಾರತಮ್ಯ, ಜಾತಿ ಆಧಾರಿತ ಸಾಮಾಜಿಕ ಶ್ರಮವಿಭಜನೆ, ಪಿತೃಪ್ರಧಾನ ಆಳ್ವಿಕೆಯ ರಾಜಕೀಯ ಸಂಬಂಧಗಳು, ಬಂಡವಾಳವಾದವು ಸಮರ್ಥಿಸುವ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ, ಶೋಷಣಾಯುಕ್ತ ಶ್ರಮ ಸಂಬಂಧಗಳ ಧಾರ್ಮಿಕ ರೂಪಗಳಾಗಿ ಕಾಣಿಸುತ್ತವೆ. ಧರ್ಮ, ಸಂಸ್ಕೃತಿ, ನೈತಿಕತೆ, ನ್ಯಾಯ ನಿಷ್ಕರ್ಷೆ, ಸಾಮಾಜಿಕ ವರ್ತನೆ, ರಾಜ್ಯಾಡಳಿತ, ಮತ್ತು ರಾಜಕೀಯಗಳು ಬೇರ್ಪಡಿಸಲಾಗದಷ್ಟು ಒಂದರೊಳಗೆ ಮತ್ತೊಂದು ಬೆರೆತುಕೊಂಡು 'ಹಿಂದುತ್ವದ' ರಾಜಕೀಯವು ಯಾವ ಹಣೆಪಟ್ಟಿಗೂ ಸಿಗದ ಸಂಘಪರಿವಾರದ 'ಸಾಂಸ್ಕೃತಿಕ' ಆಳ್ವಿಕೆಯಾಗಿ ವಿಜೃಂಭಿಸುತ್ತಿದೆ.

ಸಂಘಪರಿವಾರದ ಸನಾತನ ಭಾರತದ ಕಾಲ್ಪನಿಕ ಚಿತ್ರದಲ್ಲಿ ಇಂದಿನ ಇಂಡಿಯಾದ ಎಲ್ಲಾ ಸ್ವತಂತ್ರ ಸಾರ್ವಭೌಮ ನೆರೆರಾಷ್ಟ್ರಗಳನ್ನು ತನ್ನೊಳಕ್ಕೆ ಸೇರಿಸಿಕೊಂಡ 'ಜಂಬೂ ದ್ವೀಪವಾದ ಭರತ ಕ್ಷೇತ್ರ' ಎಂಬ ರಾಜಕೀಯ ಭೂಪಟ ಕಾಣಿಸುತ್ತದೆ. ರಾಮಾಯಣ–ಮಹಾಭಾರತ ಮಹಾಕಾವ್ಯಗಳಲ್ಲಿ ವರ್ಣಿತವಾಗುವ ಆಯುಧಗಳು, ವಸ್ತ್ರಗಳು, ವಾಹನಗಳು, ಸಂಗೀತವಾದ್ಯಗಳು ಮತ್ತು ತಂತ್ರಜ್ಞಾನವನ್ನು ಸಂಘಪರಿವಾರವು ಮೊಹೆಂಜಾದಾರೋ ನಾಗರಿಕತೆಗೂ ಸಾವಿರಾರು ವರ್ಷ ಹಿಂದಕ್ಕೊಯ್ಯುತ್ತದೆ. ಆ ಕಾಲದ್ದೆಂದು ಹೇಳುವ ತಂತ್ರಜ್ಞಾನವು ಕೊಡ ಮಾಡಿದ್ದೆಂದು ಹೇಳುವ ವಸ್ತುಗಳನ್ನು ಹೊರತುಪಡಿಸಿ ಆಧುನಿಕ ಇಂಡಿಯಾದಲ್ಲಿ ಈಗ ಬಳಸುತ್ತಿರುವ ಎಲ್ಲವೂ ವಿಶ್ವದ ಬೇರೆ ಬೇರೆ ಭಾಗಗಳಿಂದ ಬಂದವುಗಳು. ಈಗ ಇಂಡಿಯಾಎಂದುಕರೆಯುವ 400ಕ್ಕೂ ಹೆಚ್ಚು ದೇಶೀಯ ಪ್ರಾಂತ್ಯಗಳನ್ನು ಆಳಿದ ಆಡಳಿತಗಾರರು ಬಿಟ್ಟುಹೋದ ಮಿಶ್ರ ಸಂಸ್ಕೃತಿಯ ಫಲಗಳು. ಮುಖ್ಯವಾಗಿ, ಮೊಗಲ್ ದೊರೆಗಳು ಮತ್ತು ಬ್ರಿಟಿಷ್ ಆಡಳಿತಗಾರರ ಆಳ್ವಿಕೆಗಳ ಕಾಲದಲ್ಲಿ ಜಾರಿಗೆ ಬಂದ ಆಹಾರ ಪದ್ಧತಿ, ವಸ್ತ್ರವಿನ್ಯಾಸ, ತಂತ್ರಜ್ಞಾನ, ಕಲೆ,





ಸಂಸ್ಕೃತಿ, ಸಾಹಿತ್ಯ, ಆಭರಣ, ಆಲೋಚನಾ ಕ್ರಮಗಳ ಮಿಶ್ರ ಸಂಸ್ಕೃತಿಯ ಜೀವನ ಕ್ರಮ ಇಂದಿಗೂ ಆಧುನಿಕ ಇಂಡಿಯಾದ ಜನರ ಜೀವನ ಕ್ರಮವಾಗೇ ಮುಂದುವರೆದಿವೆ. ಬಂಡವಾಳವಾದೀ ಜಗತ್ತಿನ ಭಾಗವಾಗಿ ಜಾಗತೀಕರಣದ ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳಿಗೆ ಇಂಡಿಯಾವನ್ನು ಒಪ್ಪಿಸಿಕೊಂಡ ಮೇಲಂತೂ ಬಹುತೇಕವಾಗಿ ಪಾಶ್ಚಿಮಾತ್ಯ ಎನ್ನಬಹುದಾದ' ಮಿಶ್ರ ಸಂಸ್ಕೃತಿಯ ನಾಗರಿಕತೆಯು ಇಂಡಿಯಾದ 'ರಾಷ್ಟ್ರೀಯ' ನಾಗರಿಕತೆ–ಸಂಸ್ಕೃತಿಯಾಗಿದೆ.

ಹೀಗಿದ್ದರೂ, ಮತ್ತು ಈಗ ಸ್ವತಹ ಸಂಘಪರಿವಾರವೇ ಈ ಮಿಶ್ರ ಸಂಸ್ಕೃತಿಯ–ನಾಗರಿಕತೆಯ ಬಹುದೊಡ್ಡ ಫಲಾನುಭವಿ ಮತ್ತು ಬಳಕೆದಾರನಾಗಿದ್ದೂ ಕಾಲ್ಪನಿಕವಾದ ಹಿಂದೂ ರಾಷ್ಟ್ರೀಯತೆಯ ಮಧ್ಯಯುಗದ ಭರತ ಕ್ಷೇತ್ರವನ್ನು, ಅಂದರೆ ತನ್ನ ಕಲ್ಪನೆಯ 'ಭಾರತ'ವನ್ನು ಪ್ರತಿಷ್ಠಾಪಿಸಲು ನಾನಾ ಬಗೆಯ ತಂತ್ರಗಳನ್ನು ಬಳಸುತ್ತಿದೆ. ಇದರ ಉದ್ದೇಶಿತ ಗುರಿ ಹಿಂದೂ ಜನಸಾಮಾನ್ಯರ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಮೂಲಕ ಅವರ ಬೆಂಬಲವನ್ನು ಉತ್ಪಾದಿಸಿ ಹಿಂದುತ್ವ ಪ್ರಣೀತ 'ಹಿಂದೂರಾಷ್ಟ್ರ'ವನ್ನು ಸ್ಥಾಪಿಸುವುದು. ಸಂಘಪರಿವಾರದ ಸಾಧನಗಳು ಪ್ರಧಾನವಾಗಿ ಊಳಿಗಮಾನ್ಯ ಸಂಸ್ಕೃತಿಯನ್ನು, ಪಿತೃಪ್ರಧಾನ ವ್ಯವಸ್ಥೆಯನ್ನು, ಯಜಮಾನ–ಗುಲಾಮ ಶ್ರಮ ಸಂಬಂಧಗಳನ್ನು ಕೀರ್ತಿಸುವ ದೇವರುಗಳನ್ನು ಪೂಜಿಸುವ ದೇವಸ್ಥಾನಗಳು. ಇವಕ್ಕೆ ವಿರುದ್ಧವಾಗಿ ಇಂಡಿಯಾದಲ್ಲಿರುವ ಕ್ರೈಸ್ತ ಮತ್ತು ಮುಸಲ್ಮಾನ ಜನ ಸಾಮಾನ್ಯರ ನಂಬಿಕೆಗಳನ್ನು, ಆಹಾರ ಪದ್ಧತಿಗಳನ್ನು, ಪ್ರಾರ್ಥನಾ ವಿಧಾನಗಳನ್ನು ಮತ್ತು ಇತರ ಸಾಂಸ್ಕೃತಿಕ ಆಚಾರ–ವಿಚಾರಗಳನ್ನು, ಅವರನ್ನು ದ್ವೇಷಿಸಲು ಕಾರಣಗಳನ್ನಾಗಿ ಸಂಘಪರಿವಾರವು ಬಳಸುತ್ತದೆ. ಇದು ಸಂಘ ಪರಿವಾರವು ಹುಟ್ಟಿದಂದಿನಿಂದಲೂ ನಡೆದು ಬಂದಿರುವ ಧಾರ್ಮಿಕ ವೇಷದ ವಿದ್ಯಮಾನ. ಸ್ವಾರಸ್ಯಕರ ಅಂಶವೇನೆಂದರೆ, ಹಿಂದುತ್ವ ಮತ್ತು ಹಿಂದೂ ರಾಷ್ಟ್ರದ ಸಿದ್ಧಾಂತವನ್ನು ಮಂಡಿಸಿದ ಸಾವರ್ಕರ್ ಒಬ್ಬ ನಾಸ್ತಿಕ. ಅಂದರೆ, ವೇದ ಪ್ರಾಮಾಣ್ಯದಲ್ಲಿ ನಂಬಿಕೆ ಇಲ್ಲದ ಮತ್ತುದೇವರ ಅಸ್ತಿತ್ವವನ್ನು ಒಪ್ಪದ ಚಿಂತಕ.

ತಾತ್ವಿಕವಾಗಿ, ಬೌದ್ಧರು, ಜೈನರು, ಲಿಂಗಾಯಿತರು ಮಾತ್ರ ವಲ್ಲದೆ ವೈಚಾರಿಕರಾದ ಚಾರ್ವಾಕರು, ವೈಜ್ಞಾನಿಕರು ಮತ್ತು ಕಮ್ಯುನಿಸ್ಟರೂ ಸಹ ವೇದ ಪ್ರಾಮಾಣ್ಯವನ್ನು ಪುರಸ್ಕರಿಸುವುದಿಲ್ಲ. ಹಿಂದೂ ನಂಬಿಕೆಯ ದೇವರ ಅಸ್ತಿತ್ವವನ್ನು ಮಾನ್ಯ ಮಾಡುವುದಿಲ್ಲ.

ಆದರೆ ಸಂಘ ಪರಿವಾರ ಪ್ರಣೀತ ಭಾರತಕ್ಕೆ 'ಅನ್ಯ'ರಾದ ಕ್ರೈಸ್ತರು, ಮುಸ್ಲಿಮರು ಮತ್ತು ಯಹೂದಿಗಳು, ಅವರದೇ ಆದದೇವರನ್ನು ನಂಬುತ್ತಾರೆ. ಅವರ ಪವಿತ್ರ ಗ್ರಂಥಗಳು ವಿಧಿಸುವ ಧಾರ್ಮಿಕ ಜೀವನ ವಿಧಾನಗಳನ್ನು ಸಾಂಕೇತಿಕವಾಗಿಯಾದರೂ ಅನುಸರಿಸುತ್ತಾರೆ. ಅಷ್ಟೇ ಅಲ್ಲ ಅವರವರ ಪುರೋಹಿತರು, ಸಾಧು–ಸಂತರು ಮತ್ತು ಶಾಸ್ತ್ರಗ್ರಂಥಗಳು ವಿಧಿಸುವ ಅಥವಾ ಅನುಮೋದಿಸುವ ಪ್ರಾರ್ಥನಾ ವಿಧಾನ, ವಸ್ತ್ರಸಂಹಿತೆ, ಆಹಾರ ಪದ್ಧತಿ, ಮತ್ತು ಸಾಮಾಜಿಕ ನಡಾವಳಿಗಳನ್ನು ತಮ್ಮ ತಮ್ಮ ಧಾರ್ಮಿಕ ಚೌಕಟ್ಟುಗಳೊಳಗೆ ಅಳವಡಿಸಿಕೊಳ್ಳುತ್ತಾರೆ.


ಹೀಗಿದ್ದರೂ, ಸಂಘ ಪರಿವಾರವು ನಾಸ್ತಿಕರು, ಕಮ್ಯುನಿಸ್ಟರು, ಕ್ರೈಸ್ತರು ಮತ್ತು ಮುಸ್ಲಿಮರನ್ನು ಮಾತ್ರ ತನ್ನ ಶತ್ರುಗಳೆಂದು ಪರಿಗಣಿಸುತ್ತದೆ. ಹಿಂದೂ ಧರ್ಮಕ್ಕೆ ಸೇರಿಲ್ಲವೆಂದು ಪರಿಗಣಿತವಾಗಿರುವ ಬೌದ್ಧ, ಜೈನ, ಮತ್ತು ಯಹೂದಿ ಧರ್ಮೀಯರನ್ನು ಸಂಘ ಪರಿವಾರವು ದ್ವೇಷಿಸುವುದಿಲ್ಲ. ಮಾತ್ರವಲ್ಲ, ಅವರನ್ನು ತನ್ನ ಮಿತ್ರರೆಂದೇ ನೋಡುತ್ತದೆ. ಆದಿವಾಸಿಗಳು ಮತ್ತು ಬುಡಕಟ್ಟಿನ ಜನರು ಹಿಂದೂ ಧರ್ಮದ ರೀತಿ–ನೀತಿಗಳನ್ನು ಸಾಂಪ್ರದಾಯಿಕ ಅರ್ಥದಲ್ಲಿ ಅನುಸರಿಸದಿದ್ದರೂ ಅವರೂ ಹಿಂದೂ ಧರ್ಮಕ್ಕೆ ಸೇರಿದವರೆಂದೇ ಸಂಘ ಪರಿವಾರವು ಪ್ರತಿಪಾದಿಸುತ್ತದೆ. ಅಸ್ಪೃಶ್ಯತೆ ಮತ್ತು ಜಾತಿತಾರತಮ್ಯದ ಕಾರಣಕ್ಕಾಗಿ ಬೇರೆ ಧರ್ಮಗಳನ್ನು ಸೇರಬಯಸುವ ಕೆಳಜಾತಿಯ ಜನರನ್ನು ಹಿಂದೂಧರ್ಮದಲ್ಲಿಯೇ ಉಳಿಯುವಂತೆ ನೋಡಿಕೊಳ್ಳುವುದಕ್ಕಾಗಿ ದಿನಕ್ಕೊಂದು ಹೊಸ ಹೊಸ ಸಂಘ–ಸಂಸ್ಥೆಗಳನ್ನು ಸಂಘಟಿಸುತ್ತದೆ. ಸಂಘ ಪರಿವಾರವೇ ನೂರಾರು, ಸಾವಿರಾರು ಶಾಲೆಗಳನ್ನು, ಅನಾಥಾಲಯಗಳನ್ನು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ನಡೆಸುವ ಮೂಲಕ ಎಳೆಯ ಮನಸ್ಸುಗಳಲ್ಲಿ 'ಅನ್ಯ' ಧರ್ಮೀಯರ ವಿರುದ್ಧ ದ್ವೇಷ ಬಿತ್ತುವ ಕೆಲಸವನ್ನು ಬಹು ಹಿಂದಿನಿಂದಲೂ ವ್ಯವಸ್ಥಿತವಾಗಿ ಮಾಡುತ್ತಿದೆ. ಇದಕ್ಕೆಲ್ಲಾ ಬೇಕಾಗುವ ಹಣ ಸರ್ಕಾರದಿಂದ ಬೇರೆ ಬೇರೆ ಅನುದಾನಗಳ ಹೆಸರಿನಲ್ಲಿ, ಕಾರ್ಪೊರೇಟ್ ದಾನಗಳ ಮೂಲಕ, ವಿದೇಶಗಳಲ್ಲಿರುವ ಸಂಘ ಪರಿವಾರ ಪರವಾದ ಸಂಘಟನೆಗಳ ಮೂಲಕ ಅಗಾಧವಾಗಿ ಹರಿದು ಬರುತ್ತದೆ. ಸಂಘ ಪರಿವಾರದ ಕಾಲಾಳುಗಳು ಮತ್ತು ಫಲಾನುಭವಿಗಳು ಸರ್ಕಾರದ ಆಡಳಿತ ಯಂತ್ರಗಳಲ್ಲಿ ಮಾತ್ರವಲ್ಲ, ಎಲ್ಲಾ ವಿದ್ಯಾ ಸಂಸ್ಥೆಗಳಲ್ಲಿ, ಸಾರ್ವಜನಿಕ ಸಂಘ–ಸಂಸ್ಥೆಗಳಲ್ಲಿ ಸಂಸ್ಕೃತಿಯ ಹೆಸರಿನಲ್ಲಿ ತೂರಿಕೊಂಡಿದ್ದಾರೆ.

ಜನಸಾಮಾನ್ಯರು ಪೂಜಿಸುವ ದೇವರು–ದೇವತೆಗಳನ್ನು, ರಾಷ್ಟ್ರಮಾತೆ ಮತ್ತು ರಾಷ್ಟ್ರಪಿತೃಗಳೊಂದಿಗೆ ಸಮೀಕರಿಸಿ ದೈವಭಕ್ತಿಯನ್ನು ದೇಶಭಕ್ತಿಯಾಗಿ ಪರಿವರ್ತಿಸುವ ಕೀರ್ತನೆಗಳನ್ನು ಭಕ್ತಿಯ ಹೆಸರಿನಲ್ಲಿ ಪ್ರಸಾರ ಮಾಡುತ್ತಾರೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಪ್ರಬಲವಾಗಿರುವ ಸಂಘ ಪರಿವಾರದ ರಾಜಕೀಯ ಮುಖವಾದ ಭಾಜಪ ರಾಜಕೀಯ ಅಧಿಕಾರ ಪಡೆದದ್ದೇ ಹೀಗೆ – ಬೇರೆ ಬೇರೆ ವೃತ್ತಿಗಳನ್ನು, ಹವ್ಯಾಸಗಳನ್ನು ಮತ್ತು ಮುಖ್ಯವಾಗಿ ಧರ್ಮಗಳನ್ನು ಅನುಸರಿಸುವ ಜನರ ಬೆಂಬಲ, ಸಹಕಾರ–ಸಹಯೋಗ ಮತ್ತು ನೇರ ಪಾಲ್ಗೊಳ್ಳುವಿಕೆಯಿಂದಾಗಿ. ಇದರಿಂದ ಸ್ಪಷ್ಟವಾಗುವ ಅಂಶವೇನೆಂದರೆ, ಸಂಘ ಪರಿವಾರದ ರಾಜಕೀಯಲ್ಲಿ ಅದರ ಕ್ರೈಸ್ತ ಮತ್ತು ಮುಸಲ್ಮಾನರ ದ್ವೇಷಕ್ಕೆ ಕಾರಣ ಮೇಲು ನೋಟಕ್ಕೆ ಕಾಣುವಂತೆ ಆ 'ಅನ್ಯ' ಧರ್ಮೀಯರ ಧರ್ಮ ಅಥವಾ ಧಾರ್ಮಿಕ ನಂಬಿಕೆಗಳಲ್ಲ. ಹಾಗೆಯೇ 'ಹಿಂದೂ ಧರ್ಮ'ದ ಸ್ವಘೋಷಿತ ರಕ್ಷಕನೆಂಬಂತೆ ತೋರಿಸಿಕೊಳ್ಳುವ ಸಂಘ ಪರಿವಾರದ ನೇತಾರರು ಮತ್ತು ಕಾಲಾಳುಗಳ ವೈಯಕ್ತಿಕ ಧಾರ್ಮಿಕ ಶ್ರದ್ಧೆ– ನಂಬಿಕೆಗಳೂ ಅಲ್ಲ.

ಹಾಗಿದ್ದರೆ, ಮತ್ತೇನು?

ಉತ್ತರ ಈಗಾಗಲೇ ಸ್ಪಷ್ಟವಾಗಿದೆ. ವ್ಯಕ್ತಿಗತವಾಗಿ ನಾಸ್ತಿಕನಾದ ಸಾವರ್ಕರ್ ಪ್ರತಿಪಾದಿಸುವ ಹಿಂದುತ್ವವು ಒಂದು ಶುದ್ಧ ರಾಜಕೀಯ ಪರಿಕಲ್ಪನೆಯೇ ಹೊರತು ಧಾರ್ಮಿಕ ದೃಷ್ಟಿ ಕೋನವಲ್ಲ. ಅದನ್ನು ತನ್ನ ಅಜೆಂಡಾ ಆಗಿ ಅಳವಡಿಸಿಕೊಂಡಿರುವ ಸಂಘಪರಿವಾರವು ಹಿಂದೂ ಜಾತಿ – ಪಂಗಡಗಳ ಜನಬಲವನ್ನು ತನ್ನದೇ ಆದ ಗುರಿಯನ್ನು ಮುಟ್ಟಲು ಕ್ರೋಢೀಕರಿಸಿಕೊಳ್ಳುತ್ತದೆ. ಹಿಂದೂ ದೇವರುಗಳು, ದೇವಸ್ಥಾನಗಳು, ಜನಸಾಮಾನ್ಯರ ಧಾರ್ಮಿಕ ಶ್ರದ್ಧೆ ಮತ್ತು ಚರಿತ್ರೆಯ ಬಗೆಗಿರುವ ಜನರ ಅಜ್ಞಾನ–ಅರೆ ಜ್ಞಾನಗಳನ್ನು ಸಮಯಾನುಸಾರ ಬಳಸಿಕೊಳ್ಳುತ್ತದೆ. 'ಅನ್ಯಧರ್ಮೀಯ'ರನ್ನು ದ್ವೇಷಿಸುವಂತೆ ಜನರನ್ನು ಉತ್ತೇಜಿಸುವ ಮೂಲಕ ಅವರ ಮಧ್ಯೆ ಸ್ವಾಭಾವಿಕವಾಗಿ ಇರುವ ಸಾಮಾಜಿಕ ಬಂಧುತ್ವವನ್ನು ಹಾಳು ಮಾಡುತ್ತದೆ. ಫ್ಯಾಸೀವಾದವು ಜಾಗತಿಕವಾಗಿ ಬಳಸಿ ಗಟ್ಟಿಗೊಳಿಸಿರುವ ಅನುಭವದ ಲಾಭಗಳನ್ನು, ಪ್ರಸ್ತುತ ಕಾಲದ ತಂತ್ರಜ್ಞಾನದೊಂದಿಗೆ ಕಸಿಮಾಡಿ ದೇಶೀಯವಾಗಿ ಬಳಸುವ ಮೂಲಕ ಪಡೆದುಕೊಳ್ಳುತ್ತದೆ.

19ನೇ ಶತಮಾನದ ಜರ್ಮನ್ ಭಾವನಾವಾದೀ ಚಿಂತನೆಗಳಿಗೂ, ಸಂಘ ಪರಿವಾರವು ಕೀರ್ತಿಸಿ ಪ್ರತಿಪಾದಿಸುವ ಹಿಂದೂ ಸನಾತನವಾದೀ ಚಿಂತನೆಗಳಿಗೂ ತುಂಬಾ ಸಾಮ್ಯವಿದೆ. ಹೀಗಾಗಿ ಅಲ್ಲಿನ ರಾಜಕೀಯದಲ್ಲಿ ಹಿಟ್ಲರ್ ಬಳಸಿದ ಆರ್ಯರ ಜನಾಂಗ ಶ್ರೇಷ್ಠತೆಗೆ ಸಂವಾದಿಯಾಗಿ, ಇಂಡಿಯಾದ ಬ್ರಾಹ್ಮಣ ಧರ್ಮವು ಸರ್ವ ಶ್ರೇಷ್ಠ, ಸಾರ್ವಕಾಲಿಕ ಮೌಲ್ಯವುಳ್ಳ ಹಿಂದೂ ಧರ್ಮವೆನಿಸುತ್ತದೆ. ಇದರಿಂದ, ಬ್ರಾಹ್ಮಣ ಧರ್ಮದ ನೆರಳಿನಡಿಯಲ್ಲಿ ಬರುವ ಎಲ್ಲವೂ 'ಹಿಂದೂ' ಜನರಿಗೆ ಸಂಬಂಧಿಸಿದವುಗಳೆಂದು ಹೇಳಿದಂತಾಗುತ್ತದೆ. ಇಲ್ಲಿ ವಾಸಿಸುವ ಜನರೆಲ್ಲರೂ 'ಹಿಂದೂಸ್ತಾನ'ದ ಪ್ರಜೆಗಳು ಎಂದಾಗುತ್ತದೆ. ಹಾಗಿಲ್ಲದಾದಾಗ, ಚಾರಿತ್ರಿಕವಾಗಿ ಇಂಡಿಯಾದ ಜನಸಮುದಾಯದ ಅವಿಭಾಜ್ಯ ಅಂಗಗಳಾಗಿದ್ದೂ, ಬ್ರಾಹ್ಮಣ ಧರ್ಮದ ನೆರಳಿನಡಿಯಲ್ಲಿ ಬರದ ಕ್ರೈಸ್ತ ಮತ್ತು ಇಸ್ಲಾಂ ಧರ್ಮೀಯರು 'ಪರಕೀಯ' ಜನರಾಗುತ್ತಾರೆ. ಅವರು ಈ ನೆಲದಲ್ಲಿ ಬದುಕಬೇಕೆಂದರೆ, 'ಮತ್ತೆ' 'ಹಿಂದೂ' ಆಗಬೇಕು. 'ಮತ್ತೆ' ➚







ಮುಸ್ಲಿಮರ ಮೇಲೆ ಹೊಸ ಮಟ್ಟದ ಧಾಳಿಗಳು

ರಾಜ್ಯ ಸರ್ಕಾರಗಳ ಕುಮ್ಮಕ್ಕಿನಿಂದಲೇ ಈ ಘಟನೆಗಳು ನಡೆದಿದೆಯೆನ್ನುವುದಕ್ಕೆ ಮಧ್ಯ ಪ್ರದೇಶದ ಖರ್ಗೋನ್‌ನಲ್ಲಿ ಮುಸ್ಲಿಮರ ಅಂಗಡಿ ಹಾಗೂ ಮನೆಗಳನ್ನು ರಾಜ್ಯದ ಗೃಹ ಸಚಿವರ ನಿರ್ದೇಶನದ ಮೇರೆಗೆ ಬುಲ್ಡೋಜರ್ ಬಳಸಿ ನೆಲಸಮ ಮಾಡಿದ್ದು ಸಾಕ್ಷಿಯಾಗಿದೆ. ಆದಿತ್ಯನಾಥ ಸರ್ಕಾರದ ಕುಖ್ಯಾತ ಬುಲ್ಡೋಜರ್ ನೀತಿಯನ್ನು ಇದೀಗ ಬಿಜೆಪಿ ಆಡಳಿತದ ಇತರ ರಾಜ್ಯಗಳಲ್ಲೂ ಬಳಕೆಗೆ ತರಲಾಗುತ್ತಿದೆ. ಉತ್ತರಾಖಂಡದ ಭಗವಾನ್‌ಪುರದಲ್ಲಿ ಒಂದು ಬುಲ್ಡೋಜರ್ ನಿಲ್ಲಿಸಲಾಗಿದ್ದು ಪೋಲೀಸರಿಗೆ ಬೇಕಾಗಿರುವ ಮುಸ್ಲಿಮರು ಶರಣಾಗದಿದ್ದರೆ ಅವರ ಮನೆಗಳನ್ನು ನಾಶ ಮಾಡುವುದಾಗಿ ಬೆದರಿಕೆ ಹಾಕಲಾಗುತ್ತಿದೆ. ಪೋಲೀಸರು ಕೇಂದ್ರ ಸರ್ಕಾರದ ಅಧೀನದಲ್ಲಿರುವ ದೆಹಲಿಯ ಜಹಾಂಗಿರ್‌ಪುರಿಗೆ ಬುಲ್ಡೋಜರ್‌ಗಳನ್ನು ರವಾನಿಸಲಾಗಿದೆ. ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದ್ದರೂ ಎರಡು ಗಂಟೆ ಕಾಲ ಅಂಗಡಿಗಳು ಹಾಗೂ ಮನೆಗಳನ್ನು ನಾಶ ಮಾಡುವುದನ್ನು ಮುಂದುವರಿಸಲಾಯಿತು.

ಪ್ರಕಾಶ್ ಕಾರಟ್

ಮುಸ್ಲಿಮರ ಮೇಲೆ ಹಿಂದೂತ್ವ ಶಕ್ತಿಗಳು ನಡೆಸುತ್ತಿರುವ ದಾಳಿಗಳಲ್ಲಿ ಏಪ್ರಿಲ್‌ನಲ್ಲಿ ತೀವ್ರ ಹೆಚ್ಚಳವಾಗಿದೆ. ಏಪ್ರಿಲ್ 2ರಂದು ಆರಂಭವಾಗುವ ನವರಾತ್ರಿ ಹಬ್ಬದಿಂದ ಹಿಡಿದು ಏಪ್ರಿಲ್ 10ರ ರಾಮ ನವಮಿ ವರೆಗೆ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳದಂಥ ಆರ್‌ಎಸ್‌ಎಸ್ ಸಂಘಟನೆಗಳು ಹಿಂದೂ ಹೊಸ ವರ್ಷವಾದ ಏಪ್ರಿಲ್ 2 ಮತ್ತು ಏಪ್ರಿಲ್ 10ರ ರಾಮನವಮಿ ಮೆರವಣಿಗೆಯನ್ನು ಯೋಜಿತವಾಗಿ ಹಾಗೂ ಸಂಘಟಿತವಾಗಿ ಮುಸ್ಲಿಂ ಸಮುದಾಯವನ್ನು ಗುರಿಯಾಗಿ ದಾಳಿ ಮಾಡಲು ಬಳಸಿಕೊಂಡವು.

ದೇಶದೆಲ್ಲೆಡೆ ಅವುಗಳ ಕಾರ್ಯವಿಧಾನ ಒಂದೇ ರೀತಿಯಾಗಿತ್ತು. ಶಸ್ತ್ರಾಸ್ತ್ರಗಳೊಂದಿಗೆ ಮೆರವಣಿಗೆ ನಡೆಸಿದರು ಹಾಗೂ ಮುಸ್ಲಿಂ ಪ್ರದೇಶಗಳಿಂದ ಹಾದು ಹೋಗುತ್ತಿರುವಾಗ ಮಸೀದಿಗಳ ಮುಂದೆ ಪ್ರಚೋದನಕಾರಿ ಘೋಷಣೆಗಳನ್ನು ಕೂಗಿದರು. ಇದರಿಂದಾಗಿ ಘರ್ಷಣೆಗಳು ಉಂಟಾದವು. ಅವುಗಳು ಮುಸ್ಲಿಮರ ಅಂಗಡಿಗಳು ಹಾಗೂ ಮನೆಗಳ ಮೇಲೆ ದಾಳಿ ಮಾಡಲು ಹಾಗೂ ದೊಂಬಿ ಎಬ್ಬಿಸಲು ಸೂಚನೆಗಳಾಗಿದ್ದವು.

ಇವುಗಳು ಹಠಾತ್ ಕೋಮು ಗಲಭೆ ಅಥವಾ ಸಂಘರ್ಷಗಳಲ್ಲ ಎನ್ನುವುದಕ್ಕೆ ಏಪ್ರಿಲ್ 10 ರಂದು ಗುಜರಾತ್, ಮಧ್ಯಪ್ರದೇಶ, ಜಾರ್ಖಂಡ್, ಬಂಗಾಳ, ಮಹಾರಾಷ್ಟ್ರ ಮತ್ತು ಗೋವಾ –ಹೀಗೆ ಆರು ರಾಜ್ಯಗಳಲ್ಲಿ ರಾಮನವಮಿ ಮೆರವಣಿಗೆಗಳ ಸಂದರ್ಭ ಸುಮಾರು ಒಂದು ಡಜನ್ ಸ್ಥಳಗಳಲ್ಲಿ ಹಿಂಸಾಚಾರ ನಡೆದಿದ್ದೇ ಸಾಕ್ಷಿಯಾಗಿದೆ. ಅದಕ್ಕೂ ಮುನ್ನ ಏಪ್ರಿಲ್ 2ರಂದು ರಾಜಸ್ಥಾನದ ಕರೌಲಿಯಲ್ಲಿ ಹಿಂದೂ ಹೊಸ ವರ್ಷಾಚರಣೆಯ ಬೈಕ್ ರ್‍ಯಾಲಿ ನಡೆದ ಪರಿಣಾಮವಾಗಿ ಮುಸ್ಲಿಂ ಪ್ರದೇಶದಲ್ಲಿ ಮೊದಲ ದಾಳಿ ನಡೆದಿತ್ತು.

ಈ ಎಲ್ಲ ಪ್ರದೇಶಗಳಲ್ಲಿ ದಾಳಿಗಳಲ್ಲಿ ಸಂತ್ರಸ್ತರಾದ ಬಹುತೇಕರು ಬಡ ಮುಸ್ಲಿಮರಾಗಿದ್ದು ಅವರ ಮನೆಗಳು ಮತ್ತು ಅಂಗಡಿಗಳನ್ನು ಲೂಟಿ ಮಾಡಲಾಗಿದೆ ಅಥವಾ ನಾಶ ಮಾಡಲಾಗಿದೆ. ಬಿಜೆಪಿ ಆಡಳಿತದ ಈ ರಾಜ್ಯಗಳಲ್ಲಿ ದಾಳಿಗಳನ್ನು ತಡೆಯಲು ಪ್ರಯತ್ನಿಸದ ಪೊಲೀಸರು, ನಂತರ ಸಂತ್ರಸ್ತ ಮುಸ್ಲಿಮರನ್ನೇ ಹಾಗೂ ದಾಳಿಗಳನ್ನು ಪ್ರತಿರೋಧಿಸಲು ಪ್ರಯತ್ನಿಸಿದ ಜನರನ್ನೇ ಬಂಧಿಸಿದ್ದಾರೆ.

ಒಂದು ವಾರದ ನಂತರ, ಏಪ್ರಿಲ್ 16 ರಂದು ಹನುಮಾನ್ ಜಯಂತಿ ಮೆರವಣಿಗೆಗಳ ವೇಳೆ ನಾಲ್ಕು ರಾಜ್ಯಗಳಲ್ಲಿ ಮುಸ್ಲಿಮರ ಮೇಲೆ ಇನ್ನೊಂದು ಸುತ್ತಿನ ಆಕ್ರಮಣಗಳು ನಡೆದಿವೆ. ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಹೊಲಗುಂದ ಗ್ರಾಮ, ಉತ್ತರ ಪ್ರದೇಶದ ರೂರ್ಕಿಯ ಭಗವಾನ್‌ಪುರ ಮತ್ತು ದೆಹಲಿಯ ಜಹಾಂಗಿರ್‌ಪುರಿಯಲ್ಲಿ ಇದೇ ವಿಧಾನದ ಘಟನೆಗಳು ನಡೆದಿವೆ.

ಸರ್ಕಾರಗಳ ಕುಮ್ಮಕ್ಕು

ರಾಜ್ಯ ಸರ್ಕಾರಗಳ ಕುಮ್ಮಕ್ಕಿನಿಂದಲೇ ಈ ಘಟನೆಗಳು ನಡೆದಿದೆಯೆನ್ನುವುದಕ್ಕೆ ಮಧ್ಯ ಪ್ರದೇಶದ ಖರ್ಗೋನ್‌ನಲ್ಲಿ ಮುಸ್ಲಿಮರ ಅಂಗಡಿ ಹಾಗೂ ಮನೆಗಳನ್ನು ರಾಜ್ಯದ ಗೃಹ ಸಚಿವರ ನಿರ್ದೇಶನದ ಮೇರೆಗೆ ಬುಲ್ಡೋಜರ್ ಬಳಸಿ ನೆಲಸಮ ಮಾಡಿದ್ದು ಸಾಕ್ಷಿಯಾಗಿದೆ. ಆದಿತ್ಯನಾಥ ಸರ್ಕಾರದ ಕುಖ್ಯಾತ ಬುಲ್ಡೋಜರ್ ನೀತಿಯನ್ನು ಇದೀಗ ಬಿಜೆಪಿ ಆಡಳಿತದ ಇತರ ರಾಜ್ಯಗಳಲ್ಲೂ ಬಳಕೆಗೆ ತರಲಾಗುತ್ತಿದೆ. ಉತ್ತರಾಖಂಡದ ಭಗವಾನ್‌ಪುರದಲ್ಲಿ ಒಂದು ಬುಲ್ಡೋಜರ್ ನಿಲ್ಲಿಸಲಾಗಿದ್ದು ಪೋಲೀಸರಿಗೆ ಬೇಕಾಗಿರುವ ಮುಸ್ಲಿಮರು ಶರಣಾಗದಿದ್ದರೆ ಅವರ ಮನೆಗಳನ್ನು ನಾಶ ಮಾಡುವುದಾಗಿ ಬೆದರಿಕೆ ಹಾಕಲಾಗುತ್ತಿದೆ. ಪೋಲೀಸರು ಕೇಂದ್ರ ಸರ್ಕಾರದ ಅಧೀನದಲ್ಲಿರುವ ದೆಹಲಿಯ ಜಹಾಂಗಿರ್‌ಪುರಿಗೆ ಬುಲ್ಡೋಜರ್‌ಗಳನ್ನು ರವಾನಿಸಲಾಗಿದೆ. ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದ್ದರೂ ಎರಡು ಗಂಟೆ ಕಾಲ ಅಂಗಡಿಗಳು ಹಾಗೂ ಮನೆಗಳನ್ನು ನಾಶ ಮಾಡುವುದನ್ನು ಮುಂದುವರಿಸಲಾಯಿತು.

ಕಳೆದ ಮೂರು ವಾರಗಳಿಂದ ದೇಶದಾದ್ಯಂತ ನಡೆಯುತ್ತಿರುವ ಇಂಥ ಘಟನೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದು ಅಗತ್ಯ. ಇವುಗಳು ಕೆಲವು ಧಾರ್ಮಿಕ ಚಟುವಟಿಕೆಗಳ ಸಂದರ್ಭ ಅಥವಾ ಗುಂಪುಗಳ ಘರ್ಷಣೆಯಿಂದ ಸಂಭವಿಸುವಂಥ ಹಠಾತ್ತನೆ ನಡೆಯುವ ಕೋಮು ಗಲಭೆಗಳು ಅಥವಾ ಸಾಂಪ್ರದಾಯಿಕ ಘರ್ಷಣೆಗಳಲ್ಲ. ಇದು ಮುಸ್ಲಿಮ್–ವಿರೋಧಿ ಪ್ರಚಾರವನ್ನು ಹೊಸ ಮಟ್ಟಕ್ಕೆ ಒಯ್ಯುವ ಪೂರ್ವ–ಯೋಜಿತ ಸಂಚಾಗಿದೆ. ಸ್ಥಳೀಯ ಮಟ್ಟದಲ್ಲಿ ಈ ರೀತಿಯ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸುವ ಅಪಾಯವಿದೆ. ನಿರುದ್ಯೋಗಿಗಳ ಬೃಹತ್ ಪಡೆ ಹಾಗೂ ಆರ್ಥಿಕ ಸಂಕಷ್ಟ ಸಮಾಜದ ಬಹುದೊಡ್ಡ ವಿಭಾಗಗಳನ್ನು ಬಾಧಿಸುತ್ತಿರುವಾಗ ಹಿಂದೂತ್ವ ಸಂಘಟನೆಗಳು ಜನರನ್ನು ವಿಚ್ಛಿದ್ರಕಾರಿ ಹಾಗೂ ವಿನಾಶಕಾರಿ ಉದ್ದೇಶಗಳಿಗೆ ಬಳಸುತ್ತಿವೆ.

ಧಾರ್ಮಿಕ ಮೆರವಣಿಗೆ ಹೆಸರಿನಲ್ಲಿ ಶಸ್ತ್ರಾಸ್ತ್ರಗಳನ್ನು ಝಳಪಿಸುವುದು ಹಾಗೂ ಮುಸ್ಲಿಮರ ವಿರುದ್ಧ ನಿಂದನಾತ್ಮಕ ಘೋಷಣೆಗಳನ್ನು ಕೂಗುವುದು, ಮಸೀದಿಗಳ ಹೊರಗೆ ಪ್ರಚೋದನಾತ್ಮಕ ಚಟುವಟಿಕೆ ನಡೆಸುವುದು, ಅವುಗಳನ್ನು ಅಪವಿತ್ರಗೊಳಿಸುವ ಬೆದರಿಕೆ ಹಾಕುವುದು ಹಾಗೂ ಹಿಂಸಾತ್ಮಕ ಬೈಗುಳ ಇವೆಲ್ಲವೂ ಮುಸ್ಲಿಮರನ್ನು ಬಗ್ಗುಬಡಿದು ಅವಮಾನಗೊಳಿಸುವ ಉದ್ದೇಶ ಹೊಂದಿವೆ. ಇದು ಹಿಂದೂ ಆಕ್ರಮಣಶೀಲತೆ ಹಾಗೂ ಮೇಲುಗೈ ಸ್ಥಿತಿಯ ಪ್ರದರ್ಶನವಾಗಿದೆ. ಅವುಗಳಿಗೆ ಯಾವುದೇ ರೀತಿಯ ಪ್ರತಿರೋಧ ವ್ಯಕ್ತಪಡಿಸಿದರೆ ಅಥವಾ ಪ್ರತಿ–ಕಾರ್ಯಾಚರಣೆ ನಡೆಸಿದರೆ ತಕ್ಷಣವೇ ಪೋಲೀಸರು ಹಾಗೂ ಪ್ರಭುತ್ವ ಯಂತ್ರ ಹಾಜರಾಗುತ್ತವೆ. ರಾಷ್ಟ್ರೀಯ ಭದ್ರತಾ ಕಾನೂನು (ಎನ್‌ಎಸ್‌ಎ) ಅನ್ವಯ ಬಂಧಿಸುವುದು ಮತ್ತು ಮುಸ್ಲಿಮರ ಮನೆಗಳು ಹಾಗೂ ಅಂಗಡಿಗಳನ್ನು ನೆಲಸಮ ಮಾಡುವ ಕೆಲಸ ನಡೆಯುತ್ತದೆ. ಕಾನೂನಿನ ಯಾವುದೇ ಬೆಂಬಲವಿಲ್ಲದೆ ಈ ರೀತಿ ಮಾಡಲಾಗುತ್ತಿದ್ದು ಶಿಕ್ಷೆಯ ಯಾವುದೇ ಭಯವಿಲ್ಲದೆ ಮುಸ್ಲಿಮರ ವಿರುದ್ಧ ಪ್ರಭುತ್ವವು ಏನು ಬೇಕಾದರೂ ಮಾಡಬಹುದು ಎಂಬ ಸಂದೇಶವನ್ನು ಅದು ರವಾನಿಸುತ್ತದೆ.

ಫ್ಯಾಸಿಸ್ಟ್ ಪರಿಭಾಷೆ


ಮುಸ್ಲಿಂ ತೀವ್ರವಾದಿಗಳೇ ಹಿಂಸಾಚಾರಕ್ಕೆ ಕಾರಣ ಎಂದು ಆರ್‌ಎಸ್‌ಎಸ್ ಹೇಳುತ್ತದೆ. 'ಭಾರತದಲ್ಲಿ ಹಿಂದೂಗಳ ಹೊಸ ವರ್ಷವಾದ ವರ್ಷ ಪ್ರತಿಪಾದ ಮತ್ತು ರಾಮ ನವಮಿಯಂದು ಇಸ್ಲಾಮ್‌ವಾದಿಗಳು ರಂಪಾಟ ನಡೆಸಿದ್ದಾರೆ' ಎಂದು ಆರ್‌ಎಸ್‌ಎಸ್ ಮುಖವಾಣಿ ಆರ್ಗನೈಸರ್ ಬರೆದಿದೆ. ಇದೊಂದು 'ಯೋಜಿತ ಜಿಹಾದ್' ಎಂದೂ ಅದು ಹೇಳಿದೆ. ಈ ರೀತಿಯಾಗಿ, ಆಕ್ರಮಣಕಾರರೇ ಸಂತ್ರಸ್ತರು ಎನ್ನುವ ರೀತಿಯಲ್ಲಿ ವಿಶಿಷ್ಟ ಫ್ಯಾಸಿಸ್ಟಿಕ್ ಪರಿಭಾಷೆಯಲ್ಲಿ ಬಿಂಬಿಸಲಾಗುತ್ತಿದೆ.

ನಮ್ಮನ್ನು ಕಾಡುವ ಪ್ರಾಣಿಯ ಸ್ವರೂಪ ಏನೆಂಬುದು ಸ್ಪಷ್ಟವಾಗಿದೆ. ದುಷ್ಟ ತಂತ್ರಗಳ ಮೂಲಕ ಸಮಾಜದ ಮೇಲೆ ಹಾಗೂ ಅಲ್ಪಸಂಖ್ಯಾತರ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸುವ ಹಾಗೂ ತನ್ನ ಅಧಿಪತ್ಯ ಸ್ಥಾಪಿಸುವ ಹಿಂದೂತ್ವವೇ ಅದೆಂಬುದು ನಮಗೆ ಸ್ಪಷ್ಟವಿದೆ. ಭಾರತವು ಆರ್‌ಎಸ್‌ಎಸ್‌ನ ಫ್ಯಾಸಿಸ್ಟ್ ಸಿದ್ಧಾಂತದ ಆಡೊಂಬೊಲವಾಗಬಾರದೆಂದು ಬಯಸುವ ಎಲ್ಲ ಶಕ್ತಿಗಳು ಈ ಅಪಾಯದ ವಿರುದ್ಧ ದೃಢವಾಗಿ ಹೋರಾಡಬೇಕು. ಹಿಂದೂತ್ವ ಸರ್ವಾಧಿಕಾರದ ವಿರುದ್ಧ ರಾಜಿರಹಿತವಾಗಿ ಹೋರಾಡುತ್ತಿರುವ ಎಡ ಶಕ್ತಿಗಳು ಈ ವಿಚಾರದಲ್ಲಿ ನೇತೃತ್ವ ವಹಿಸಬೇಕು.

ಅನು: ವಿಶ್ವ

ಯಾಕೆಂದರೆ, ಸಂಘ ಪರಿವಾರದ ತರ್ಕದ ಅನುಸಾರ 'ಇಂಡಿಯಾದ ಕ್ರೈಸ್ತರು ಮತ್ತು ಮುಸಲ್ಮಾನರುಒಂದುಕಾಲದಲ್ಲಿ ಬಲಾತ್ಕಾರದಿಂದ ಅಥವಾ ಆಮಿಷಕ್ಕೊಳಗಾಗಿ ಮತಾಂತರಗೊಂಡ ಹಿಂದೂಗಳೇ'. ಅಥವಾ ಅವರು ಹಿಂದೂಸ್ತಾನದಲ್ಲೇ ಇರಬಾರದು. ಪಾಕಿಸ್ತಾನಕ್ಕೋ, ಯಾವುದೋ ಇಸ್ಲಾಂ ರಾಷ್ಟ್ರಕ್ಕೋ ವಲಸೆ ಹೋಗಬೇಕು. ಹಾಗೆ ಮಾಡುವಂತೆ ನಿಸ್ಸಹಾಯಕರಾದ ಜನರ ಮೇಲೆ ಒತ್ತಡ ಹಾಕುವುದಕ್ಕಾಗಿ ನಾನಾ ರೂಪದ ಗುಂಪು ದೌರ್ಜನ್ಯದ ಅಮಾನುಷ ತಂತ್ರಗಳನ್ನು ನಿರಂತರವಾಗಿ ಬಳಸಲಾಗುತ್ತಿದೆ. ಆಳುವ ವರ್ಗದ ಭಾಗವೇ ಆಗಿರುವ ಪೋಲೀಸರು, ನ್ಯಾಯಾಲಯಗಳು ಮತ್ತು ಅಧಿಕಾರಿಗಳು ಮತ್ತು ಸುದ್ದಿ ಮಾಧ್ಯಮಗಳು ಕಾನೂನಿನಡಿಯಲ್ಲೇ ಪ್ರಭುತ್ವದೊಂದಿಗೆ ಕೈ ಜೋಡಿಸುತ್ತಾರೆ. ಇದು ಸಂಘ ಪರಿವಾರದ ಹಿಂದುತ್ವ ರಾಜಕೀಯದ ನೇರ ಪರಿಣಾಮ.

ಹೀಗೆ, ಹಿಂದುತ್ವದ ರಾಷ್ಟ್ರೀಯವಾದವು ಧಾರ್ಮಿಕ ರಾಷ್ಟ್ರೀಯವಾದವಾಗಿ ರೂಪ ಪಡೆಯುತ್ತದೆ. ಬ್ರಾಹ್ಮಣ ಧರ್ಮವು ಪ್ರತಿಪಾದಿಸುವ ಜಾತಿಮೂಲದ ಮೇಲು–ಕೀಳಿನ ತಾರತಮ್ಯ, ಜಾತಿ ಆಧಾರಿತ ಸಾಮಾಜಿಕ ಶ್ರಮವಿಭಜನೆ, ಪಿತೃ ಪ್ರಧಾನ ಆಳ್ವಿಕೆಯ ರಾಜಕೀಯ ಸಂಬಂಧಗಳು, ಬಂಡವಾಳವಾದವು ಸಮರ್ಥಿಸುವ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ, ಶೋಷಣಾಯುಕ್ತ ಶ್ರಮ ಸಂಬಂಧಗಳ ಧಾರ್ಮಿಕ ರೂಪಗಳಾಗಿ ಕಾಣಿಸುತ್ತವೆ. ಧರ್ಮ, ಸಂಸ್ಕೃತಿ, ನೈತಿಕತೆ, ನ್ಯಾಯ ನಿಷ್ಕರ್ಷೆ, ಸಾಮಾಜಿಕ ವರ್ತನೆ, ರಾಜ್ಯಾಡಳಿತ, ಮತ್ತು ರಾಜಕೀಯಗಳು ಬೇರ್ಪಡಿಸಲಾಗದಷ್ಟು ಒಂದರೊಳಗೆ ಮತ್ತೊಂದು ಬೆರೆತುಕೊಂಡು 'ಹಿಂದುತ್ವದ' ರಾಜಕೀಯವು ಯಾವ ಹಣೆಪಟ್ಟಿಗೂ ಸಿಗದ ಸಂಘ ಪರಿವಾರದ 'ಸಾಂಸ್ಕೃತಿಕ' ಆಳ್ವಿಕೆಯಾಗಿ ವಿಜೃಂಬಿಸುತ್ತಿದೆ. ●



ರಾಜ್ಯಗಳ ನಾಗರಿಕರು ಪರಸ್ಪರ ಮಾತಾಡುವಾಗ ಅದು ಭಾರತದ ಭಾಷೆಯಲ್ಲಿರಬೇಕು, ಹಿಂದಿಯನ್ನು ಇಂಗ್ಲಿಷಿಗೆ ಪರ್ಯಾಯವಾಗಿ ಸ್ವೀಕರಿಸಲಾಗಿದೆ ಎಂದು ಭಾರತದ ಗೃಹಸಚಿವರು ಹೇಳಿರುವುದಾಗಿ ವರದಿಯಾಗಿದೆ. ಅಮಿತ್ ಶಾ ಹಠಾತ್ತಾಗಿ ಈ ಹಿಂದಿ–ಭಾರತ ಘೋಷಣೆ ನೀಡಿರುವುದೇಕೆ? ಇದನ್ನು ವಿಶ್ಲೇಷಿಸಿರುವ ಪ್ರಖ್ಯಾತ ಭಾಷಾಶಾಸ್ತ್ರಜ್ಞ, ಮತ್ತು 'ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯ' (ಭಾರತದ ಜನತಾ ಭಾಷಾ ಸರ್ವೆ)ಯ ಮುಖ್ಯ ಸಂಪಾದಕರೂ ಆಗಿರುವ ಡಾ.ಜಿ.ಎನ್.ದೇವಿಯವರು ಇದು ಬಿಜೆಪಿಯ ಬಹುಸಂಖ್ಯಾತವಾದೀ ಲೆಕ್ಕಾಚಾರದ ಭಾಗವಂತೂ ಆಗಿರಲಾರದು ಎನ್ನುತ್ತಾರೆ. ಏಕೆಂದರೆ 2011 ರ ಜನಗಣತಿಯ ಪ್ರಕಾರ, ಒಟ್ಟು ಜನಸಂಖ್ಯೆಯ ಶೇಕಡಾ 69 ರಷ್ಟು ಜನರು ಹಿಂದಿಯೇತರರಾಗಿದ್ದಾರೆ. ಬಹುಶಃ ಮುಂಬರುವ 2024 ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು, ಭಾಷಾಂಧತೆಯನ್ನು ಬಿತ್ತುವ ಮೂಲಕ ಅಧಿಕಾರ ಹಿಡಿಯಬೇಕೆಂಬ ತಂತ್ರದ ಭಾಗವಾಗಿರಬಹುದು ಇದು ಎಂದು 'ದಿ ಹಿಂದು' ಪತ್ರಿಕೆಯಲ್ಲಿ ಎಪ್ರಿಲ್ 14 ರಂದು ಪ್ರಕಟವಾಗಿರುವ ಲೇಖನದಲ್ಲಿ ಅವರು ವಿಶ್ಲೇಷಿಸುತ್ತಾರೆ. ಈ ಲೇಖನದ ಸಂಗ್ರಹಾನುವಾದ ಇಲ್ಲಿದೆ.

'ಹಿಂದಿ–ಭಾರತ'ದ ಕರೆ ಈಗೇಕೆ?

ಡಾ. ಜಿ.ಎನ್. ದೇವಿ
ಸಂಗ್ರಹಾನುವಾದ: ಟಿ. ಸುರೇಂದ್ರ ರಾವ್

ಪ್ರಾಚೀನ ಕಾಲದಿಂದಲೂ ಭಾಷಾ ಭಿನ್ನತೆಯ ಬಗ್ಗೆ ಸೂಕ್ಷ್ಮ ಸಂವೇದನೆ ದ್ರಾವಿಡ ಸ್ವಂತಿಕೆಯ ಮಾತ್ರವಲ್ಲ, ಪ್ರತಿಯೊಂದು ಭಾರತೀಯ ಭಾಷೆಯ ಸಂದರ್ಭದಲ್ಲೂ ಸ್ವಂತಿಕೆಯ ಒಂದು ಗುರುತಾಗಿದೆ. ನಿಜ, ಇದನ್ನು ಕುರಿತಂತೆ 2000 ವರ್ಷಗಳ ಹಿಂದಿನ ತಮಿಳು ಕೃತಿ 'ತೋಳ್ಕಪ್ಪಿಯಂ' ಬಗ್ಗೆಯಾಗಲೀ, ಒಂಭತ್ತು ಶತಮಾನಗಳ ಹಿಂದಿನ ಗುಜರಾತದ ಕೃತಿ 'ದೇಸೀನಾಮಮಾಲಾ'ದ ಬಗ್ಗೆಯಾಗಲೀ ಈಗಿನ ಭಾರತೀಯನೊಬ್ಬನಿಗೆ ಗೊತ್ತಿರಬೇಕು ಎಂದು ನಿರೀಕ್ಷಿಸಲು ಸಾಧ್ಯವಿಲ್ಲ. ಆದರೆ ಭಾರತ ಸರ್ಕಾರದ ಗೃಹ ಸಚಿವರಾಗಿರುವವರಿಗೆ ಏಳು ದಶಕಗಳ ಹಿಂದೆ ನಮ್ಮ ಗಣರಾಜ್ಯ ಅಂಗೀಕರಿಸಿದ 'ಸಂವಿಧಾನ'ದ ಬಗ್ಗೆ ತಿಳಿದಿರಬೇಕು ಎಂದು ನಿರೀಕ್ಷಿಸುವುದು ತಪ್ಪಾಗುತ್ತದೆಯೇ?

ನಮ್ಮ ಸಂವಿಧಾನವು ಎರಡು ಅಂಶಗಳನ್ನು ಬಹಳ ಸ್ಪಷ್ಟವಾಗಿ ನಿರೂಪಿಸಿದೆ. ಒಂದು, 'ಭಾರತವು ರಾಜ್ಯಗಳ ಒಂದು ಸಂಘ' ಮತ್ತು ಎರಡನೆಯದು, ರಾಜ್ಯಗಳ ನಡುವೆ ವ್ಯವಹರಿಸಲು ಸಂವಿಧಾನ ಅಂಗೀಕರಿಸುವಾಗ ಬಳಕೆಯಲ್ಲಿದ್ದ ಭಾಷೆಯು ಅಧಿಕೃತ ಭಾಷೆಯಾಗಬೇಕು. ಈಗಿರುವ ಇಂಗ್ಲಿಷ್ ಭಾಷೆಯ ಸ್ಥಾನವನ್ನು ಹಿಂದಿ ಭಾಷೆಯು ಅಲಂಕರಿಸಬೇಕಾದರೆ 'ಎರಡು ಅಥವಾ ಮೂರು ರಾಜ್ಯಗಳು ಆ ಬದಲಾವಣೆಗೆ ಒಪ್ಪಬೇಕು' ಎಂಬ ಕಟ್ಟಳೆಯನ್ನು ಭಾಷೆಗೆ ಸಂಬಂಧಪಟ್ಟ ಪರಿಚ್ಛೇದಗಳು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ಹೇಳಿವೆ. ಭಾಷೆಗೆ ಸಂಬಂಧಪಟ್ಟ ನಿಬಂಧನೆಗಳನ್ನು ರಕ್ಷಿಸಲು ಮೂವತ್ತು ಸದಸ್ಯರ ಸಮಿತಿಯೊಂದನ್ನು ರಚಿಸಬೇಕು, ಅದರಲ್ಲಿ ಇಪ್ಪತ್ತು ಸದಸ್ಯರು ಸಂಸತ್ತಿನಿಂದ ಮತ್ತು ಹತ್ತು ಜನರು ರಾಜ್ಯ ವಿಧಾನಸಭೆಗಳಿಂದ ಇರಬೇಕು.

ಭಾಷೆಯನ್ನು ಒಂದು ವಿಷಯವಾಗಿ ಎರಡು ಸಚಿವಾಲಯಗಳ – ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಹಾಗೂ ಗೃಹ ಸಚಿವಾಲಯಗಳ – ನಡುವೆ ಹಂಚಿರುವುದನ್ನೂ ವಿಶದಪಡಿಸಿದ ಸಂವಿಧಾನವು ಆ ಸಮಿತಿಯ ಕಾರ್ಯಭಾರ ಹಾಗೂ ವ್ಯಾಪ್ತಿಯನ್ನು ನಿಗದಿಪಡಿಸಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಭಾಷೆಗೆ ಸಂಬಂಧಪಟ್ಟಂತೆ ಶಿಕ್ಷಣ ಹಾಗೂ ಸಾಂಸ್ಕೃತಿಕ ಅಭಿವ್ಯಕ್ತಿಗೆ ಪ್ರೋತ್ಸಾಹ ನೀಡಬೇಕು; ಹಾಗೆಯೇ ಗೃಹ ಸಚಿವಾಲಯವು 'ಸಂಘ'ದೊಂದಿಗೆ ರಾಜ್ಯಗಳ ಸಂಬಂಧಗಳನ್ನು ರಕ್ಷಿಸುವ, ಭಾಷಾ ಅಲ್ಪಸಂಖ್ಯಾತರ ಭಾಷಿಕ ಹಕ್ಕುಗಳನ್ನು ಕಾಪಾಡುವ ಮತ್ತು ಹಿಂದಿಯನ್ನು ಉತ್ತೇಜಿಸುವ ಕಾರ್ಯನಿರ್ವಹಿಸಬೇಕು. ಹೀಗೆ ಕಾರ್ಯಭಾರವನ್ನು ಹಂಚುವಾಗ 'ಇತರ ಭಾಷೆಗಳೊಂದಿಗೆ ಹಸ್ತಕ್ಷೇಪವಿಲ್ಲದೆ' ಎಂದು ಬಹಳ ಸ್ಪಷ್ಟವಾಗಿ ಹೇಳಿದೆ.

ಭಾಷಾ ಬೆಳವಣಿಗೆಯ ಮಾಹಿತಿ

ಗೃಹ ಸಚಿವಾಲಯ ಮತ್ತು ಹಿಂದಿ ಭಾಷಾ ಸಮಿತಿಯ ಮುಂದೆ ಎರಡು ಬಹುಮಹತ್ವದ ಪ್ರಶ್ನೆಗಳಿವೆ: ಕಳೆದ ಏಳು ದಶಕಗಳಲ್ಲಿ ಹಿಂದಿ ಯಾವುದೇ ಬೆಳವಣಿಗೆಯನ್ನು ಕಂಡಿದೆಯೇ? ಕಂಡಿದ್ದರೆ, ಈ ಬೆಳವಣಿಗೆ ಇತರ ಭಾಷೆಗಳ ಬೆಳವಣಿಗೆಯಲ್ಲಿ ಹಸ್ತಕ್ಷೇಪ ಮಾಡಿದೆಯೇ? ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.

ಜನಗಣತಿ ಮಾಡುವಾಗ ಜನರ ಆಡುಭಾಷೆಯ ವಿವರಗಳನ್ನು ಪಡೆಯಲಾಗುತ್ತದೆ. 1991, 2001 ಮತ್ತು 2011 ಹೀಗೆ ಮೂರು ಜನಗಣತಿಯನ್ನು ಪರಿಗಣಿಸಿದಾಗ, ಹಿಂದಿ ಭಾಷೆಯನ್ನು ಹೊರತುಪಡಿಸಿದರೆ ಉಳಿದ ಪ್ರಮುಖ ಭಾಷೆಗಳಾದ ಬಾಂಗ್ಲಾ, ತೆಲುಗು, ಮರಾಠಿ, ಮುಂತಾದವುಗಳು ಅವುಗಳ ಜನಸಂಖ್ಯಾ ಬೆಳವಣಿಗೆಗೆ ಹೋಲಿಸಿದಾಗ ಇಳಿಮುಖ ಅನುಭವಿಸಿವೆ. ದೇಶದಲ್ಲಿ ಈಗ ಬದುಕುಳಿದಿರುವ ಅತ್ಯಂತ ಪ್ರಾಚೀನ ಭಾಷೆಯಾಗಿರುವ ತಮಿಳು ಮಾತಾಡುವವರ ಪ್ರಮಾಣ ಕೂಡ ಇಳಿಮುಖದಲ್ಲಿದೆ. 2011 ರ ಜನಗಣತಿಯ ಪ್ರಕಾರ ಕೈಗೆತ್ತಿಕೊಂಡರೆ, ಹಿಂದಿ ಭಾಷಿಕರ ಪ್ರಮಾಣ ಒಟ್ಟು ಜನಸಂಖ್ಯೆಯಲ್ಲಿ 43.63%. 1971ರಲ್ಲಿ ಇದು 36.99% ಇತ್ತು. ಹಿಂದಿಯ ನಂತರ ಅತಿ ಹೆಚ್ಚು ಪ್ರಮಾಣದಲ್ಲಿರುವ ಬಾಂಗ್ಲಾ ಭಾಷಿಕರ ಸಂಖ್ಯೆ 1991ರಲ್ಲಿ 8.3% ಇದ್ದದ್ದು, 2001ರಲ್ಲಿ 8.11%ಕ್ಕೆ ಮತ್ತು 2011ರಲ್ಲಿ 8.03%ಕ್ಕೆ ಇಳಿಯಿತು. ಮೂರನೇ ಸ್ಥಾನದಲ್ಲಿರುವ ತೆಲುಗಿನದ್ದೂ ಮತ್ತು ಇತರ ಭಾಷೆಗಳದ್ದೂ ಇದೇ ಅನುಭವ. ದೇಶದ ಅತೀ ಪ್ರಾಚೀನ ಆಡುಭಾಷೆ ತಮಿಳಿಗಾದರೂ ಗೃಹ ಸಚಿವಾಲಯ ಹೆಚ್ಚಿನ ಗಮನ ನೀಡಬೇಕಾಗಿತ್ತು. ಜನಗಣತಿ ಪ್ರಕಾರ ತಮಿಳು ಭಾಷಿಕರ ಪ್ರಮಾಣ 6.32% (1991), 5.91% (2001) ಮತ್ತು 5.7% (2011). ಸಂವಿಧಾನದ ಎಂಟನೇ ಪರಿಶಿಷ್ಟ(ಷೆಡ್ಯೂಲ್)ದಲ್ಲಿರುವ ಭಾಷೆಗಳ ಪರಿಸ್ಥಿತಿ – ಹಿಂದಿ ಮತ್ತು ಸಂಸ್ಕೃತವನ್ನು ಮತ್ತು ಬಹುಶಃ ಸ್ವಲ್ಪವೇ ಮಟ್ಟಿಗೆ ಗುಜರಾತಿಯನ್ನು ಹೊರತುಪಡಿಸಿದರೆ – ಹದಗೆಟ್ಟಿರುವುದೇ ಹೆಚ್ಚು. ಈ ಹಿನ್ನೆಲೆಯಲ್ಲಿ ಹಿಂದಿ ಭಾಷಾ ಉತ್ತೇಜನಕ್ಕಾಗಿ ಇರುವ ಸಂಸದೀಯ ಸಮಿತಿಯು ಹಿಂದಿಯನ್ನು ಹೊರತುಪಡಿಸಿ ಇತರ ಭಾರತೀಯ ಭಾಷೆಗಳ ಅವನತಿಯ ಕುರಿತು ಆತಂಕ ವ್ಯಕ್ತಪಡಿಸಬೇಕಿತ್ತು. ಒಂಭತ್ತನೇ ಶತಮಾನಕ್ಕೆ ಮುಂಚೆಯೇ ಒಂದು ಜೀವಂತ ಭಾಷೆಯಾಗಿರದ ಸಂಸ್ಕೃತ ಭಾಷೆಯ ಬೆಳವಣಿಗೆಯ ಕೊರತೆಯ ಕುರಿತು ಕೂಡ ಸಮಿತಿ ಕಾಳಜಿ ವಹಿಸಿಲ್ಲ.

ಹಿಂದಿ ಬೆಳವಣಿಗೆಯ ಕತೆಯೂ ಮಿಥ್ಯೆ

ಉಳಿದೆಲ್ಲಾ ಭಾಷೆಗಳು ಅವನತಿ ಹೊಂದುತ್ತಿರಬೇಕಾದರೆ, ಹಿಂದಿ ಭಾಷೆ ಮಾತ್ರ ಹೇಗೆ ಬೆಳೆಯುತ್ತಿದೆ ಎಂಬ ಸಂಶಯ ಸಹಜವಾಗಿಯೇ ಹುಟ್ಟುತ್ತದೆ. 2011 ರ ಜನಗಣತಿ ಪ್ರಕಾರ 52.83 ಕೋಟಿ ಜನರು ಹಿಂದಿ ಮಾತನಾಡುತ್ತಾರೆ. ಈ ಹಿಂದಿ ಮಾತನಾಡುವವರ ಸಂಖ್ಯೆಯಲ್ಲಿ 'ಹಿಂದಿ' ಭಾಷಿಕರು ಮಾತ್ರವಲ್ಲ, ಭೋಜ್‌ಪುರಿ, ಪವಾರಿ, ಮುಂತಾದ 50 ಭಾಷೆಗಳನ್ನಾಡುವವರನ್ನೂ ಸೇರಿಸಲಾಗಿದೆ. ಭೋಜ್‌ಪುರೀ ಭಾಷಿಕರ ಸಂಖ್ಯೆ 5 ಕೋಟಿ ಮಾತ್ರವಲ್ಲ, ಸಿನೆಮಾ, ಸಾಹಿತ್ಯ, ಪತ್ರಿಕೆಗಳು, ಹಾಡುಗಳು ಮಂತಾದವುಗಳಲ್ಲಿ ಅದು ಹೆಚ್ಚು–ಹೆಚ್ಚಾಗಿ ಕಾಣಿಸುತ್ತಿದೆ. ಹಿಮಾಚಲ ಪ್ರದೇಶ, ಉತ್ತರಾಖಂಡ, ಛತ್ತೀಸ್‌ಘರ್, ರಾಜಾಸ್ತಾನ್ ಮತ್ತು ಝಾರ್ಖಂಡ್ ರಾಜ್ಯಗಳ ಭಾಷೆಗಳೂ ಅವುಗಳದ್ದೇ ಆದ ಪ್ರತ್ಯೇಕ ಅಸ್ತಿತ್ವ ಹೊಂದಿದ್ದು ಕೋಟ್ಯಾಂತರ ಸಂಖ್ಯೆಯ ಭಾಷಿಕರು ಇದ್ದಾರೆ. ಅವರನ್ನು 'ಹಿಂದಿ ಭಾಷಿಕ'ರೆಂದು ಪರಿಗಣಿಸಲಾಗಿದೆ.

ಆದ್ದರಿಂದ ಹಿಂದಿಯ ಬೆಳವಣಿಗೆಯ ಕತೆಯೂ ಒಂದು ಮಿಥ್ಯೆಯೇ. ಜನಗಣತಿಯಲ್ಲಿ ಈ ಭಾಷೆಗಳನ್ನು 'ಹಿಂದಿ' ಪಟ್ಟಿಯಲ್ಲಿ ಸೇರಿಸದೇ ಇದ್ದಿದ್ದರೆ, ನಿಜವಾದ ಹಿಂದಿ ಭಾಷಿಕರಾಗಿ ಉಳಿಯುವುದು ಕೇವಲ 39 ಕೋಟಿಯಷ್ಟೆ, ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕೇವಲ 32%! ಹಿಂದಿ ಭಾಷಿಕರ ಸಂಖ್ಯೆಯ ಬಗ್ಗೆ ಸಂಸದೀಯ ಸಮಿತಿಯು ಹೆಚ್ಚು ವಾಸ್ತವಿಕ ಅಂಶಗಳನ್ನು ಪರಿಗಣಿಸಲು ಸಾಧ್ಯವಾಗಬೇಕಿತ್ತು.

ಇತರ ಭಾಷೆಗಳೂ ಬೆಳಗುತ್ತಿವೆ

ಇತರ ಸಣ್ಣ ದೊಡ್ಡ ಭಾಷೆಗಳಂತೆಯೇ ಹಿಂದಿ ಕೂಡ ಒಂದು ಸುಂದರ ಮತ್ತು ಶ್ರೀಮಂತ ಭಾಷೆ ಎನ್ನುವ ಬಗ್ಗೆ ಯಾರದ್ದೂ ತಕರಾರಿಲ್ಲ. ಹಿಂದಿ ಸಿನಿಮಾಗಳು ದೇಶಕ್ಕೆ ಒಳ್ಳೆಯ ಹೆಸರು ಹಾಗೂ ಹಣವನ್ನೂ ತಂದುಕೊಟ್ಟಿವೆ. ಆದರೆ ಸಂವಿಧಾನದ ಎಂಟನೇ ಪರಿಶಿಷ್ಟದಲ್ಲಿರುವ ಇತರ ಭಾಷೆಗಳಿಗಿಂತ ಹಿಂದಿ ಬಹಳ ಇತ್ತೀಚಿನದು ಎಂಬುದು ಕೂಡ ನಿಜ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ನಿಜ ಹೇಳಬೇಕೆಂದರೆ, ತಮಿಳು, ಕನ್ನಡ, ಕಾಶ್ಮೀರಿ, ಮರಾಠಿ, ಒರಿಯಾ, ಸಿಂಧಿ, ನೇಪಾಳಿ ಮತ್ತು ಅಸ್ಸಾಮಿ ಭಾಷೆಗಳು ಇನ್ನೂ ದೀರ್ಘಕಾಲದ ಇತಿಹಾಸ ಹೊಂದಿವೆ. ಜ್ಞಾನವ್ಯಾಪ್ತಿಯಲ್ಲಿ ಕೂಡ ತಮಿಳು, ಕನ್ನಡ, ಬಾಂಗ್ಲಾ ಹಾಗೂ ಮರಾಠಿ ಭಾಷೆಗಳು ಹಿಂದಿ ಭಾಷೆಗಿಂತ ಹೆಚ್ಚು ಬೆಳಗುತ್ತವೆ. ಯಾವುದೇ ಭಾಷೆ ನಿಧಾನವಾಗಿ ವಿಕಾಸಗೊಳ್ಳುತ್ತದೆ, ಅದನ್ನು ಒಂದು ಸುಗ್ರೀವಾಜ್ಞೆ ಹೊರಡಿಸಿ ಬಲವಂತವಾಗಿ ಬೆಳೆಸಲು ಆಗುವುದಿಲ್ಲ.

ಕಳಪೆ ಅರ್ಥಶಾಸ್ತ್ರ, ಅಸಂಬದ್ಧ ಭಾಷಾಶಾಸ್ತ್ರ


ಹಿಂದಿ ಭಾಷೆಯ ಇತಿಹಾಸ, ಭಾರತದ ಬಹುಭಾಷಾ ಪರಂಪರೆ, ಭಾರತದ ಒಕ್ಕೂಟ ವ್ಯವಸ್ಥೆ ಮತ್ತು ವಿವಿಧ ರಾಜ್ಯಗಳಲ್ಲಿನ ಭಾಷಾ ಸೂಕ್ಷ್ಮತೆ ಹಾಗೂ ಸಂವೇದನೆಗಳು ಸಂಸದೀಯ ಸಮಿತಿ ಮತ್ತು ಅಧಿಕೃತ ಭಾಷಾ ಸಮಿತಿಗಳಿಗೆ ಸರಿಯಾಗಿ ಮಾರ್ಗದರ್ಶನ ಮಾಡಬೇಕಿತ್ತು. ಭಾಷಾ ವಾಸ್ತವತೆಯನ್ನು ಈ ಸಮಿತಿಗಳು ಒಪ್ಪುವಂತೆ ಮಾಡಬೇಕಿತ್ತು. ನಿಜ ಸ್ಥಿತಿ ಹೀಗಿರುವಾಗ, ಗೃಹ ಸಚಿವ ಅಮಿತ್ ಶಾ ಹಠಾತ್ತಾಗಿ ಹಿಂದಿ–ಭಾರತ ಎಂಬ ಘೋಷಣೆ ನೀಡುವ ಅಗತ್ಯವೇನಿತ್ತು? ಪ್ರಾಯಶಃ ಅದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಿದ್ಧಾಂತವೂ ಅಲ್ಲ, ಅಥವಾ ಭಾರತೀಯ ಜನತಾ ಪಕ್ಷದ ಹಿಂದಿ–ಹಿಂದು ರಾಷ್ಟ್ರೀಯತೆಯೂ ಅಲ್ಲ. ಹಾಗೂ ಅದು ಬಿಜೆಪಿಯ ಬಹುಸಂಖ್ಯಾತವಾದೀ ಪ್ರಜಾಪ್ರಭುತ್ವದ ಆಲೋಚನೆಯೂ ಆಗಿರಲಾರದು. ಏಕೆಂದರೆ 2011 ರ ಜನಗಣತಿಯು ಹೊರಹಾಕಿದ ಅಂಕಿಅಂಶಗಳ ಪ್ರಕಾರ 52 ಕೋಟಿ ಹಿಂದಿ ಭಾಷಿಕರು 121 ಕೋಟಿ ಒಟ್ಟು ಜನಸಂಖ್ಯೆಯಲ್ಲಿ ಭಾಷಾ ಬಹುಸಂಖ್ಯಾತರೂ ಅಲ್ಲ. ವಾಸ್ತವವಾಗಿ 2011 ರ ಜನಗಣತಿಯ ಪ್ರಕಾರವೇ ಒಟ್ಟು ಜನಸಂಖ್ಯೆಯ ಶೇಕಡಾ 69 ರಷ್ಟು ಜನರು ಹಿಂದಿಯೇತರರಾಗಿದ್ದಾರೆ.

ಸತ್ಯ ಸಂಗತಿ ಏನೆಂದರೆ ಭಾರತದ ಯುವಜನರನ್ನು ಕಾಡುತ್ತಿರುವ ನಿರುದ್ಯೋಗ ಸಮಸ್ಯೆಯ ಹಿನ್ನೆಲೆಯಲ್ಲಿ ಅಪಾರ ಸಂಖ್ಯೆಯಲ್ಲಿರುವ ಹಿಂದಿ ಪ್ರದೇಶದ ಯುವಜನರ ಅತೃಪ್ತಿಗೆ ಮುಲಾಮು ಹಚ್ಚುವ ತಂತ್ರದ ಭಾಗವಾಗಿ ಅಮಿತ್ ಶಾ ಆ ನುಡಿಮುತ್ತುಗಳನ್ನು ಉದುರಿಸಿರಬೇಕು. ಮುಂಬರುವ 2024 ರ ಲೋಕಸಭಾ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಭಾಷಾಂಧತೆಯನ್ನು ಬಿತ್ತುವ ಮೂಲಕ ಅಧಿಕಾರ ಹಿಡಿಯಬೇಕೆಂಬ ದುರಾಸೆಯ ಭಾಗವಾಗಿದೆ ಅವರ ಮಾತುಗಳು. ಭಾರತದ ಸುಭದ್ರತೆಗೆ ಪಾಕಿಸ್ತಾನ ಅಪಾಯ ಎಂದು ಬಿಂಬಿಸಿ ಹಿಂದೂಗಳ ಮತಪಡೆಯುವ ತಂತ್ರ ಈ ಬಾರಿ ಉಪಯೋಗಕ್ಕೆ ಬರಲಾರದು ಎಂದೆನಿಸಿರಬೇಕು. ಆದರೆ ಅವರಿಗೆ ಗೊತ್ತಿರಬೇಕು ಇಂಗ್ಲಿಷ್ ಭಾಷೆಯ ವಿರುದ್ಧ ದೇಶವಿರೋಧಿ ಭಾವನೆಗಳನ್ನು ಸೃಷ್ಟಿಸಿ ಹಿಂದಿ ಭಾಷಿಕರನ್ನು ಭಾವನಾತ್ಮಕವಾಗಿ ಕೆರಳಿಸಿ ಮತ ಪಡೆಯುವ ತಂತ್ರ ಕೂಡ ಫಲಿಸಲಾರದು. ಅದೊಂದು ತೀರ ಕಳಪೆಯ ಅರ್ಥಶಾಸ್ತ್ರವಾಗುತ್ತದೆ ಹಾಗೂ ಅಸಂಗತ ಭಾಷಾಶಾಸ್ತ್ರವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಒಕ್ಕೂಟ ವಿರೋಧಿ ರಾಜಕೀಯವಾಗುತ್ತದೆ. ಭಾರತಕ್ಕೆ ಇವೆಲ್ಲಾ ಬೇಕೇನು?



ಜನದ್ರೋಹಿ ಸರ್ಕಾರ ತೊಲಗಬೇಕು

ಕೇಂದ್ರದ ಮೋದಿ ಸರ್ಕಾರವಾಗಲೀ, ರಾಜ್ಯದ ಬೊಮ್ಮಾಯಿ ಸರ್ಕಾರವಾಗಲೀ, ಎರಡೂ ಬಿಜೆಪಿ ಸರ್ಕಾರಗಳು, ರೈತರು, ಕಾರ್ಮಿಕರು, ಇತರೆ ದುಡಿಯುವ ಜನವರ್ಗಗಳ ಹಿತಾಸಕ್ತಿಯನ್ನು ಕೈಬಿಟ್ಟಿವೆ. ಶ್ರೀಮಂತರಿಗೆ ಕಾರ್ಪೋರೇಟ್ ಕಂಪನಿಗಳಿಗೆ ಸರ್ಕಾರವನ್ನು ನಡೆಸುತ್ತಿವೆ. ಮತದ್ವೇಷ, ಕೋಮುಗಲಭೆಗಳು, ಹಿಂಸೆ, ದೌರ್ಜನ್ಯಗಳನ್ನು ಹೆಚ್ಚು ಮಾಡಿ ಜನರನ್ನು ವಿಭಜನೆ ಮಾಡುತ್ತಿವೆ. ಈ ನೀತಿಗಳನ್ನು ಸೋಲಿಸದಿದ್ದರೆ ಜನರ ಬದುಕಿಗೆ ರಕ್ಷಣೆಯಿಲ್ಲ. ಸಿಪಿಐ(ಎಂ) ರಾಜ್ಯ ಸಮಿತಿಯು ರಾಜ್ಯಾದ್ಯಂತದ ಪ್ರಚಾರಾಂದೋಲನಕ್ಕೆ ಕರೆ ನೀಡಿದೆ. ಸಿಪಿಐ(ಎಂ) ನ ರಾಜಕೀಯ ಆಂದೋಲನದ ಬಗ್ಗೆ ವಿವರಿಸಿದ್ದಾರೆ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡಾ. ಕೆ. ಪ್ರಕಾಶ್ ಅವರು.



ಕುಸಿಯುತ್ತಿರುವ ಆರ್ಥಿಕತೆ

ರಾಜ್ಯವು ಅಭಿವೃದ್ಧಿಯ ಸುವರ್ಣಯುಗದಲ್ಲಿದೆ ಎಂದು ಬಿಜೆಪಿ ಅಧ್ಯಕ್ಷರು ಹೇಳಿದ್ದಾರೆ. ಇದರಿಂದಾಗಿ ಅಭಿವೃದ್ಧಿ ಎಂಬುದರ ಬಗ್ಗೆಯೇ ಅಸಹ್ಯ ಪಡುವಂತಾಗಿದೆ. ರಾಜ್ಯದ ಇತ್ತೀಚಿನ 2.66 ಲಕ್ಷ ಕೋಟಿ ರೂ. ಗಳ ಬಜೆಟ್‌ನಲ್ಲಿ 72 ಸಾವಿರ ಕೋಟಿ ರೂ. ಗಳ ಸಾಲವಿದೆ. ರಾಜ್ಯದ ಒಟ್ಟಾರೆ ಸಾಲ 2022–23 ರಲ್ಲಿ 5.18 ಲಕ್ಷ ಕೋಟಿ ರೂ. ಗಳು 2024–25 ರಲ್ಲಿ ರಾಜ್ಯದ ಸಾಲ 7.38 ಲಕ್ಷ ಕೋಟಿಗಳಾಗಲಿದೆ. ಈ ವರ್ಷ ಜಿಎಸ್‌ಟಿ ಪರಿಹಾರ ಕೊನೆಗೊಳ್ಳುವುದರಿಂದ ರಾಜ್ಯದ ಕಂದಾಯವು ಕುಸಿಯಲಿದೆ. ಪರಿಣಾಮವಾಗಿ ಮುಂಬರುವ ದಿನಗಳಲ್ಲಿ ಸರ್ಕಾರದ ಬಳಿ ಖರ್ಚಿಗೆ ಕಾಸಿಲ್ಲ ಎಂಬ ಪರಿಸ್ಥಿತಿ ಬರಲಿದೆ. ಇದರ ಒಟ್ಟಾರೆ ಹೊರೆಯನ್ನು ಸಾಮಾನ್ಯ ಜನರ ಮೇಲೆ ಹೊರಿಸುವ ಅಪಾಯವನ್ನು ಬೊಮ್ಮಾಯಿ ಸರ್ಕಾರ ಉಂಟು ಮಾಡಿದೆ. ಆಡಳಿತ ಸಂಪೂರ್ಣ ಕುಸಿದಿರುವುದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಕಷ್ಟಕ್ಕೆ ಸಿಲುಕಲಿದೆ. ಬಜೆಟ್ ಭರವಸೆಗಳನ್ನು ಈಡೇರಿಸಲು ಕಂದಾಯ ಸಂಗ್ರಹಕ್ಕೆ ಕೇಂದ್ರದ ಮಾದರಿಯಲ್ಲಿ ನಗದೀಕರಣ ಯೋಜನೆ ಜಾರಿ ಮಾಡುವ ಬಗ್ಗೆ ಹೇಳಲಾಗಿದೆ. ಬಿಟಿಪಿಎಸ್, ಆರ್‌ಟಿಪಿಎಸ್, ಸಾರಿಗೆ ನಿಗಮಗಳು ಮುಂತಾದ ರಾಜ್ಯದ ಸ್ವತ್ತುಗಳನ್ನು ಮಾರಲು ಯೋಜಿಸಲಾಗಿದೆ. ಹಣಕಾಸು ಕೊರತೆ ತುಂಬಲು ಕೇಂದ್ರ ಸರ್ಕಾರ ವಿಧಿಸಿರುವ ಸಾಲದ ಷರತ್ತುಗಳನ್ನು ಪೂರೈಸಲು ರಾಜ್ಯ ಸರ್ಕಾರ ಸಿದ್ಧವಾಗಿದೆ. ಇವೆಲ್ಲವುಗಳ ಪರಿಣಾಮವಾಗಿ ರಾಜ್ಯವು ಒಂದು ದೀರ್ಘಾವಧಿ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಲಿದೆ. ಸಾಮಾನ್ಯ ಜನ ಇದರಿಂದ ತೀರಾ ತೊಂದರೆಗೆ ಸಿಲುಕಬೇಕಾಗಿದೆ.

ಬೆಲೆ ಏರಿಕೆ

ಎಲ್ಲಾ ಅಗತ್ಯ ವಸ್ತುಗಳ ಬೆಲೆಯು ಆಕಾಶವನ್ನೇ ನೋಡುತ್ತಿವೆ. ತೈಲ ಮತ್ತು ಅನಿಲ ಬೆಲೆಗಳ ವಿಪರೀತ ಹೆಚ್ಚಳ ಜನರ ಬದುಕನ್ನು ಹೈರಾಣಾಗಿಸಿದೆ. ಒಂದು ಅಡಿಗೆ ಅನಿಲದ ಸಿಲಿಂಡರ್ ಬೆಲೆ 1,000 ರೂ ದಾಟಿದೆ. ಪೆಟ್ರೋಲ್ ಮತ್ತು ಡೀಸೆಲ್ ಪ್ರತಿ ಲೀಟರ್ ಮೇಲೆ ಸರಾಸರಿ 20 ರಿಂದ 25 ರೂ ಹೆಚ್ಚಾಗಿದೆ. ಇದರಿಂದ ಸರಕು ಸಾಗಣೆ ವೆಚ್ಚ ಹೆಚ್ಚಾಗಿದೆ. ಪರಿಣಾಮವಾಗಿ ದಿನನಿತ್ಯ ಬಳಸುವ ಅಗತ್ಯ ವಸ್ತುಗಳ ಬೆಲೆಗಳು ಹೆಚ್ಚಾಗಿವೆ. ಸಾಮಾನ್ಯ ದ್ವಿಚಕ್ರ ವಾಹನ ಬಳಸುವವರು ಪೆಟ್ರೋಲ್‌ಗೆ ತಿಂಗಳಿಗೆ ಕನಿಷ್ಟ 1,000 ರೂ. ಹೆಚ್ಚು ಖರ್ಚು ಮಾಡಬೇಕಾಗಿದೆ. ಪೆಟ್ರೋಲಿಯಂ ವಸ್ತುಗಳ ಮೇಲಿನ ಸುಲಿಗೆಕೋರ ಅಬಕಾರಿ ಸುಂಕಗಳ ದರಗಳನ್ನು ಕಡಿತಗೊಳಿಸಬೇಕೆಂಬ ಕೂಗಿಗೆ ಸರ್ಕಾರ ಕಿವುಡಾಗಿದೆ. ಬದಲಿಗೆ ಅಬಕಾರಿ ಸುಂಕಗಳನ್ನು ಹೆಚ್ಚಿಸುತ್ತಲೇ ಇದೆ. ಹೀಗಾಗಿಯೇ ಡಬಲ್ ಇಂಜಿನ್ ಸರ್ಕಾರಗಳು ಜನರ ರಕ್ಷಣೆಯನ್ನು ಕೈಬಿಟ್ಟಿವೆ. ಕಾರ್ಪೊರೇಟ್ ಕಂಪನಿಗಳಿಗೆ ರಿಯಾಯಿತಿಗಳನ್ನು ಕೊಡುತ್ತಿವೆ.

ಆಡಳಿತ ಕುಸಿತ

ಆಡಳಿತದಲ್ಲಿ ಪಾರದರ್ಶಕತೆ, ಅಭಿವೃದ್ಧಿ, ಚುರುಕುತನ, ಜನಪರ ಆದ್ಯತೆ ಎಲ್ಲವೂ ಬಿಜೆಪಿ ರಾಜ್ಯ ಸರ್ಕಾರದಲ್ಲಿ ಕಣ್ಮರೆಯಾಗಿವೆ. ಜನರ ಕೆಲಸಗಳಾಗಲೀ, ಅಭಿವೃದ್ಧಿ ಕೆಲಸಗಳಾಗಲೀ ನಿಂತು ಹೋಗಿದ್ದು ಆಡಳಿತ ಅಧಃಪತನವಾಗಿದೆ. ಮಂತ್ರಿಗಳು ಕಮಿಷನ್ ದಂಧೆ, ಭ್ರಷ್ಟಾಚಾರ, ಕೋಮುಪ್ರಚೋದಕ ಭಾಷಣಗಳು, ಮತೀಯ ದ್ವೇಷವನ್ನು ಹೆಚ್ಚಿಸುವ ಕೆಲಸಗಳಲ್ಲಿ ನಿರತರಾಗಿರುವುದರಿಂದ, ರಾಜ್ಯ ಸರ್ಕಾರದ 41 ಇಲಾಖೆಗಳಲ್ಲಿ 2,17,015 ಕಡತಗಳು ವಿಲೇವಾರಿಯಾಗದೆ ಬಾಕಿ ಉಳಿದಿವೆ. ಜಿಲ್ಲಾ ಕೇಂದ್ರಗಳಲ್ಲೇ ಉಳಿದು ಬಾಕಿ ಕಡತಗಳ ವಿಲೇವಾರಿ ಮಾಡಲಾಗುವುದೆಂದು ಹೇಳಿ ತಿಂಗಳುಗಳೇ ಕಳೆದರೂ ಆರ್. ಅಶೋಕ್ ಅವರ ಇಲಾಖೆಯಲ್ಲೇ 11,221 ಕಡತಗಳು ಬಾಕಿಯಿವೆ. ಕಡತಗಳ ವಿಳಂಬ ಎಂಬುದು ಭ್ರಷ್ಟಾಚಾರದ ಇನ್ನೊಂದು ವಿಧಾನವಾಗಿದೆ. ಅಹಿತಕರ ಘಟನೆಗಳು, ಕೋಮುಗಲಭೆಗಳಿಗೆ ದಾರಿ ಮಾಡಿಕೊಡುವ ಕೃತ್ಯಗಳು, ಧಾರ್ಮಿಕ ದ್ವೇಷ, ಅಸಹಿಷ್ಣುತೆ, ಕೋಮುಪ್ರಚೋದಕ ಭಾಷಣಗಳು ಮತ್ತು ಹೇಳಿಕೆಗಳು ರಾಜ್ಯ ಸರ್ಕಾರದಲ್ಲಿ ಪ್ರಾಧಾನ್ಯತೆಯನ್ನು ಪಡೆದುಕೊಂಡಿರುವುದರಿಂದ ಸಂವಿಧಾನಿಕ ಆಡಳಿತ ಕುಸಿದು ಹೋಗಿದೆ.

ಭ್ರಷ್ಟಾಚಾರ

ಪ್ರಧಾನಿ ಮೋದಿ ಹಿಂದಿನ ರಾಜ್ಯ ಸರ್ಕಾರವನ್ನು 10% ಸರ್ಕಾರ ಎಂದಿದ್ದರು. ಈಗ ಅವರದೇ ಬಿಜೆಪಿ ಸರ್ಕಾರ "40% ಕಮಿಷನ್ ಸರ್ಕಾರ" ಎಂದಾಗಿದೆ. ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಷನಲ್ ಇಂಡಿಯಾ ಸಮೀಕ್ಷೆ ಪ್ರಕಾರ ಭ್ರಷ್ಟಾಚಾರದಲ್ಲಿ ಕರ್ನಾಟಕ 4 ನೇ ಸ್ಥಾನದಲ್ಲಿದೆ. ಭೂಮಿ ನೋಂದಣಿ, ಭೂ ಸಮಸ್ಯೆಗಳು, ನಾಗರಿಕ ಪ್ರಶ್ನೆಗಳು, ಪೊಲೀಸ್ ಠಾಣೆಗಳು ಹೀಗೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಲಂಚವಿಲ್ಲದೆ ಕೆಲಸವೇ ಆಗುವುದಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಗುತ್ತಿಗೆದಾರ ಸಂತೋಷ್ ಸಾವಿಗೆ ಸಚಿವ ಈಶ್ವರಪ್ಪ 40% ಕಮಿಷನ್ ಕೇಳಿರುವುದು ಕಾರಣವಾಗಿದೆ. ಈಶ್ವರಪ್ಪನವರು ಆರೋಪಮುಕ್ತರಾಗಿ ಹೊರಬರುತ್ತಾರೆ ಎಂದು ಸ್ವತಃ ಮುಖ್ಯಮಂತ್ರಿ ಮತ್ತು ಗೃಹಮಂತ್ರಿ ಹೇಳಿರುವುದರಿಂದ ತನಿಖೆ ಹಳ್ಳ ಹಿಡಿಯುವ ಸೂಚನೆ ನೀಡಿದ್ದಾರೆ. ಇತ್ತೀಚೆಗೆ 585 ಪಿಎಸ್‌ಐ ಹುದ್ದೆಗಳ ಆಯ್ಕೆಯಲ್ಲಿ ಬೃಹತ್ ಹಗರಣ ನಡೆದಿದ್ದು ಬಿಜೆಪಿ ನಾಯಕಿ ಇದರ ಸೂತ್ರಧಾರಿಣಿ ಎಂದಾಗಿದೆ. ಈಕೆ ಕುಟುಂಬದೊಂದಿಗೆ ಗೃಹಸಚಿವರಿಗೆ ನಿಕಟ ಸಂಬಂಧವಿದೆ. ಇದರ ತನಿಖೆಯ ಫಲಿತಾಂಶ ಊಹಿಸಿಕೊಳ್ಳುವುದು ಕಷ್ಟವಿಲ್ಲ. ಗೋಶಾಲೆಯ ದನಗಳ ಮೇವು ಸರಬರಾಜಿನ ಬಿಲ್ ಪಾವತಿಗೆ 40% ಕಮಿಷನ್‌ಗೆ ಬೇಡಿಕೆಯಿಟ್ಟಿರುವ ಹಗರಣ ಬೆಳಕಿಗೆ ಬಂದಿದೆ. ಪರೀಕ್ಷೆ ನಿರ್ವಹಣೆ ತಂತ್ರಾಂಶ ವ್ಯವಸ್ಥೆ ಗುತ್ತಿಗೆ ನೀಡಲು ಶಿಕ್ಷಣ ಸಚಿವರ ಕಛೇರಿಯಲ್ಲಿ ಶೇ.20 ಕಮಿಷನ್ ಹಗರಣ ಹೊರಬಂದಿದೆ.





ಭ್ರಷ್ಟಾಚಾರ, ಕಮಿಷನ್, ಲಂಚಕ್ಕೆ ಬೇಡಿಕೆ, ವರ್ಗಾವಣೆಗೆ ಬೇಡಿಕೆ, ಅಧಿಕಾರಿಗಳಿಂದ ಹಣ ವಸೂಲಿ ಮಾಡಿರುವ ಆರೋಪಗಳಿಗೆ ಒಳಗಾಗಿರುವ ಸಚಿವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿಲ್ಲ. ಗೃಹ ಮಂತ್ರಿ ಅರಗ ಜ್ಞಾನೇಂದ್ರ, ಕೃಷಿ ಸಚಿವ ಬಿ.ಸಿ. ಪಾಟೀಲ್, ಕಂದಾಯ ಸಚಿವ ಆರ್. ಅಶೋಕ್, ಅಬಕಾರಿ ಸಚಿವ ಗೋಪಾಲಯ್ಯ, ಪುಟ 10 ಕ್ಕೆ







ರಂಜಾನ್ ಮಾಸದ ಅಂಗವಾಗಿ ಸೌಹಾರ್ದ ಸಮಾಗಮ ಕೂಟ

ರಂಜಾನ್ ಮಾಸದ ಅಂಗವಾಗಿ ಸೌಹಾರ್ದ ಸಮಾಗಮ ಕೂಟವನ್ನು ಮಾವಳ್ಳಿಯಲ್ಲಿ ಸಿಪಿಐ(ಎಂ) ಬಸವನಗುಡಿ ವಲಯ ಸಮಿತಿ ಮತ್ತು ಡಿ.ಎಸ್.ಎಸ್(ಅಂಬೇಡ್ಕರ್ ವಾದ) ಬೆಂಗಳೂರು ಜಿಲ್ಲಾ ಸಮಿತಿಯಿಂದ ಆಯೋಜಿಸಲಾಯಿತು.

ಸೌಹಾರ್ದ ಸಮಾಗಮ ಕೂಟದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಎಸ್.ವೈ. ಗುರುಶಾಂತ್, ಬಿ.ಎನ್. ಮಂಜುನಾಥ್, ಡಿಎಸ್‌ಎಸ್ ನ ಮಾವಳ್ಳಿ ಶಂಕರ್ ಹಾಗೂ ಮುಂತಾದವರು ಇದ್ದರು.

ಜನದ್ರೋಹಿ ಸರ್ಕಾರ ತೊಲಗಬೇಕು........ ಪುಟ 9 ರಿಂದ


ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ, ಪಶುಸಂಗೋಪನಾ ಸಚಿವ ಪ್ರಭು ಚೌಹಾನ್, ಶಿಕ್ಷಣ ಸಚಿವ ಅಶ್ವಥ್‌ನಾರಾಯಣ, ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್, ಹೀಗೆ ಇನ್ನೂ ಹಲವು ಸಚಿವರ ಮೇಲೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಬದಲಿಗೆ ತನಿಖೆಗಳನ್ನು ಹಳ್ಳ ಹಿಡಿಸುವ ಧೋರಣೆಯನ್ನೇ ಬೊಮ್ಮಾಯಿ ಸರ್ಕಾರ ಅನುಸರಿಸುತ್ತಿದೆ.

ಕೃಷಿ ಕಾಯ್ದೆಗಳು

"ರೈತ ಕೃಷಿ"ಯ ಜಾಗದಲ್ಲಿ "ಕಾರ್ಪೊರೇಟ್ ಕೃಷಿ" ಸ್ಥಾಪಿಸಲು ಬಿಜೆಪಿ ಸರ್ಕಾರ ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆ ತಿದ್ದುಪಡಿಗಳನ್ನು ತಂದಿದೆ. ಕೇಂದ್ರ ಸರ್ಕಾರ ಇಂತಹುದೇ ಕೃಷಿ ಕಾಯ್ದೆಗಳನ್ನು ದೆಹಲಿ ರೈತ ಹೋರಾಟದ ಪರಿಣಾಮವಾಗಿ ವಾಪಸ್ ಪಡೆದಿದೆ. ಆದರೆ ರಾಜ್ಯ ಸರ್ಕಾರ ಇವುಗಳನ್ನು ವಾಪಸ್ ಪಡೆಯುತ್ತಿಲ್ಲ. ಕೃಷಿ ಭೂಮಿ, ಕೃಷಿ ಉತ್ಪಾದನೆ ಮತ್ತು ಕೃಷಿ ಮಾರುಕಟ್ಟೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸುವ ಉದ್ದೇಶ ಇದರಲ್ಲಿದೆ. ಇದು ಸಂಪೂರ್ಣವಾಗಿ ರೈತವಿರೋಧಿ, ಜನವಿರೋಧಿ ಮತ್ತು ದಲಿತ ವಿರೋಧಿಯಾಗಿದೆ. ಭೂರಹಿತರಿಗೆ ಭೂಮಿ ಹಂಚಿಕೆ ಮಾಡುವುದನ್ನು ಕಡೆಗಣಿಸಿ, ಸಾರ್ವಜನಿಕ ಅಗತ್ಯಗಳನ್ನು ಕಡೆಗಣಿಸಿ, ರಾಜ್ಯದ ಗೋಮಾಳ, ಕಂದಾಯ ಇತ್ಯಾದಿ ಭೂಮಿಗಳನ್ನು ಆರ್‌ಎಸ್‌ಎಸ್ ಪರಿವಾರದ ಸಂಘಟನೆಗಳಿಗೆ ಪರಭಾರೆ ಮಾಡಲು ಬಿಜೆಪಿ ಸರ್ಕಾರ ಹೊರಟಿದೆ.

ಕಾರ್ಮಿಕ ಸಂಹಿತೆಗಳು

ಸಂಸತ್ತಿನಲ್ಲಿ ಯಾವುದೇ ಚರ್ಚೆಯಿಲ್ಲದೆ ಕೋವಿಡ್ ಸಂದರ್ಭದಲ್ಲಿ ಕಾರ್ಮಿಕ ವಿರೋಧಿಯಾದ 4 ಸಂಹಿತೆಗಳನ್ನು ಕಾರ್ಪೊರೇಟ್ ಬಂಡವಾಳದ ಪರವಾಗಿ ಜಾರಿಗೊಳಿಸಲಾಗಿದೆ. ಇದಕ್ಕೆ ಪೂರಕವಾಗಿ ರಾಜ್ಯದ ಬಿಜೆಪಿ ಸರ್ಕಾರ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ಮಾಡಿ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಈ ಸಂಹಿತೆಗಳು ಜಾರಿಯಾದರೆ ಕಾರ್ಮಿಕರು ಸಂಘ ಕಟ್ಟುವ, ಸಾಮೂಹಿಕ ಚೌಕಾಸಿ ನಡೆಸುವ, ಮುಷ್ಕರ ನಡೆಸುವ ಹಕ್ಕುಗಳು ಇದ್ದರೂ ಇಲ್ಲದಂತಾಗಲಿದೆ. ನಿಗದಿತ ಕಾಲಾವಧಿಯ ಕಾರ್ಮಿಕರ (ಎಫ್‌ಟಿಇ) ನೇಮಕದಿಂದಾಗಿ ಖಾಯಂ ಕಾರ್ಮಿಕರು ಇಲ್ಲವಾಗಲಿದ್ದಾರೆ. 300ಕ್ಕಿಂತ ಕಡಿಮೆ ಕಾರ್ಮಿಕರಿದ್ದಲ್ಲಿ ಲೇ-ಆಫ್, ರಿಟ್ರೆಂಚ್‌ಮೆಂಟ್ ಮತ್ತು ಕಾರ್ಖಾನೆ ಮುಚ್ಚಲು ಸರ್ಕಾರದ ಅನುಮತಿ ಅಗತ್ಯ ಇಲ್ಲದಿರುವುದರಿಂದ ಶೇ.90.76 ರಷ್ಟು ಕೈಗಾರಿಕೆಗಳು ರಾಜ್ಯ ಸರ್ಕಾರದ ಪೂರ್ವ ಅನುಮತಿ ಇಲ್ಲದೆ ಯಾವಾಗ ಬೇಕಾದರೂ ಕಾರ್ಖಾನೆ ಮುಚ್ಚಲು ಮುಕ್ತ ಅವಕಾಶ ಕಲ್ಪಿಸಲಿದೆ. ಕಾರ್ಮಿಕರ ಮೇಲೆ ಅಧಿಕ ಉತ್ಪಾದನೆಯ ಒತ್ತಡ ಹೇರುವುದು, ಕಾಮಿಕರು ಒಪ್ಪದಿದ್ದಲ್ಲಿ ಸ್ವಯಂ ನಿವೃತ್ತಿ ಪಡೆಯುವಂತೆ ಮಾಡಿ ಕಾರ್ಮಿಕರನ್ನು ಬೀದಿಪಾಲು ಮಾಡಲಾಗುವುದು. ರಾಜ್ಯದಲ್ಲಿರುವ ವಿದ್ಯುತ್ ಚಾಲಿತ 20 ಕಾರ್ಮಿಕರಿಗಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಶೇ.41.36 ಹಾಗೂ ವಿದ್ಯುತ್ ರಹಿತ 40ಕ್ಕಿಂತ ಕಡಿಮೆ ಕಾರ್ಮಿಕರನ್ನು ಹೊಂದಿರುವ ಶೇ.64.24 ರಷ್ಟು ಕೈಗಾರಿಕೆಗಳ ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಕೆಲಸದ ಪರಿಸ್ಥಿತಿಗಳ ಮೇಲೆ ರಾಜ್ಯ ಸರ್ಕಾರದ ನಿಯಂತ್ರಣ ಇಲ್ಲದಾಗಲಿದೆ. ಇವೆಲ್ಲವುಗಳ ಪರಿಣಾಮವಾಗಿ ಕಾರ್ಮಿಕರ ಶ್ರಮವನ್ನು ಹಿಂಡಿ ಹಿಪ್ಪೆ ಮಾಡುವ ಪರಿಸ್ಥಿತಿ ನಿರ್ಮಾಣವಾಗಲಿದೆ.



ಎನ್‌ಇಪಿ–ಹೊಸ ಶಿಕ್ಷಣ ನೀತಿ ಜಾರಿ

ಕೇಂದ್ರದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕರ್ನಾಟಕದಲ್ಲಿ ಯಥಾವತ್ತಾಗಿ ಜಾರಿಗೊಳಿಸಲಾಗುತ್ತಿದೆ. ಶಿಕ್ಷಣ ವ್ಯಾಪಾರೀಕರಣ ಮತ್ತು ಕೋಮುವಾದೀಕರಣಕ್ಕೆ ಇದು ಬೃಹತ್ ಪ್ರಮಾಣದಲ್ಲಿ ದಾರಿ ಮಾಡಿಕೊಡಲಿದೆ. ಶಿಕ್ಷಣ ನೀತಿಗಳನ್ನು ರೂಪಿಸುವ ರಾಜ್ಯ ಸರ್ಕಾರಗಳ ಹಕ್ಕನ್ನು ಎನ್‌ಇಪಿ ಮೂಲಕ ನಾಶ ಮಾಡಲಾಗುತ್ತಿದೆ. ಕನ್ನಡ ಭಾಷೆ, ಸಂಸ್ಕತಿ, ಕರ್ನಾಟಕದ ಬೆಳವಣಿಗೆಗೆ ಇದು ಧಕ್ಕೆ ಉಂಟು ಮಾಡಲಿದೆ. ವೃತ್ತಿಪರ ಕೋರ್ಸುಗಳಿಗೆ ನೀಟ್ ಪ್ರವೇಶ ಪರೀಕ್ಷೆಯನ್ನು ಜಾರಿಗೊಳಿಸಿ ರಾಜ್ಯದ ವಿದ್ಯಾರ್ಥಿಗಳಿಗೆ ವಂಚನೆ ಮಾಡುತ್ತಿರುವ ರೀತಿಯಲ್ಲಿ ಎಲ್ಲಾ ಪದವಿ ಕೋರ್ಸುಗಳಿಗೂ ರಾಷ್ಟ್ರ ಮಟ್ಟದ ಪ್ರವೇಶ ಪರೀಕ್ಷೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಇದು ರಾಜ್ಯದ ಬಡ, ಹಿಂದುಳಿದ, ಗ್ರಾಮಾಂತರ ವಿದ್ಯಾರ್ಥಿಗಳಿಗೆ ಸಂಕಷ್ಟವನ್ನು ತರಲಿದೆ. ವಿಶ್ವವಿದ್ಯಾಲಯಗಳಿಗೆ ಹಣಕಾಸಿನ ನೆರವು ಕಡಿತಗೊಳ್ಳಲಿದ್ದು ರಾಜ್ಯದ ವಿವಿಗಳು ಮುಂದೊಂದು ಮುಚ್ಚಬೇಕಾಗುತ್ತದೆ ಅಥವಾ ಸಂಪೂರ್ಣವಾಗಿ ಖಾಸಗೀಕರಣ ಮಾಡಬೇಕಾಗಬಹುದು. ಈಗಾಗಲೇ ರಾಜ್ಯದ ಹೆಮ್ಮೆಯ ಕನ್ನಡ ವಿಶ್ವವಿದ್ಯಾಲಯವನ್ನು ದುರ್ಬಲಗೊಳಿಸುತ್ತಿರುವುದನ್ನು ಗಮನಿಸಬಹುದು. ಹೊಸ ಶಿಕ್ಷಣ ನೀತಿಯು ಒಕ್ಕೂಟ ವ್ಯವಸ್ಥೆಯನ್ನು, ಸ್ಥಳೀಯ ಸಂಸ್ಕೃತಿಯನ್ನು, ಭಾಷೆಯನ್ನು, ಜನರ ಬದುಕನ್ನು ಹಿಂದಿಯ ಯಜಮಾನ್ಯಕ್ಕೆ ಒಪ್ಪಿಸುವ ಹುನ್ನಾರವನ್ನು ಹೊಂದಿದೆ.

ಹೆಚ್ಚುತ್ತಿರುವ ನಿರುದ್ಯೋಗ

ರಾಜ್ಯದಲ್ಲಿ ನಿರುದ್ಯೋಗ ಮತ್ತು ಅರೆ-ಉದ್ಯೋಗ ತೀವ್ರಗೊಳ್ಳುತ್ತಿದ್ದು, ಸಾಮಾಜಿಕ ಪಕ್ಷೋಭೆಯನ್ನು ಉಂಟು ಮಾಡುವ ಪರಿಸ್ಥಿತಿಯನ್ನು ತಲುಪಿದೆ. ಕೋವಿಡ್-ಪೂರ್ವ ಮತ್ತು ನಂತರದಲ್ಲಿ ಕುಸಿತಗೊಂಡ ಉದ್ಯೋಗದ ಪರಿಸ್ಥಿತಿಯನ್ನು ಉತ್ತಮಪಡಿಸಲು ಸರ್ಕಾರಕ್ಕೆ ಆಗಿಲ್ಲ. ಅದರಲ್ಲೂ ಅಸಂಘಟಿತ ವಲಯದಲ್ಲಿ ನಿರುದ್ಯೋಗವೂ ಹೆಚ್ಚಾಗಿದೆ ಮತ್ತು ಅರೆ ಉದ್ಯೋಗವು ವಿಪರೀತವಾಗಿ ಹೆಚ್ಚಾಗಿದೆ. ಉದ್ಯೋಗವನ್ನು ಸೃಷ್ಟಿಸಿ ಯುವಜನರ ಆದಾಯಗಳನ್ನು ಮತ್ತು ಜೀವನವನ್ನು ಸುಗಮಗೊಳಿಸಬೇಕಿದ್ದ ಸರ್ಕಾರ ಅವರನ್ನು ಅಭದ್ರತೆ, ಆತಂಕಗಳಿಗೆ ನೂಕಿ, ಸಮಾಜಘಾತುಕ ಕೃತ್ಯಗಳಿಗೆ ಬಲಿಯಾಗುವಂತೆ ಮಾಡಲಾಗುತ್ತಿದೆ.

ರಾಜ್ಯವನ್ನು ನಾಶ ಮಾಡುತ್ತಿರುವ ಕೋಮುವಾದ

ಹಿಜಾಬ್, ಹಲಾಲ್, ಜಟಕಾ, ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರ, ಕೋಮು ಸಾಮರಸ್ಯವನ್ನು ಹಾಳುಗೆಡುವುವ ಅಭಿಯಾನಗಳು, ಮತೀಯ ದ್ವೇಷದ ಭಾಷಣಗಳು ರಾಜ್ಯದಲ್ಲಿ ಹುಚ್ಚೆದ್ದು ಕುಣಿಯತೊಡಗಿವೆ. "ಸರ್ವ ಜನಾಂಗದ ಶಾಂತಿಯ ತೋಟ"ವನ್ನು ಕೋಮುವಾದದ ಅಗ್ನಿ ಕುಂಡವಾಗಿ ಮಾರ್ಪಡಿಸಲು ಹಿಂದುತ್ವದ ಸಂಘಪರಿವಾರದ ಶಕ್ತಿಗಳು ಶ್ರಮಿಸುತ್ತಿವೆ. ಇದರ ಪರಿಣಾಮವಾಗಿ ಮುಸ್ಲಿಂ ಅಲ್ಪಸಂಖ್ಯಾತರಲ್ಲಿ ಅಭದ್ರತೆ, ಹತಾಶೆ ಮತ್ತು ಆತಂಕಗಳು ಹೆಚ್ಚಾಗುತ್ತಿವೆ. ಇಂತಹ ಪರಿಸ್ಥಿತಿಯನ್ನು ಮತಾಂಧ ಶಕ್ತಿಗಳು ದುರುಪಯೋಗಪಡಿಸಿಕೊಳ್ಳುವ ಅವಕಾಶಗಳು ಹೆಚ್ಚಾಗಿವೆ. ಜನರ ಪರವಾಗಿ ಸಂವಿಧಾನಾತ್ಮಕ ಆಡಳಿತವನ್ನು ಮಾಡುವಲ್ಲಿ ಹೀನಾಯವಾಗಿ ವಿಫಲವಾಗಿರುವ ಬಿಜೆಪಿ ಸರ್ಕಾರ ಹಿಂದುತ್ವ ಕೋಮುವಾದವನ್ನು ಬಳಸಿ ಸಮಾಜವನ್ನು ವಿಭಜಿಸುವ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಹೆಚ್ಚಾಗಿವೆ. ಜಾನುವಾರು ಹತ್ಯೆ ನಿಷೇಧ ಕಾಯ್ದೆ, ಮತಾಂತರ ನಿಷೇಧ ಕುರಿತ ಧಾರ್ಮಿಕ ಹಕ್ಕುಗಳ ರಕ್ಷಣಾ ಮಸೂದೆ, ದೇವಾಲಯಗಳ ನಿರ್ವಹಣೆಯ ಕಾಯ್ದೆಯ ಪ್ರಸ್ತಾಪ, ಶಿಕ್ಷಣದಲ್ಲಿ ಕೋಮುವಾದಿ ನೆಲೆಯ ಪಠ್ಯ ಪರಿಷ್ಕರಣೆ ಇವೆಲ್ಲವೂ ಜನರಲ್ಲಿ ವಿಭಜನೆಯನ್ನು ತರಲು ಉದ್ದೇಶಿಸಿವೆ. ಕರ್ನಾಟಕದ ಸೌಹಾರ್ಧ ಸಂಸ್ಕೃತಿಯ ಪ್ರತಿನಿಧಿಗಳಾದ ಪ್ರಗತಿಪರ, ಮತನಿರಪೇಕ್ಷ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಾಹಿತಿ ಬರಹಗಾರರನ್ನು ದಾಳಿಗೆ ಗುರಿ ಮಾಡಲಾಗುತ್ತಿದೆ.

ಜನರ ಆಹಾರ ಪದ್ಧತಿ, ಸಂಸ್ಕೃತಿ, ಉಡುಗೆ-ತೊಡುಗೆ, ನಾಡು-ನುಡಿ, ಜೀವನ ಕ್ರಮ, ಸೌಹಾರ್ಧ ಪರಂಪರೆಗಳು, ಶಿಕ್ಷಣ, ಹಬ್ಬಗಳು-ಆಚರಣೆಗಳು, ಜಾತ್ರೆಗಳು, ಹೀಗೆ., ಎಲ್ಲವನ್ನೂ ಕೋಮುವಾದೀಕರಣಗೊಳಿಸಿ ಸಂಘಪರಿವಾರದ ಹಿಂದುತ್ವ ಅಜೆಂಡಾವನ್ನು ಜಾರಿ ಮಾಡಲಾಗುತ್ತಿದೆ. ಭಾರತದ ಸಂವಿಧಾನದ ಉಳಿವಿಗಾಗಿ, ಜನ ಸಂಸ್ಕೃತಿಯ ರಕ್ಷಣೆಗಾಗಿ, ಜನರ ಬದುಕಿನ ರಕ್ಷಣೆಗಾಗಿ ಹಿಂದುತ್ವ ಕೋಮುವಾದಿ ಶಕ್ತಿಗಳನ್ನು ಸೋಲಿಸುವುದು ಇಂದಿನ ಅತ್ಯಂತ ತುರ್ತಾದ ಕೆಲಸವಾಗಿದೆ.

ಹೈನುಗಾರಿಕೆ ಉದ್ಯಮಕ್ಕೆ ಒದಗಿರುವ ಅಪಾಯಗಳು

ಜಾಗತಿಕವಾಗಿ 843 ಮಿಲಿಯನ್ ಟನ್ ನಷ್ಟು ಹಾಲು ಉತ್ಪಾದನೆ ಆಗುತ್ತಿದೆ. ಇದರಲ್ಲಿ ಭಾರತದ ಪಾಲು ಶೇಕಡಾ 23 ರಷ್ಟು ಇದ್ದು ಮೊದಲನೇ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಆಮೇರಿಕಾ, ಚೀನಾ, ಪಾಕಿಸ್ತಾನ ಮತ್ತು ಬ್ರೆಜಿಲ್ ದೇಶಗಳು ಇವೆ.

ಜಗತ್ತಿನ ಹೈನುಗಾರಿಕೆ ಉತ್ಪಾದನೆ ಇರುವ ದೇಶಗಳಲ್ಲಿ ಆಮೇರಿಕಾ, ಜರ್ಮನಿ, ಫ್ರಾನ್ಸ್, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಐರ್ಲೆಂಡ್ ದೇಶಗಳು ಹೆಚ್ಚುವರಿ ಹಾಲು ಉತ್ಪಾದಿಸುತ್ತಿರುವ ದೇಶಗಳಾಗಿವೆ. ಈ ಹೆಚ್ಚುವರಿ ಉತ್ಪಾದನೆ ಇರುವ ದೇಶಗಳು ತಮ್ಮ ಹೆಚ್ಚುವರಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟಕ್ಕೆ ದೊಡ್ಡ ದೇಶವಾಗಿರುವ ಭಾರತವನ್ನು ಮಾರುಕಟ್ಟೆ ಮಾಡಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿವೆ.

ನಮ್ಮ ದೇಶದಲ್ಲಿ ವಾರ್ಷಿಕ ಸುಮಾರು 209.96 ಮಿಲಿಯನ್ ಟನ್ ಹಾಲು ಉತ್ಪಾದನೆ ಆಗುತ್ತಿದ್ದು 2014–15 ರಲ್ಲಿ ಇದ್ದ ವಾರ್ಷಿಕ ಉತ್ಪಾದನೆ 146.31 ಮಿಲಿಯನ್ ಟನ್ ಗೆ ಹೋಲಿಸಿದರೆ ವಾರ್ಷಿಕ ಶೇಕಡಾ 6.2 ಬೆಳವಣಿಗೆ ದರವನ್ನು ದಾಖಲಿಸಿದೆ.

ಉತ್ತರ ಪ್ರದೇಶ (14.9% 31.4 ಮಿ.ಟನ್), ರಾಜಾಸ್ಥಾನ (14.6% 30.7 ಮಿ.ಟನ್) ಮಧ್ಯಪ್ರದೇಶ (8.6% 18 ಮಿ.ಟನ್) ಗುಜರಾತ್ (7.6% 15.9 ಮಿ.ಟನ್) ಹಾಗೂ ಅಂದ್ರಪ್ರದೇಶ (7% 14.7 ಮಿ.ಟನ್) ಹಾಲು ಉತ್ಪಾದನೆಯ ಕ್ರಮವಾಗಿ ಪ್ರಮುಖ ಐದು ರಾಜ್ಯಗಳಾಗಿವೆ. ವಾರ್ಷಿಕ ಉತ್ಪಾದನೆ 8 ಮಿ. ಟನ್ ಇರುವ ಕರ್ನಾಟಕವು 11 ನೇ ಸ್ಥಾನದಲ್ಲಿದೆ.

ಹಾಲು ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಪ್ರಥಮ ಸ್ಥಾನದಲ್ಲಿದ್ದರೂ ಭಾರತದ ಹಾಲಿನ ತಲಾ ಲಭ್ಯತೆ ಪ್ರತಿ ದಿನಕ್ಕೆ ಕೇವಲ 400 ಗ್ರಾಂ ಮಾತ್ರವೇ ಇದೆ. ಹರ್ಯಾಣ ರಾಜ್ಯ ಗರಿಷ್ಠ ತಲಾ ಲಭ್ಯತೆ ಹೊಂದಿದ್ದರೆ (1087 ಗ್ರಾಂ) ಆಂದ್ರಪ್ರದೇಶ(623 ಗ್ರಾಂ.) ಮತ್ತು ಗುಜರಾತ್ (565 ಗ್ರಾಂ.) ನಂತರದ ಸ್ಥಾನದಲ್ಲಿವೆ. ಕರ್ನಾಟಕದ ತಲಾ ಲಭ್ಯತೆ 344 ಗ್ರಾಂ ಇದ್ದು ದೇಶದ ಸರಾಸರಿಗಿಂತ ಕಡಿಮೆ ಇದೆ.

ಬಹುತೇಕ ಮನೆ ಬಳಕೆಗೆ ಮಾತ್ರ ಸೀಮಿತವಾಗಿದ್ದ ಹಾಲು ಉತ್ಪಾದನೆಯನ್ನು ಕುಟುಂಬದ ಸ್ಥಿರ ನಗದು ಆದಾಯದ ಮೂಲವಾಗಿಸಿ ರೈತರ ಬದುಕಿಗೆ ಕನಿಷ್ಟ ಆದಾಯ ಖಾತರಿ ಒದಗಿಸುವಲ್ಲಿ ಸಹಕಾರಿ ರಂಗ ಬಹಳ ದೊಡ್ಡ ಪಾತ್ರವನ್ನು ವಹಿಸಿದೆ. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ (ಎನ್ ಡಿ ಡಿ ಬಿ) ಮೂಲಕ ಸಹಕಾರಿ ಕ್ಷೇತ್ರಕ್ಕೆ ಬಹಳ ಉತ್ತೇಜನ ಸಿಕ್ಕ ಕಾರಣದಿಂದ ದೇಶದ ಹಾಲು ಉತ್ಪಾದನೆ ದ್ವಿಗುಣ ಗೊಳ್ಳಲು ಸಾಧ್ಯವಾಯಿತು. ಗುಜರಾತ್ ಮತ್ತು ಕರ್ನಾಟಕ ಗಳು ಸಹಕಾರಿ ರಂಗದ ಖರೀದಿ ವ್ಯವಸ್ಥೆಯನ್ನು ಬಹಳ ಬಲವಾಗಿ ರೂಪಿಸಿಕೊಂಡಿವೆ. ಈ ಕಾರಣದಿಂದ ದೇಶದಲ್ಲೇ ಅತ್ಯಂತ ಬಲಿಷ್ಠ ಬ್ರಾಂಡ್ ಆಗಿ ಗುಜರಾತ್ ರಾಜ್ಯದ ಅಮೂಲ್ ರೂಪುಗೊಂಡಿದ್ದರೆ, ದಕ್ಷಿಣ ಭಾರತದಲ್ಲೇ ಈ ಕ್ಷೇತ್ರದ ಅತಿದೊಡ್ಡ ಸಂಸ್ಥೆಯಾಗಿ ಕೆಎಂಎಫ್ ತಲೆ ಎತ್ತಿದೆ.



ರಾಜ್ಯದ 25.8 ಲಕ್ಷ ರೈತರು ಹಾಗೂ ಕೃಷಿ ಕೂಲಿಕಾರ ಕುಟುಂಬಗಳು ಸುಮಾರು 14900 ಪ್ರಾಥಮಿಕ ಹಾಲು ಉತ್ಪಾದಕ ಸಹಕಾರಿ ಸಂಘಗಳ ಮೂಲಕ ಪ್ರತಿದಿನ 84–85 ಲಕ್ಷ ಲೀಟರ್ ಹಾಲನ್ನು ಸರಬರಾಜು ಮಾಡುತ್ತಿದ್ದಾರೆ. ಬಹುತೇಕ ಮಹಿಳೆಯರ ಶ್ರಮವೇ ಪ್ರಧಾನವಾಗಿರುವ ಈ ಹೈನುಗಾರಿಕೆಯು ಕೃಷಿ ಬಿಕ್ಕಟ್ಟಿನ ಪರಿಣಾಮದಿಂದ ದಿನ ನಿತ್ಯದ ಖರ್ಚು ನಿಭಾಯಿಸಲು ಎದುಸಿರು ಬಿಡುತ್ತಿದ್ದ ರೈತಾಪಿ ಕುಟುಂಬಕ್ಕೆ ನಗದು ರೂಪದ ಆದಾಯವನ್ನು ಖಾತರಿಗೊಳಿಸಿದೆ.

ಆದರೆ ದಿನೇ ದಿನೇ ಹೆಚ್ಚುತ್ತಿರುವ ಪಶು ಆಹಾರ, ಪಶುಗಳ ದರ ಇತ್ಯಾದಿಗಳ ಕಾರಣಕ್ಕೆ ಲೀಟರ್ ಹಾಲು ಉತ್ಪಾದನೆ ವೆಚ್ಚವು 35 ರೂ ಕ್ಕಿಂತ ಹೆಚ್ಚಾಗಿದೆ. ರಾಜ್ಯದ ಜಿಲ್ಲಾ ಒಕ್ಕೂಟಗಳು ರಾಜ್ಯ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನ ಸೇರಿಸಿ ಸರಾಸರಿ 28–30 ರೂ ಅನ್ನು ರೈತರಿಗೆ ಪಾವತಿಸುತ್ತಿವೆ. ಅಂದರೆ ಪ್ರತಿ ಲೀಟರ್ ಹಾಲಿನ ಮೇಲೆ ಸುಮಾರು 5 ರಿಂದ 7 ರೂ ಅಸಲಿನಲ್ಲೇ ನಷ್ಟವಾಗುತ್ತಿದೆ.

ಈ ರೀತಿ ನಷ್ಟಕ್ಕೆ ಒಳಗಾಗುತ್ತಿರುವ ಕಾರಣ ಕೆಲವೆಡೆ ಹೈನುಗಾರಿಕೆ ಕಸಬನ್ನೇ ತೊರೆಯುತ್ತಿರುವ ವರದಿಗಳು ಕೇಳಿ ಬರುತ್ತಿವೆ. ಕೊಚಿಮಲ್ ಒಕ್ಕೂಟ ಒಂದರಲ್ಲೇ ದಿನದ ಪೂರೈಕೆಯಲ್ಲಿ ಎರಡು ಲಕ್ಷ ಲೀಟರ್ ಹಾಲು ಕಡಿಮೆ ಆಗಿದೆ.

ಹೈನುಗಾರಿಕೆಯಲ್ಲಿ ತೊಡಗಿರುವ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೀತಿ–ಧೋರಣೆಗಳನ್ನು ರೂಪಿಸಿದ್ದರಿಂದಾಗಿ ಈ ಪ್ರಮಾಣಕ್ಕೆ ಹೈನುಗಾರಿಕೆ ಕ್ಷೇತ್ರ ರಾಜ್ಯದಲ್ಲಿ ಅಭಿವೃದ್ಧಿ ಹೊಂದಿದೆ. ಆದರೆ ಈಗ ರೈತರನ್ನು ಸಂಪೂರ್ಣವಾಗಿ ಕಡೆಗಣಿಸಲಾಗುತ್ತಿದೆ. ಹೈನುಗಾರಿಕೆ ಕ್ಷೇತ್ರಕ್ಕೆ ಸಂಬಂಧಪಟ್ಟ ಯಾವುದೇ ವಿಷಯದಲ್ಲೂ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಜಿಲ್ಲಾ ಹಾಲು ಒಕ್ಕೂಟಗಳು ಎಸ್ ಎನ್ ಎಫ್ ಅನ್ನು ದರ ನಿಗದಿಗೆ ಮಾನದಂಡವಾಗಿ ಬಳಸುತ್ತಿವೆ. ಆದರೆ ಬಹಳಷ್ಟು ಎಂ.ಪಿ.ಸಿ.ಎಸ್ ಗಳಲ್ಲಿ ಈ ಸಂಬಂಧ ಯಾವುದೇ ಉಪಕರಣಗಳಿಲ್ಲದೇ ಗುಣಮಟ್ಟದ ರೈತರಿಗೆ ಉತ್ತಮ ದರ ವನ್ನು ಹಾಗೂ ಪ್ರೋತ್ಸಾಹ ಧನವನ್ನು ವಂಚಿಸಲಾಗುತ್ತಿದೆ. ಜಿಲ್ಲಾ ಹಾಲು ಒಕ್ಕೂಟಗಳು ಎಸ್.ಎನ್.ಎಫ್. 8.5 ಕ್ಕಿಂತ ಕಡಿಮೆ ಬಂದ ಸಂದರ್ಭದಲ್ಲಿ ಅಂದರೆ 0.1 ಕಡಿಮೆ ಬಂದರೆ 2–00 ರೂ, 0.2 ಕಡಿಮೆ ಬಂದರೆ 3–00 ರೂ ಹೀಗೆ ದಂಡ ವಿಧಿಸುತ್ತಿವೆ. ಎಸ್.ಎನ್.ಎಫ್. 8.5 ಬಂದರೆ ಮಾತ್ರ ಪ್ರತಿ ಲೀಟರ್ ಗೆ 2–00 ನಿರ್ವಹಣಾ ವೆಚ್ಚ ಮತ್ತು ಸರ್ಕಾರದ ಪ್ರೋತ್ಸಾಹ ಧನ ದೊರಕುತ್ತದೆ.

ಜಾನುವಾರು ಗಳಿಗೆ ವಿಮೆ ಸೌಲಭ್ಯ ಒದಗಿಸಲು ರೈತರು ಪಾವತಿಸಬೇಕಿದ್ದ ವಂತಿಗೆ ಹಣವನ್ನು ಹೆಚ್ಚಿಸಲಾಗಿದೆ. ಹಾಲು ಉತ್ಪಾದಕರು ಅಕಾಲಿಕ ಮರಣಕ್ಕೆ ತುತ್ತಾದರೆ ವಿಮೆ ಸೌಲಭ್ಯ ಪಡೆಯಲು ಗರಿಷ್ಠ ವಯಸ್ಸು 50 ವರ್ಷ ನಿಗದಿಪಡಿಸಿ ಸಾಕಷ್ಟು ರೈತರಿಗೆ ಈ ಸೌಲಭ್ಯ ಸಿಗದಂತೆ ಮಾಡಲಾಗಿದೆ. ಪ್ರತಿ ವರ್ಷ ಹಾಕಬೇಕಾದ ಕಾಲು ಬಾಯಿ ರೋಗ ತಡೆ ಲಸಿಕೆ ಯು ಸಕಾಲಕ್ಕೆ ದೊರಕದೇ ಸಾಕಷ್ಟು ರಾಸುಗಳು ಮರಣ ಹೊಂದಿ ರೈತರನ್ನು ಅಪಾರ ಸಂಕಷ್ಟಕ್ಕೆ ತಳ್ಳಲಾಗಿದೆ. ಈ ಮಧ್ಯೆ ಅನುಪಯುಕ್ತ ರಾಸುಗಳನ್ನು ಮಾರದಂತೆ ನಿರ್ಬಂದಿಸುವ ಜಾನುವಾರು ಹತ್ಯೆ ನಿಷೇಧ ಕಾಯ್ದೆಯನ್ನು ರಾಜ್ಯದಲ್ಲಿ ಜಾರಿ ಮಾಡಲಾಗಿದೆ. ಇದರಿಂದ ಹಸು ಕೊಳ್ಳುವುದು, ಸಾಗಾಣೆ ಮಾಡುವುದು ಮತ್ತು ಗಂಡು ಕರು, ವಯಸ್ಸಾದ ರಾಸುಗಳನ್ನು ಮಾರುವುದಕ್ಕೆ ಭಾರೀ ದೊಡ್ಡ ಧಕ್ಕೆ–ನಿರ್ಬಂದ ಉಂಟಾಗಿದೆ. ಈಗಾಗಲೇ ಆರ್ಥಿಕ ಸಂಕಟದಿಂದ ನರಳುತ್ತಿರುವ ರೈತನಿಗೆ ಈ ಕಾಯ್ದೆಯಿಂದ ಮತ್ತಷ್ಟು ಆರ್ಥಿಕ ಹೊರೆ ಹೊತ್ತುಕೊಳ್ಳುವಂತಾಗಿದೆ ಮಾತ್ರವಲ್ಲ ಪ್ರತಿ ಹಂತದಲ್ಲೂ ಕಿರುಕುಳ ನೀಡಲಾಗುತ್ತಿದೆ. ಕೆಲವು ಕಡೆ ಕೊಲೆ ನಡೆಸಲಾಗಿದೆ, ಕೆಲವು ಕಡೆ ಬಂಧಿಸಲಾಗಿದೆ, ಇನ್ನೂ ಕೆಲವು ಕಡೆ ಜಾನುವಾರು ಸಾಗಾಣಿಕೆ ವಾಹನವನ್ನು ಜಪ್ತಿ ಮಾಡಿ ಕಷ್ಟ ಪಟ್ಟು ಖರೀದಿಸಿದ್ದ ರಾಸುಗಳನ್ನು ಗೋ ಶಾಲೆಗೆ ಸಾಗಿಸಲಾಗಿದೆ. ಈ ಕಾಯ್ದೆಯಿಂದ ಹೈನುಗಾರಿಕೆ ಆರ್ಥಿಕ ಚಕ್ರವೇ ತುಂಡರಿಸಲ್ಪಟ್ಟಿದೆ.

ಒಂದು ಕಡೆ ಪಶು ಸಾಕಾಣಿಕೆ, ಪಶು ಆಹಾರ, ಇತ್ಯಾದಿಗಳು ದುಬಾರಿಯಾಗಿ ಹೈನುಗಾರಿಕೆ ನಷ್ಟದ ಕಸುಬಾಗಿರುವಾಗ ಇನ್ನೊಂದು ಕಡೆ ಜಾನುವಾರು ಹತ್ಯೆ ನಿಷೇಧ ಕಾಯ್ದೆಯಿಂದಾಗಿ ಅನುಪಯುಕ್ತ ರಾಸುಗಳ ವಿಲೇವಾರಿಗೆ ಕೈ ಯಿಂದ ಹಣ ಖರ್ಚು ಮಾಡಬೇಕಾದ ದುಸ್ಥಿತಿ ರೈತರಿಗೆ ಬಂದಿದೆ. ಈ ಎಲ್ಲಾ ಕಾರಣಗಳಿಂದಾಗಿ ಪಶುಸಂಗೋಪನೆ ಸಾಕಪ್ಪಾ ಸಾಕು ಎಂದು ನಿಟ್ಟುಸಿರು ಬಿಡುತ್ತಿರುವಾಗ ಹಾಲು ಮತ್ತು ಹಾಲಿನ ಉತ್ಪನ್ನಗಳು ದೇಶದೊಳಗೆ ಬಂದು ಬೀಳಲು ಆಮದು ಸುಂಕ ಕಡಿತ ಮಾಡುವುದು, RCEP ಒಪ್ಪಂದಕ್ಕೆ ಸಹಿ ಹಾಕುವುದು, ಹೆಚ್ಚುವರಿ ಹಾಲು ಉತ್ಪಾದನೆ ಇರುವ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದು ಮುಂತಾದ ಕ್ರಮಗಳನ್ನು ಕೇಂದ್ರ ಸರ್ಕಾರ ಅನುಸರಿಸುತ್ತಿದೆ. ರೈತರು ಭಾರೀ ವಿರೋಧ ವ್ಯಕ್ತಪಡಿಸಿದರೂ ಇತ್ತೀಚೆಗೆ ಆಸ್ಟ್ರೇಲಿಯಾ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ.

ಕೃಷಿ ಭೂಮಿ, ಕೃಷಿ ಉತ್ಪಾದನೆ ಹಾಗೂ ಕೃಷಿ ಮಾರುಕಟ್ಟೆ ಮುಂತಾದವುಗಳನ್ನು ಸಂಪೂರ್ಣವಾಗಿ ಕಾರ್ಪೊರೇಟ್ ಸಂಸ್ಥೆಗಳಿಗೆ ಹಸ್ತಾಂತರಿಸುವ ಉದ್ದೇಶದ ಕೃಷಿ ಕಾಯ್ದೆಗಳನ್ನು ಈಗಾಗಲೇ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಹಲವು ರೀತಿಯ ಕರಾಳ ಪರಿಣಾಮಗಳನ್ನು ಉಂಟು ಮಾಡುತ್ತಿವೆ. ಇದರ ಜೊತೆಗೆ ಹಾಲು ಹೆಚ್ಚುವರಿಯಾಗಿ ಉಳಿಯುತ್ತಿರುವ ದೇಶಗಳಾದ ಆಸ್ಟ್ರೇಲಿಯಾ, ಅಮೇರಿಕಾ, ನ್ಯೂಜಿಲೆಂಡ್, ಜರ್ಮನಿ, ಫ್ರಾನ್ಸ್, ಐರ್ಲೆಂಡ್ ದೇಶಗಳ ಜೊತೆ ಮಾಡಿಕೊಳ್ಳುವ ಮುಕ್ತ ವ್ಯಾಪಾರ ಒಪ್ಪಂದಗಳು ದೇಶದ ಹೈನುಗಾರಿಕೆಯನ್ನು ಸಂಪೂರ್ಣ ದಿವಾಳಿಯೆಬ್ಬಸಲಿವೆ. ಹೈನುಗಾರಿಕೆ ಮತ್ತು ಪಶು ಸಂಗೋಪನೆ ಯನ್ನು ರೈತರಿಂದ ಕಿತ್ತು ಕಾರ್ಪೊರೇಟ್ ಕಂಪನಿಗಳಿಗೆ ಒಪ್ಪಿಸಲು ಈ ಎಲ್ಲಾ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಹಾಗೂ ಕೃಷಿ ಕಾಯ್ದೆಗಳನ್ನು ಜಾರಿಗೊಳಿಸಲಾಗುತ್ತಿದೆ.

ದೊಡ್ಡ ಪ್ರಮಾಣದಲ್ಲಿ ಸಹಾಯ ಧನ ಪಡೆದು ಹೈನುಗಾರಿಕೆ ಯಲ್ಲಿ ತೊಡಗಿರುವ RCEP ದೇಶಗಳ ಜೊತೆ ನಮ್ಮ ರೈತರು ಪೈಪೋಟಿ ಮಾಡಲು ಸಾಧ್ಯವಿಲ್ಲದೇ ನಮ್ಮ ಹೈನುಗಾರಿಕೆ ಯು ನೆಲ ಕಚ್ಚಲಿದೆ. ಈ ಪ್ರಕ್ರಿಯೆಯ ಭಾಗವಾಗಿಯೇ ರಾಜ್ಯದಲ್ಲೂ ಸದೃಢ ವಾಗಿರುವ ಸಹಕಾರಿ ಕ್ಷೇತ್ರದ ಗ್ರಾಮ ಮಟ್ಟದ ಪ್ರಾಥಮಿಕ ಸಹಕಾರಿ ಸಂಘಗಳು, ಜಿಲ್ಲಾ ಒಕ್ಕೂಟಗಳು ಹಾಗೂ ರಾಜ್ಯದ ಕೆ.ಎಂ.ಎಫ್. ಅನ್ನು ಹಂತ ಹಂತವಾಗಿ ಬಲಹೀನಗೊಳಿಸುವ ಕೆಲಸಕ್ಕೆ ಕೈ ಹಾಕಿದೆ.

ಇಂತಹ ಸಂದರ್ಭದಲ್ಲಿ ಹಾಲು ಉತ್ಪಾದಕ ರೈತರು, ಸಹಕಾರಿ ಕ್ಷೇತ್ರದ ವಿವಿಧ ಹಂತಗಳಲ್ಲಿ ತೊಡಗಿರುವ ಪ್ರಜ್ಞಾವಂತರು ಒಟ್ಟುಗೂಡಿ ಈ ಬಹುರಾಷ್ಟ್ರೀಯ ಕಂಪನಿಗಳ ಮತ್ತು ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಸಬೇಕಿದೆ. ಸಹಕಾರಿ ಕ್ಷೇತ್ರವನ್ನು ಮತ್ತಷ್ಟು ಸದೃಡಗೊಳಿಸುತ್ತಾ ರೈತರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ. ಅಲ್ಲದೇ ಲಕ್ಷಾಂತರ ಕುಟುಂಬಗಳ ಜೀವನಾಧಾರವಾಗಿರುವ ಈ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಲು ಹೆಚ್ಚಿನ ಸಾರ್ವಜನಿಕ ಹೂಡಿಕೆ ಮಾಡಬೇಕು. ರೈತರಿಗೆ ನೀಡಲಾಗುತ್ತಿರುವ ಪ್ರೋತ್ಸಾಹ ಧನವನ್ನು 15 ರೂ. ಗೆ ಏರಿಕೆ ಮಾಡಬೇಕು. ಪಶು ಆಹಾರಕ್ಕೆ ರಾಜ್ಯ ಸರ್ಕಾರ ಸಬ್ಸಿಡಿ ಒದಗಿಸಬೇಕು. ಮರಣ ಹೊಂದಿದ ಹಾಲು ಉತ್ಪಾದಕ ರೈತ ಕುಟುಂಬಕ್ಕೆ ಸೂಕ್ತವಾದ ಹಣಕಾಸಿನ ಸಹಾಯ ನೀಡಬೇಕು. ಶಿಕ್ಷಣ ಪಡೆಯುತ್ತಿರುವ ಎಲ್ಲಾ ಹಾಲು ಉತ್ಪಾದಕರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಹಾಸ್ಟೆಲ್ ಸೌಲಭ್ಯ ಇತ್ಯಾದಿ ಹಾಲು ಉತ್ಪಾದಕರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬೇಕು ಹೀಗೆ ಪರ್ಯಾಯ ಧೋರಣೆಗಳನ್ನು ಅನುಸರಿಸುವಂತೆ, ಸಹಕಾರಿ ಕ್ಷೇತ್ರವನ್ನು ರಕ್ಷಿಸಿಕೊಳ್ಳುವಂತೆ, ಹೈನುಗಾರಿಕೆ ಅವಲಂಬಿತ ಕೋಟ್ಯಾಂತರ ರೈತ ಕುಟುಂಬಗಳನ್ನು ಉಳಿಸಿಕೊಳ್ಳುವಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಮೇಲೆ ಒತ್ತಡ ತರಬೇಕಾಗಿದೆ. ಇದು ಅತ್ಯಂತ ತುರ್ತಿನ ಅಗತ್ಯವಾಗಿದೆ. ಇಲ್ಲವಾದರೆ ರೈತಾಪಿ ಹೈನುಗಾರಿಕೆ ಉಳಿಯುವುದಿಲ್ಲ.





ಲಖಿಂಪುರ ಪ್ರಕರಣದ ವಿಚಾರಣೆಯನ್ನು ಬೇರೊಂದು ಹೈಕೋರ್ಟ್ ಪೀಠ ನಡೆಸುವಂತಾಗಬೇಕು

ಸುಪ್ರಿಂ ಕೋರ್ಟಿನಿಂದ ಪ್ರಮುಖ ಆರೋಪಿಯ ಜಾಮೀನು ರದ್ದತಿಯ ನಂತರ ಎಸ್‌ಕೆಎಂ ಮನವಿ

ಲಖಿಂಪುರ ಖೇರಿಯಲ್ಲಿ ನಾಲ್ವರು ರೈತರು ಮತ್ತು ಒಬ್ಬ ಪತ್ರಕರ್ತನ ಸಾವಿಗೆ ಮತ್ತು ಹಲವಾರು ರೈತರುಗಳು ತೀವ್ರವಾಗಿ ಗಾಯಗೊಂಡ ಘಟನೆಯ ಪ್ರಮುಖ ಆರೋಪಿ ಹಾಗೂ ಕೇಂದ್ರ ಮಂತ್ರಿಯ ಮಗ ಆಶಿಷ್ ಮಿಶ್ರಾಗೆ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಜಾಮಿನನ್ನು ಸುಪ್ರಿಂ ಕೋರ್ಟ್ ರದ್ದು ಮಾಡಿದ ನಂತರ ಈ ಪ್ರಕರಣದಲ್ಲಿ ನ್ಯಾಯಯುತ ವಿಚಾರಣೆಯನ್ನು ಖಾತ್ರಿಪಡಿಸಲು ಈ ವಿಚಾರಣೆಯನ್ನು ಲಹಾಬಾದ್ ಬೇರೊಂದು ಪೀಠ ನಡೆಸಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಆಗ್ರಹಿಸಿದೆ. ಸುಪ್ರಿಂ ಕೋರ್ಟ್ ಜಾಮೀನು ಅರ್ಜಿಯ ವಿಚಾರಣೆಯನ್ನು ಹೊಸದಾಗಿ ಮಾಡಬೇಕು ಎಂದು ಅಲಹಾಬಾದ್ ಹೈಕೋರ್ಟಿಗೆ ಹೇಳಿದೆ.

ಹೈಕೋರ್ಟ್ ಈ ಮೊದಲು ಪ್ರಮುಖ ಆರೋಪಿಗೆ ಜಾಮೀನು ನೀಡಿದ ಬಗ್ಗೆ ದಿಗಿಲು ವ್ಯಕ್ತಪಡಿಸುತ್ತ "ಹಾಡುಹಗಲೇ ರೈತರನ್ನು ಜಜ್ಜಿಹಾಕಿದ ನಂತರವೂ ಪ್ರಮುಖ ಆರೋಪಿ ಆಶಿಷ್ ಮಿಶ್ರನನ್ನು ಬಂಧಿಸಿದ್ದು ಸುಪ್ರಿಂ ಕೋರ್ಟ್‌ನ ಛೀಮಾರಿಯ ನಂತರವೇ. ಅಲಹಾಬಾದ್ ಹೈಕೋರ್ಟ್ ಆಶ್ಚರ್ಯಕರ ಅವಸರವನ್ನು ತೋರುತ್ತ ಸಂತ್ರಸ್ತರ ಅಹವಾಲನ್ನು ಕೇಳದೆಯೇ ಜಾಮೀನು ಕೊಟ್ಟಿತು. ಒಬ್ಬ ರಾಜಕೀಯವಾಗಿ ಬಲಿಷ್ಟನಾದ ಆರೋಪಿ ಸಾಕ್ಷಿದಾರರ ಮೇಲೆ ಪ್ರಭಾವ ಬೀರಬಹುದಾದ ಸಾಧ್ಯತೆಯನ್ನು ಅದು ಪರಿಗಣಿಸಲಿಲ್ಲ, ಮಾತ್ರವಲ್ಲ, ರೈತ ಆಂದೋಲನದ ಬಗ್ಗೆ ತರ್ಕಹೀನ ಟಿಪ್ಪಣಿಗಳನ್ನು ಮಾಡಲಾಯಿತು" ಎನ್ನುತ್ತ ಎಸ್‌ಕೆಎಂ, ಜಾಮೀನಿನ ಮೇಲೆ ಆತನ ಬಿಡುಗಡೆಯ ನಂತರ ಇಬ್ಬರು ಪ್ರಮುಖ ಸಾಕ್ಷಿಗಳ ಮೇಲೆ ಹಲ್ಲೆ ನಡೆಯಿತು, ಅಲ್ಲದೆ ಆರೋಪಿ ತನ್ನ ಬಲಪ್ರದರ್ಶನದ ದರ್ಬಾರುಗಳನ್ನೂ ನಡೆಸಿದರು ಎಂಬುದನ್ನು ನೆನಪಿಸಿದೆ.

ಒಬ್ಬ ನ್ಯಾಯಾಧೀಶರ ಅಡಿಯಲ್ಲಿ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ ಕೂಡ ಈ ಜಾಮೀನಿನ ವಿರುದ್ಧ ಅಪೀಲು ಹೋಗಬೇಕು ಎಂದು ಉತ್ತರಪ್ರದೇಶ ಸರಕಾರಕ್ಕೆ ಲಿಖಿತ ಶಿಫಾರಸು ಮಾಡಿದರೂ ಅದು ಏನೂ ಮಾಡಲಿಲ್ಲ, ಕೊನೆಗೆ ಭಯಭೀತರಾದ ಸಂತ್ರಸ್ತ ಕುಟುಂಬಗಳ ಸದಸ್ಯರೇ ಸುಪ್ರಿಂ ಕೋರ್ಟಿಗೆ ಹೋಗಬೇಕಾಯಿತು ಎಂಬುದನ್ನು ಕೂಡ ಅದು ನೆನಪಿಸಿದೆ.

ಕೇಂದ್ರ ಗೃಹ ವ್ಯವಹಾರಗಳ ಇಲಾಖೆಯ ರಾಜ್ಯದರ್ಜೆಯ ಮಂತ್ರಿ ಹಾಗೂ ಪ್ರಮುಖ ಆರೋಪಿಯ ತಂದೆ ಅಜಯ್ ಮಿಶ್ರ ಈ ಪ್ರಕರಣದ ಮುಕ್ತ ಮತ್ತು ನ್ಯಾಯಯುತ ವಿಚಾರಣೆಗೆ ಅಡ್ಡಿಪಡಿಸುತ್ತಿದ್ದು ಆತನನ್ನು ಸಂಪುಟದಿಂದ ವಜಾ ಮಾಡಬೇಕು ಎಂಬ ತನ್ನ ಆಗ್ರಹವನ್ನು ಸಂಯುಕ್ತ ಕಿಸಾನ್ ಮೋರ್ಚಾ ಪುನರುಚ್ಚರಿಸಿದೆ.

ಹತ್ತಿಯ ಮೇಲೆ ಆಮದು ಸುಂಕಗಳ ರದ್ದತಿ ಹತ್ತಿ ರೈತರಿಗೆ ವಿನಾಶಕಾರಿ: ಕಿಸಾನ್ ಸಭಾ ಖಂಡನೆ

ಈ ಸಂವೇದನಾಹೀನ ನಿರ್ಧಾರದ ಬದಲು ರೈತರಿಗೆ ಉತ್ತೇಜನೆ ನೀಡುವ ಕ್ರಮ ಕೈಗೊಳ್ಳಬೇಕು

ಕೇಂದ್ರ ಸರಕಾರ 2022 ರ ಏಪ್ರಿಲ್ 14 ರಿಂದ ಸೆಪ್ಟೆಂಬರ್ 30 ರವರೆಗೆ ಎಲ್ಲಾ ಹತ್ತಿ ಆಮದುಗಳಿಗೆ ಕಸ್ಟಮ್ಸ್ ಸುಂಕದಿಂದ ವಿನಾಯಿತಿ ನೀಡಲು ನಿರ್ಧರಿಸಿದೆ.ಇದು ನರೇಂದ್ರ ಮೋದಿ ಸರಕಾರ ಕಾರ್ಪೊರೇಟ್ ಜವಳಿ ಕಂಪನಿಗಳ ಆದೇಶದ ಮೇರೆಗೆ ಕೈಗೊಂಡಿರುವ ಏಕಪಕ್ಷೀಯ ನಿರ್ಧಾರ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ. ಹತ್ತಿ ಆಮದಿನ ಮೇಲೆ ಸೆಸ್ ಮತ್ತು ಸರ್‌ಚಾರ್ಜ್‌ಗಳು ಸೇರಿದಂತೆ ಸುಮಾರು 11% ತೆರಿಗೆ ವಿಧಿಸಲಾಗುತ್ತಿದೆ. ಇತ್ತ ಭಾರತದಲ್ಲಿ ಹತ್ತಿ ಬೆಳೆವ ರೈತರಿಗೆ ಅಗತ್ಯ ರಕ್ಷಣೆಯಿಲ್ಲ. ಅವರು ಬೆಳೆದ ಹತ್ತಿಗೆ ಫಲದಾಯಕ ಬೆಲೆಗಳನ್ನಾಗಲೀ, ಸರಕಾರದಿಂದ ಖರೀದಿಯನ್ನಾಗಲೀ ಖಾತ್ರಿಪಡಿಸಿಲ್ಲ. ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವ ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟು ಬೆಲೆಯ ಖಾತ್ರಿಯನ್ನು ನೀಡಲು ಮುಂದಾಗದ ಸರಕಾರ ಈ ಕ್ರಮವನ್ನು ಕೈಗೊಂಡಿದೆ. ಇದರಿಂದ ಚೀನಾ, ಬ್ರೆಜಿಲ್, ಅಮೇರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಇತರ ಸ್ಥಳಗಳಿಂದ ಅಗ್ಗದ ಹತ್ತಿ ಒಳಬರುವಂತಾಗಬಹುದು. ಇದರ ವ್ಯತಿರಿಕ್ತ ಪರಿಣಾಮವನ್ನು ತಡೆಯಲು ಪರಿಣಾಮಕಾರಿ ಸಂಗ್ರಹಣೆ ಮತ್ತು ಬೆಲೆ ಸ್ಥಿರೀಕರಣ ನಿಧಿ ಇಲ್ಲದಿರುವುದರಿಂದ, ಭಾರತದ ಹತ್ತಿ ರೈತರಿಗೆ ಸಿಗುವ ಬೆಲೆಗಳು ಮತ್ತಷ್ಟು ಕುಸಿಯಬಹುದು. ಇದು ಈಗಾಗಲೇ ಬಿಕ್ಕಟ್ಟಿನ ಸ್ಥಿತಿಯಲ್ಲಿರುವ ನಮ್ಮ ದೇಶದ ಹತ್ತಿ ರೈತರ ಮೇಲೆ ಮತ್ತಷ್ಟು ಹೊರೆಗೆ ಕಾರಣವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿರುವ ಎಐಕೆಎಸ್ ಸಂಕಷ್ಟದಲ್ಲಿರುವ ರೈತರು ಅತಿ ಹೆಚ್ಚು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಈ ಹತ್ತಿ ವಲಯದಲ್ಲೇ ಎಂಬುದನ್ನು ಮರೆಯುವಂತಿಲ್ಲ ಎಂದಿದೆ.

ಜವಳಿ ಉದ್ಯಮಕ್ಕೆ ಕಚ್ಚಾ ವಸ್ತುಗಳ ಕೊರತೆಯನ್ನು ನಿಭಾಯಿಸಲು ಸಹಾಯ ಮಾಡಲಿಕ್ಕಾಗಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಬಿಜೆಪಿ ಸರ್ಕಾರ ಹೇಳಿಕೊಂಡಿದೆ. ದೇಶದಲ್ಲಿ ಹತ್ತಿ ಇಳುವರಿ ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆಯಾಗಿರುವುದು ಮತ್ತು ದೇಶೀಯ ಹತ್ತಿ ಬೆಲೆಯಲ್ಲಿನ ಏರಿಕೆಯಿಂದಾಗಿ ಆಮದು ಸುಂಕವನ್ನು ರದ್ದುಗೊಳಿಸುವುದು ಅನಿವಾರ್ಯವಾಗಿದೆ ಎಂದು ಹಣಕಾಸು ಸಚಿವಾಲಯ ಹೇಳುತ್ತದೆ. ದೇಶೀಯ ಜವಳಿ ಉದ್ಯಮಗಳ ರಫ್ತು ಸ್ಪರ್ಧಾತ್ಮಕತೆಗೆ ಉಂಟಾಗಿರುವ ತೊಡಕನ್ನು ಕಡಿಮೆ ಮಾಡಲು ಈ ನಡೆ ಎಂಬ ನೆವವನ್ನು ಒಡ್ಡುತ್ತಲೇ ಸರಕಾರ, ಇದು ಗ್ರಾಹಕರಿಗೆ ಪರಿಹಾರವನ್ನು ನೀಡುತ್ತದೆ ಎಂಬ ಆಧಾರ ರಹಿತ ಹೇಳಿಕೆಯನ್ನೂ ಕೊಟ್ಟಿದೆ. ದೊಡ್ಡ ಕಾರ್ಪೊರೇಟ್ ಜವಳಿ ಉದ್ಯಮಗಳು ಅಗ್ಗದ ಕಚ್ಚಾ ವಸ್ತುಗಳ ಪ್ರಯೋಜನಗಳನ್ನು ಗ್ರಾಹಕರಿಗೆ ಎಂದಿಗೂ ವರ್ಗಾಯಿಸುವುದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಏಕೆಂದರೆ ಲಾಭವನ್ನು ಗರಿಷ್ಟಗೊಳಿಸಿ ಕೊಳ್ಳುವುದೇ ಅವರ ಏಕೈಕ ಉದ್ದೇಶ ಎಂದು ಎಐಕೆಎಸ್ ಅಭಿಪ್ರಾಯ ಪಟ್ಟಿದೆ.

ಈ ಮೊದಲು ಕಚ್ಚಾ ರೇಷ್ಮೆಯ ಮೇಲಿನ ಆಮದು ಸುಂಕವನ್ನು ತೆಗೆದು ಹಾಕಿದ್ದರ ಕಹಿ ಅನುಭವದ ಹಿನ್ನೆಲೆಯಲ್ಲಿ ಇದನ್ನು ನೋಡಬೇಕಾಗಿದೆ. ನಮ್ಮ ದೇಶದ ರೈತರಿಗೆ ವಿನಾಶ ತರುವ ಈ ನಿರ್ಧಾರವನ್ನು ಬಿಜೆಪಿ ಸರಕಾರ ಹಿಂತೆಗೆದುಕೊಳ್ಳಬೇಕು, ಹತ್ತಿಯ ಮೇಲೆ ಆಮದು ಸುಂಕಗಳನ್ನು ಮತ್ತೆ ಹಾಕಬೇಕು ಮತ್ತು ರೈತರ ಬೆಳೆಗಳನ್ನು ಫಲದಾಯಕ ಬೆಲೆಗಳಲ್ಲಿ ಖರೀದಿಸಲು ವ್ಯವಸ್ಥೆ ಏರ್ಪಡಿಸಬೇಕು ಎಂದು ಆಗ್ರಹಿಸಿರುವ ಎಐಕೆಎಸ್, ಆಮದು ಸುಂಕಗಳನ್ನು ರದ್ದು ಪಡಿಸಿ ಆದಾಯವನ್ನು ಕಳೆದುಕೊಳ್ಳುವ ಬದಲು, ರೈತರಿಗೆ ಉತ್ತೇಜನೆ ನೀಡುವ ಕ್ರಮ ಕೈಗೊಳ್ಳಬೇಕು ಎಂದು ಹೇಳಿದೆ. ಈ ಸಂವೇದನಾಹೀನ ನಿರ್ಧಾರದ ವಿರುದ್ಧ ಪ್ರತಿಭಟಿಸಬೇಕು ಎಂದು ಅದು ಹತ್ತಿಬೆಳೆವ ರಾಜ್ಯಗಳ ತನ್ನ ಘಟಕಗಳಿಗೆ ಅದು ಕರೆ ನೀಡಿದೆ.



ಗೃಹಸಚಿವರು ರಾಜಿನಾಮೆ ಕೊಡುವಂತೆ ಸಿಪಿಐ(ಎಂ) ಆಗ್ರಹ

ಆಳಂದ ಘಟನೆಗೆ ಸಂಬಂಧಿದಂತೆ ಶ್ರೀರಾಮಸೇನೆ ಹಮ್ಮಿಕೊಂಡ ಶೋಭಾಯಾತ್ರೆ ರದ್ದು ಪಡಿಸುವ ಮತ್ತು ಪಿಎಸ್‌ಐ ನೇಮಕಾತಿಯಲ್ಲಿ ನಡೆದಿರುವ ಅಕ್ರಮ, ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಕಲಬುರಗಿಯ ಬಿಜೆಪಿ ಮುಖಂಡೆ ಶ್ರೀಮತಿ ದಿವ್ಯಾ ಹಾಗರಗಿ ಅವರನ್ನು ಕೂಡಲೇ ಬಂಧಿಸುವಂತೆ ಹಾಗೂ

ಸಕಲ ಜೀವಾತ್ಮರಲ್ಲಿ ಲೇಸನ್ನೇ ಬಯಸಿದ ಬಸವಣ್ಣನವರ ನಾಡು ಕರ್ನಾಟಕದ –ಕಲಬುರಗಿ ಜಿಲ್ಲೆಯಲ್ಲಿ ಕೆಲ ತಿಂಗಳಿಂದ ಕೋಮುದ್ವೇಷ ಹರಡಲು ಕೆಲ ಸಂಘಟನೆಗಳು ಹವಣಿಸುತ್ತಿವೆ ಅದರ ಭಾಗವಾಗಿ ಆಳಂದ ಲಾಡ್ಲೆ ಮಶಾಕ್ ದರ್ಗಾವನ್ನು ಕೇಂದ್ರೀಕರಿಸಿ ಕೋಮುವಾದಿಗಳು ಹಿಂದೂ ಮುಸ್ಲಿಮರ ಮಧ್ಯೆ ದ್ವೇಷವನ್ನು ಹುಟ್ಟಿಸಲು ಯತ್ನಿಸುತ್ತಿವೆ. ಇದರ ಭಾಗವಾಗಿಯೇ ಮಾರ್ಚ್ ಮೊದಲ ವಾರದಲ್ಲಿ ಶಿವಲಿಂಗ ಪೂಜೆ ನೆಪದಲ್ಲಿ ಬಿಜೆಪಿಯ ಸಂಸದರೊಬ್ಬರು ಮತ್ತು ಬಿಜೆಪಿಯ ಕೆಲ ಶಾಸಕರು ಕೂಡ ದರ್ಗಾದಲ್ಲಿ ಶಿವಲಿಂಗ ಪೂಜೆಯ ನೆಪದಲ್ಲಿ ನಿಷೇಧಾಜ್ಞೆ ಜಾರಿ ಇದ್ದರೂ ನೂರಾರು ಜನರ ಮೆರವಣಿಗೆ ತೆಗೆದು ಹಿಂಸಾಚಾರಕ್ಕೆ ಎಡೆಮಾಡಿಕೊಟ್ಟಿದ್ದ ನೆನಪು ಇನ್ನು ಮಾಸಿಲ್ಲ.

ಈ ಸಂದರ್ಭದಲ್ಲಿ ಆಳಂದನಲ್ಲಿ ಬಹುಕಾಲದಿಂದಲೂ ಹಿಂದು–ಮುಸ್ಲಿಮರು ಸಾಮರಸ್ಯದಿಂದ ಕೂಡಿಕೊಂಡು ನಡೆದಿದ್ದಾರೆ. ಆಳಂದ ಲಾಡ್ಲೆ ಮಶಾಕ್ ದರ್ಗಾ ಎಲ್ಲಾ ಕೋಮುಗಳಲ್ಲಿ ಸಾಮರಸ್ಯ ಬೆಸೆದಿರುವ ಕೇಂದ್ರವಾಗಿದೆ. ಇದನ್ನು ಸಹಿಸದ ಕೋಮುವಾದಿ ರಾಜಕೀಯ ಶಕ್ತಿಗಳು ಸಾಮರಸ್ಯವನ್ನೂ ಹದಗೆಡಿಸಿ ವಿಷಮ ವಾತಾವರಣ ಸೃಷ್ಟಿಸಲು ಸತತವಾಗಿ ಯತ್ನಿಸುತ್ತಿವೆ. ಈ ಹಿನ್ನೆಲೆಯಲ್ಲಿ ಕರಾಳ ಮಾರ್ಚ್ ಘಟನೆಯಾದ ನಂತರ ಮತ್ತೆ ಅಲ್ಲಿ ಸಾಮಾಜಿಕ ಶಾಂತಿ ಮರುಸ್ಥಾಪನೆ ಆಗುವ ಸಮಯದಲ್ಲಿ ಆದ ಗಾಯಕ್ಕೆ ಮಾಲಾಮು ಹಚ್ಚುವುದನ್ನು ಬಿಟ್ಟು ಬರುವ 24 ಏಪ್ರಿಲ್ 2022 ರಂದು ಬಿಜೆಪಿಯ ಒಡನಾಡಿ ಶ್ರೀರಾಮಸೇನೆಯು "ಶೋಭಾಯಾತ್ರೆ" ನಡೆಸಲು ಘೋಷಿಸಿದೆ. ಇದನ್ನು ಸಿಪಿಐ(ಎಂ) ಪಕ್ಷ ಖಂಡಿಸಿದೆ ಇದರಿಂದಾಗಿ ಅಲ್ಲಿ ಸೌಹಾರ್ದತೆ ಕದಡುವ ಮತ್ತು ಕುಚ್ಯೋದ್ಯತೆ ನಡೆಯುವ ಹಾಗೂ ಕೋಮುದಂಗೆ ನಡೆಯುವ ಎಲ್ಲಾ ಸಾಧ್ಯತೆಗಳಿವೆ. ಇದರಿಂದ ಆಳಂದದಲ್ಲಿರುವ ಬಡವರು, ಮುಸಲ್ಮಾನರು ಮತ್ತು ದಲಿತರು ಬಲಹೀನರಿಗೆ ರಕ್ಷಣೆ ಕೊಡುವುದು ಯಾವುದೇ ನಾಗರಿಕ ಸರಕಾರದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ 24 ಏಪ್ರಿಲ್ 2022 ರಂದು ಶ್ರೀರಾಮಸೇನೆ ಆಯೋಜಿಸಿರುವ ಶೋಭಾಯಾತ್ರೆಗೆ ಅನುಮತಿ ನಿರಾಕರಿಸಬೇಕು ಎಂದು ಸಿ.ಪಿ.ಐ(ಎಂ) ಪಕ್ಷವು ಒತ್ತಾಯಿಸಿ 21 ಏಪ್ರಿಲ್ 2022 ರಂದು ಕಲಬುರಗಿ ನಗರದ ತಿಮ್ಮಾಪೂರ ಚೌಕದಿಂದ ಪೊಲೀಸ್ ವರಿಷ್ಠರ ಕಛೇರಿವರೆಗೆ ಪಾದಯಾತ್ರೆ ನಡೆಸಿ ಮನವಿ ಪತ್ರ ಸಲ್ಲಿಸಿದೆ.

ರಾಜ್ಯದಲ್ಲಿ ಪಿಎಸ್‌ಐ ನೇಮಕಾತಿಯಲ್ಲಿ ನಡೆದಿರುವ ಅಕ್ರಮ ಭ್ರಷ್ಟಾಚಾರದಲ್ಲಿ ಸಿಲುಕಿರುವ ಕಲಬುರಗಿಯ ಬಿಜೆಪಿ ಮುಖಂಡೆ ಶ್ರೀಮತಿ ದಿವ್ಯಾ ಹಾಗರಗಿ ಅವರನ್ನು ಸೇರಿದಂತೆ ಅಕ್ರಮದಲ್ಲಿ ಭಾಗಿಯಾಗಿರುವವರನ್ನು ಕೂಡಲೇ ಬಂಧಿಸಬೇಕೆಂದು. ಮತ್ತು ಗೃಹ ಸಚಿವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಮತ್ತು ನೊಂದ ಅಭ್ಯರ್ಥಿಗಳಿಗೆ ಮರು ಪರೀಕ್ಷೆಗೆ ಅವಕಾಶ ಮಾಡಿಕೊಡಬೇಕು. ಈ ಘಟನೆ ಕುರಿತು ಸಮಗ್ರವಾದ ತನಿಖೆಯನ್ನು ಹೈಕೋರ್ಟ್ ನ್ಯಾಯಾಧೀಶರಿಂದಲೇ ನಡೆಸಬೇಕೆಂದು ಒತ್ತಾಯಿಸಿದೆ.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ. ನೀಲಾ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಭೀಮಶೆಟ್ಟಿ ಯಂಪಳ್ಳಿ, ಎಂ.ಬಿ. ಸಜ್ಜನ್ ಮುಂತಾದವರಿದ್ದರು.

ಶ್ರೀಲಂಕಾ: ಸಾರ್ವಭೌಮತ್ವಕ್ಕೇ ಕುತ್ತು ತರಬಹುದಾದ ಆರ್ಥಿಕ ಬಿಕ್ಕಟ್ಟು



ರಾಜಪಕ್ಸೆ ಸರ್ಕಾರವು ಈಗ ಐಎಂಎಫ್‌ನೊಂದಿಗೆ ಮುಕ್ತ ಮಾತುಕತೆಗೆ ಮುಂದಾಗಿದೆ. ಒಂದು ವೇಳೆ ಐಎಂಎಫ್‌ನೊಂದಿಗೆ ಸಾಲದ ಒಪ್ಪಂದ ಮಾಡಿಕೊಂಡರೆ, ಜನ ಸಾಮಾನ್ಯರ ಮೇಲೆ ಹೆಚ್ಚು ಹೆಚ್ಚು ತೆರಿಗೆಗಳನ್ನು ಹೇರುವ ಮತ್ತು ಅವರಿಗೆ ದೊರಕಿಸಿದ ಸಬ್ಸಿಡಿಗಳನ್ನು ಕಡಿತಗೊಳಿಸುವ ಕ್ರಮಗಳನ್ನು, ಅಂದರೆ, ಜನರ ಸಂಕಷ್ಟಗಳನ್ನು ತೀವ್ರಗೊಳಿಸುವ ಕ್ರಮಗಳನ್ನು, ಅಳವಡಿಸಿಕೊಳ್ಳುವಂತೆ ಐಎಂಎಫ್ ಒತ್ತಾಯಿಸುವ ಸಾಧ್ಯತೆಯಿದೆ. ಸಮಸ್ಯೆಯೆಂದರೆ, ಈ ಎಲ್ಲ ಬಿಕ್ಕಟ್ಟುಗಳಿಂದ ಉಂಟಾದ ಅಡ್ಡ ಪರಿಣಾಮಗಳನ್ನು ತಗ್ಗಿಸುವುದು ಶ್ರೀಲಂಕಾದ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ವಿದೇಶಿ ವಿನಿಮಯ ಬಿಕ್ಕಟ್ಟೇ ಶ್ರೀಲಂಕಾ ಸರ್ಕಾರದ ಸಮಸ್ಯೆಯ ಕೇಂದ್ರಬಿಂದುವಾಗಿದೆ. ನೆರೆಯ ಪ್ರತಿಸ್ಪರ್ಧಿ ದೇಶಗಳಾದ ಚೀನಾ ಮತ್ತು ಭಾರತ ಮತ್ತು ಉಳಿದ ದೇಶಗಳು ತಮ್ಮ ತಮ್ಮ ಸಾಲಗಳ ಅವಧಿಯನ್ನು ವಿಸ್ತರಿಸದಿದ್ದರೆ ಮತ್ತು ತಮ್ಮ ನೆರವನ್ನು ಹೆಚ್ಚಿಸದಿದ್ದರೆ, ಶ್ರೀಲಂಕಾದ ಸಾರ್ವಭೌಮತ್ವವೇ ಹರಾಜಾಗಲಿದೆ.

ಪ್ರೊ. ಸಿ.ಪಿ. ಚಂದ್ರಶೇಖರ್ ಕೃಪೆ: ಫ್ರಂಟ್‌ಲೈನ್ ಪಾಕ್ಷಿಕ ಅನು: **ಕೆ.ಎಂ. ನಾಗರಾಜ್**

ನಮ್ಮ ನೆರೆಯ ದ್ವೀಪ ರಾಷ್ಟ್ರ ಶ್ರೀಲಂಕಾದ ಅರ್ಥವ್ಯವಸ್ಥೆಯು ಅವ್ಯವಸ್ಥೆಯತ್ತ ಸಾಗಿದೆ. ಅನೇಕ ಬಿಕ್ಕಟ್ಟುಗಳು ಶ್ರೀಲಂಕಾವನ್ನು ಪೀಡಿಸುತ್ತಿವೆ. ಕೋವಿಡ್–19 ಸಮಯದಲ್ಲಿ ತಲೆದೋರಿದ ವಿದೇಶಿ ವಿನಿಮಯ ಆದಾಯದ ತೀವ್ರ ಕುಸಿತ, ಹೊರ ದೇಶಗಳಿಂದ ಪಡೆದ ಬೃಹತ್ ಸಾಲದ ಕಂತುಗಳನ್ನೂ ಕಟ್ಟಲಾಗದಂತಹ ಆರ್ಥಿಕ ಮುಗ್ಗಟ್ಟು, ಬರಿದಾದ ವಿದೇಶಿ ವಿನಿಮಯ ಮೀಸಲು ಸಂಗ್ರಹ, ಮತ್ತು ಕೊನೆಯದಾಗಿ, ಉಕ್ರೇನ್ ಯುದ್ಧದ ಪರಿಣಾಮಗಳು ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟುಗಳನ್ನು ಉಲ್ಬಣಗೊಳಿಸಿವೆ. ಬಿಕ್ಕಟ್ಟನ್ನು ಉಲ್ಬಣಗೊಳಿಸಿದ ಮತ್ತೊಂದು ಮುಖ್ಯವಾದ ಅಂಶವೆಂದರೆ, ಶ್ರೀಲಂಕಾದ ರೂಪಾಯಿಯ ತೀವ್ರ ಅಪಮೌಲ್ಯ. ಅದೆಷ್ಟು ವೇಗವಾಗಿ ರೂಪಾಯಿ ಅಪಮೌಲ್ಯಗೊಂಡಿತು ಎಂದರೆ, ತಿಂಗಳ ಆರಂಭದಲ್ಲಿ ಒಂದು ಡಾಲರ್‌ಗೆ 200ರ ಮಟ್ಟದಲ್ಲಿದ್ದ ರೂಪಾಯಿ ಮಾರ್ಚ್ ಅಂತ್ಯದ ವೇಳೆಗೆ 300ಕ್ಕೆ ಕುಸಿದಿತ್ತು.

ಈ ಬಿಕ್ಕಟ್ಟಿನ ತಳದಲ್ಲಿ ಒಂದು ರಾಶಿ ನ್ಯೂನತೆಗಳು ಮತ್ತು ದೌರ್ಬಲ್ಯಗಳು ಇದ್ದವು. ಬೆಳೆಯುತ್ತಾ ಹೋದ ಈ ನ್ಯೂನತೆ–ದೌರ್ಬಲ್ಯಗಳು ಕೊರೊನಾ ಅವಧಿಯಲ್ಲಿ ಉಲ್ಬಣಗೊಂಡವು. ಕೊರೋನಾ ಸಾಂಕ್ರಾಮಿಕವು ಶ್ರೀಲಂಕಾದ ಪ್ರವಾಸೋದ್ಯಮ ಗಳಿಕೆ ಮತ್ತು ಅದರ ರಫ್ತು ಆದಾಯದ ಮೇಲೂ ಪ್ರತಿಕೂಲ ಪರಿಣಾಮ ಬೀರಿತು. ಪ್ರವಾಸೋದ್ಯಮದ ಮೂಲಕ 2018 ರಲ್ಲಿ 4.4 ಬಿಲಿಯನ್ ಡಾಲರ್ ಮತ್ತು 2019 ರಲ್ಲಿ 3.6 ಬಿಲಿಯನ್ ಡಾಲರ್ ಆದಾಯವನ್ನು ಶ್ರೀಲಂಕಾ ಗಳಿಸಿತ್ತು. ಈ ಆದಾಯವು 2020 ರಲ್ಲಿ ಕೇವಲ 682 ಮಿಲಿಯನ್ ಡಾಲರ್‌ಗಳಿಗೆ ಮತ್ತು 2021 ರಲ್ಲಿ 534 ಮಿಲಿಯನ್ ಡಾಲರ್‌ಗಳಿಗೆ ಇಳಿದಿತ್ತು. ಶ್ರೀಲಂಕಾದ ಸೆಂಟ್ರಲ್ ಬ್ಯಾಂಕ್‌ನ ಅಂಕಿ–ಅಂಶಗಳ ಪ್ರಕಾರವೇ, ಅದರ ರಫ್ತು ಆದಾಯವು 2019 ರಲ್ಲಿ 11.9 ಬಿಲಿಯನ್ ಡಾಲರ್‌ಗಳಿಂದ 2020 ರಲ್ಲಿ 10 ಬಿಲಿಯನ್ ಡಾಲರ್‌ಗಳಿಗೆ ಇಳಿಯಿತು ಮತ್ತು 2021 ರಲ್ಲಿ 12.5 ಬಿಲಿಯನ್ ಡಾಲರ್‌ಗಳಿಗೆ ಏರಿತು. ಡಾಲರ್ ಆದಾಯದ ಇಳಿಕೆಯ ಒಟ್ಟು ಪರಿಣಾಮವಾಗಿ ಉಂಟಾದ ವಿದೇಶಿ ವಿನಿಮಯ ಬಿಕ್ಕಟ್ಟು ಶ್ರೀಲಂಕಾವನ್ನು ಬಹಳವಾಗಿ ಬಾಧಿಸುತ್ತಿದೆ. ಅದರ ಬಾಹ್ಯ ಸಾಲವೇ ಸುಮಾರು 51 ಬಿಲಿಯನ್ ಡಾಲರ್‌ಗಳಷ್ಟು ದೊಡ್ಡದಿದೆ. ಈ ಸಾಲದ ಪೈಕಿ, ಹಿಂದಿನ ಕೆಲವು ವರ್ಷಗಳಲ್ಲಿ ಮಾಡಿದ್ದ ಸಾಲವೇ



ಅತಿ ಹೆಚ್ಚಿನ ಭಾಗವಾಗಿದೆ. 2004 ಮತ್ತು 2015 ರ ನಡುವೆ, ಹಿಂದಿನ ಮಹಿಂದಾ ರಾಜಪಕ್ಸೆ ಸರ್ಕಾರವು 14.06 ಬಿಲಿಯನ್ ಡಾಲರ್ ಸಾಲ ಪಡೆದಿತ್ತು. ಈ ಸಾಲಗಳ ಬಾಬ್ತು 2022 ರಲ್ಲಿ ತೀರಿಸಬೇಕಾದ ಮೊತ್ತವೇ 6.9 ಬಿಲಿಯನ್ ಡಾಲರ್‌ಗಳೆಂದು ಅಂದಾಜು ಮಾಡಲಾಗಿದೆ.

ಡಾಲರ್ ಆದಾಯದ ಇಳಿಕೆಯ ಜೊತೆಯಲ್ಲೇ ಹೊರಗಿನ ಸಾಲದ ಬಡ್ಡಿ ಮತ್ತು ಅಸಲು ತೀರುವಳಿಗಾಗಿ ದೊಡ್ಡ ಮೊತ್ತದ ವಿದೇಶಿ ವಿನಿಮಯವು ಹೊರಹರಿದ ಕಾರಣದಿಂದಾಗಿ, 2021 ರ ಜುಲೈ ಅಂತ್ಯದ ವೇಳೆಗೆ ವಿದೇಶಿ ವಿನಿಮಯ ಮೀಸಲು ಸಂಗ್ರಹವು 2.8 ಬಿಲಿಯನ್ ಡಾಲರ್‌ಗಳಿಗೆ ಇಳಿದಿತ್ತು. 2022 ವರ್ಷವು ಕೇವಲ 1.6 ಬಿಲಿಯನ್ ಡಾಲರ್ ವಿದೇಶೀ ವಿನಿಮಯ ಸಂಗ್ರಹದೊಂದಿಗೆ ಪ್ರಾರಂಭವಾಯಿತು. ಹಾಗಾಗಿ, ಶ್ರೀಲಂಕಾವು ವಿದೇಶಿ ವಿನಿಮಯದ ಬಿಕ್ಕಟ್ಟಿಗೆ ಒಳಗಾಗಿದೆ. ಪರಿಣಾಮವಾಗಿ, ಶ್ರೀಲಂಕಾದ ರೂಪಾಯಿ ಮೌಲ್ಯವು ಗಮನಾರ್ಹವಾಗಿ ಕುಸಿದಿದೆ.

ಈ ಒಂದು ಅಗಾಧ ಬಿಕ್ಕಟ್ಟಿಗೆ ಉತ್ತರವಾಗಿ, ಹೊರಗಿನ ಸಾಲ ತೀರಿಸುವಲ್ಲಿ ಸೋತಿದೆ ಎಂಬ ಕಳಂಕ ಹೊರಲು ಬಯಸದ ಸರ್ಕಾರವು ಕಳೆದ ಕೆಲವು ವರ್ಷಗಳಲ್ಲಿ ಆಮದುಗಳನ್ನು ಮೊಟಕುಗೊಳಿಸಿತು. ವಿದೇಶಿ ವಿನಿಮಯದ ಹೊರಹರಿವನ್ನು ತಡೆಯುವ ಸಲುವಾಗಿ 2020ರಲ್ಲಿ ಅನೇಕ ವಸ್ತುಗಳ ಮೇಲೆ ಆಮದು ನಿರ್ಬಂಧವನ್ನು ಶ್ರೀಲಂಕಾ ಘೋಷಿಸಿತು. ಮೋಟಾರು ಕಾರುಗಳಿಂದ ಹಿಡಿದು ರಸಗೊಬ್ಬರಗಳ ವರೆಗೆ, ಸಕ್ಕರೆಯಿಂದ ಹಿಡಿದು ಅರಿಶಿನದವರೆಗೆ ಹಲವು ಹತ್ತು ಸರಕುಗಳ ಆಮದನ್ನು ರಾಜಪಕ್ಸೆ ಸರ್ಕಾರವು ನಿರ್ಬಂಧಿಸಿತು. ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಆಮದು ನಿಷೇಧವು ಭಾರೀ ವಿವಾದ–ವಿರೋಧಗಳಿಗೆ ಒಳಗಾಯಿತು. ಗೊಬ್ಬರ ಆಮದು ನಿಷೇಧವನ್ನು, ಸಾವಯವ ಕೃಷಿಯ ಬಗ್ಗೆ ತಮ್ಮ ಸರ್ಕಾರವು ಹೊಂದಿರುವ ಬದ್ಧತೆಯ ಪ್ರತೀಕವೆಂದು ಸಮರ್ಥಿಸಲಾಯಿತು. ಆದರೆ, ವಿದೇಶಿ ವಿನಿಮಯದ ನೈಜ ಕೊರತೆಯಿಂದ ಪ್ರೇರಿತವಾಗಿದ್ದ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಆಮದು ನಿಷೇಧವನ್ನು ನಂತರ ರದ್ದುಪಡಿಸಲಾಯಿತು, ಆದಾಗ್ಯೂ, ಮುಂಬರುವ ದಿನಗಳಲ್ಲಿ ಭತ್ತ ಮತ್ತು ಚಹಾದ ಉತ್ಪಾದನೆ ಇಳಿಕೆಯಾಗುವ ಸಂಭವವಿದೆ.

ತಯಾರಿಕಾ ಯಂತ್ರಗಳಿಂದ ಹಿಡಿದು ದಿನ ನಿತ್ಯದ ಬಳಕೆಯ ವಸ್ತುಗಳ ವರೆಗಿನ ಸರಕು ಸರಂಜಾಮುಗಳ ಪೂರೈಕೆಗಾಗಿ ಆಮದುಗಳನ್ನೇ ಅವಲಂಬಿಸಿದ ಒಂದು ದೇಶದಲ್ಲಿ ಆಮದುಗಳ ಮೇಲೆ ನಿರ್ಬಂಧ ಹೇರಿದ್ದರಿಂದಾಗಿ, ಇಂಧನದ ಪೂರೈಕೆಯಲ್ಲಿ ಕೊರತೆ ಉಂಟಾಯಿತು. ಪೆಟ್ರೋಲ್ ಬಂಕ್‌ಗಳ ಮುಂದೆ ಉದ್ದನೆಯ ಸರತಿ ಸಾಲುಗಳಲ್ಲಿ ನಿಂತ ವಾಹನ ಚಾಲಕರು ಪೆಟ್ರೋಲ್‌ಗಾಗಿ ಪರದಾಡುವಂತಾಯಿತು. ವಿದ್ಯುತ್ ಸರಬರಾಜನ್ನು ಕಡಿತಗೊಳಿಸಲಾಯಿತು. ಔಷಧಗಳ ಕೊರತೆಯಿಂದಾಗಿ ರೋಗಿಗಳು ಆತಂಕಕ್ಕೆ ಒಳಗಾದರು ಮತ್ತು ಆಸ್ಪತ್ರೆಗಳು ಅಸಹಾಯಕತೆಗೊಳಗಾದವು. ಹಾಲು, ಆಹಾರ ಮತ್ತು ಅಡುಗೆ ಅನಿಲದ ಕೊರತೆಯಿಂದಾಗಿ ಜನರು ಬಾಯಿ ಬಾಯಿ ಬಡಿದುಕೊಳ್ಳುವಂತಾಯಿತು. ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಲು ಬಿಳಿ ಹಾಳೆಗಳು ಲಭ್ಯವಿಲ್ಲದ ಕಾರಣ ಪರೀಕ್ಷೆಗಳನ್ನು ಮುಂದೂಡಬೇಕಾಯಿತು ಮತ್ತು ಮುದ್ರಣ–ಕಾಗದದ ಕೊರತೆಯಿಂದಾಗಿ ವಾರ್ತಾಪತ್ರಿಕೆಗಳ ಮುದ್ರಣವನ್ನು ಕೈಬಿಡಲಾಯಿತು. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಆಮದು ನಿಷೇಧದ ಪರಿಣಾಮವಾಗಿ ಕೃಷಿ ಉತ್ಪಾದನೆ ಇಳಿಯಿತು ಮತ್ತು ಆಹಾರ ಧಾನ್ಯಗಳ ಆಮದು ಹೆಚ್ಚಿತು. ದಿನ ನಿತ್ಯದ ಬಳಕೆಯ ವಸ್ತುಗಳ ಅಭಾವದಿಂದಾಗಿ ಬಡ ಮತ್ತು ಮಧ್ಯಮ ವರ್ಗದ ಜನರ ಜೀವನವೇ ಅಲ್ಲೋಲ ಕಲ್ಲೋಲವಾಗಿದೆ. ಆಹಾರ ಗಲಭೆಗಳು ಸಂಭವಿಸಿದರೂ ಆಶ್ಚರ್ಯವಿಲ್ಲ ಎಂಬುದಾಗಿ ರಾಜಕೀಯ ವೀಕ್ಷಕರು ಅಭಿಪ್ರಾಯಪಡುತ್ತಾರೆ.

ಈ ಸಮಸ್ಯೆಗಳು ಒಂದನ್ನೊಂದು ಪೋಷಿಸಿ ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿವೆ. ಸತತ ಕುಸಿತಕ್ಕೊಳಗಾದ ರೂಪಾಯಿ–ಮೌಲ್ಯವು ಆಮದು ವೆಚ್ಚವನ್ನು ಹೆಚ್ಚಿಸಿತು ಮತ್ತು ಹಣದುಬ್ಬರವನ್ನು ಹದಗೆಡಿಸಿತು. ವಿದೇಶಿ ವಿನಿಮಯ ಮೀಸಲು ಸಂಗ್ರಹವೂ ಬತ್ತಿಹೋಯಿತು. ಏಕೆಂದರೆ. ರಫ್ತುದಾರರು ಹೊರ ದೇಶಗಳಿಂದ ತಮಗೆ ಬರಬೇಕಾದ ಹಣವನ್ನು ತರಿಸಿಕೊಳ್ಳಲು ತಡ ಮಾಡುತ್ತಾರೆ. ರೂಪಾಯಿ ಮೌಲ್ಯವು ಸತತವಾಗಿ ಕುಸಿಯುತ್ತಿರುವ ಸಂದರ್ಭದಲ್ಲಿ ಹಣ ತರಿಸಿಕೊಳ್ಳುವುದು ತಡವಾದಷ್ಟೂ ರಫ್ತುದಾರರಿಗೆ ಲಾಭವಿದೆ. ವಿದೇಶಗಳಲ್ಲಿ ದುಡಿಯುತ್ತಿರುವ ಶ್ರೀಲಂಕಾ ಮೂಲದ ಕೆಲಸಗಾರರು ಸ್ವದೇಶದಲ್ಲಿರುವ ತಮ್ಮ ಬಂಧುಗಳಿಗೆ ಹಣ ಕಳುಹಿಸಲು ಅಧಿಕೃತ ಮಾರ್ಗದ ಬದಲಾಗಿ, ಅನೌಪಚಾರಿಕ ಹಣ ವರ್ಗಾವಣೆಯ ಮಾರ್ಗಗಳನ್ನು ಬಳಸಿಕೊಂಡು 'ಕಪ್ಪು ಮಾರುಕಟ್ಟೆ'ಯ ಲಾಭ ಪಡೆಯಲು ಬಯಸುತ್ತಾರೆ. ಲಭ್ಯವಿರುವ ವಿದೇಶಿ ವಿನಿಮಯವನ್ನು ಬಳಸಿಕೊಳ್ಳುವ ಪ್ರಶ್ನೆ ಬಂದಾಗ, ವಿದೇಶಿ ಸಾಲ ಮರುಪಾವತಿಗಿಂತ ಹೆಚ್ಚಿನ ಆದ್ಯತೆಯನ್ನು ಕೊರತೆಗಳನ್ನು ನಿವಾರಿಸುವ ಆಮದುಗಳಿಗಾಗಿ ತಿರುಗಿಸಲಾಗುತ್ತಿದೆ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದರೆ, ವಿದೇಶಿ ಸಾಲ ಮರುಪಾವತಿಗಾಗಿ 500 ಮಿಲಿಯನ್ ಡಾಲರ್ ಹಂಚಿಕೆ ಮಾಡುವುದಾಗಿ ಸೆಂಟ್ರಲ್ ಬ್ಯಾಂಕ್ ಆಫ್ ಶ್ರೀಲಂಕಾ (ಸಿಬಿಎಸ್‌ಎಲ್) ಜನವರಿ 2022 ರಲ್ಲಿ ಘೋಷಿಸಿದಾಗ, ಸಾಲ ತೀರಿಸುವಲ್ಲಿ ಮುಖಭಂಗವಾದರೂ ಅಡ್ಡಿಯಿಲ್ಲ, ಅಷ್ಟೂ ಹಣವನ್ನು ಅವಶ್ಯ ಆಮದುಗಳಿಗಾಗಿಯೇ ಬಳಸಿಕೊಳ್ಳಬೇಕು ಎಂಬುದಾಗಿ ಶ್ರೀಲಂಕಾದ ಪ್ರಮುಖ ಅರ್ಥಶಾಸ್ತ್ರಜ್ಞರು ಸಿಬಿಎಸ್‌ಎಲ್ ಅನ್ನು ಆಗ್ರಹಿಸಿದ್ದರು.

ಕುಸಿಯುತ್ತಿರುವ ಕೃಷಿ ಉತ್ಪಾದನೆ ಹಾಗೂ ಲಾಭವಿಲ್ಲದ ಬೇಸಾಯ, ಬೇಡಿಕೆಯ ಕೊರತೆ ಹಾಗೂ ನಿರ್ಣಾಯಕ ಲಾಗುವಾಡುಗಳು ದುರ್ಲಭವಾದ ಕಾರಣದಿಂದಾಗಿ ಕೈಗಾರಿಕಾ ಘಟಕಗಳ ಪೂರ್ಣ ಸಾಮರ್ಥ್ಯದ ಬಳಕೆ ಸಾಧ್ಯವಾಗದೇ ಇರುವುದು ಮತ್ತು ಎರಡು ವರ್ಷಗಳಿಂದಲೂ ಸತತ ಇಳಿಕೆಯಾಗುತ್ತಿರುವ ಪ್ರವಾಸಿಗಳ ಸಂಖ್ಯೆ, ಇಂಥಹ ಕಾರಣಗಳಿಂದ ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟು ಆಳವಾಗುತ್ತಿದೆ. ಜೊತೆಗೆ, ಏರುತ್ತಿರುವ ಇಂಧನ ಬೆಲೆಗಳು ಮತ್ತು ತೀವ್ರವಾಗಿ ಕುಸಿಯುತ್ತಿರುವ ಕರೆನ್ಸಿ–ಮೌಲ್ಯ ಇವುಗಳ ಮೂಲಕ ಆಮದಾದ ಹಣದುಬ್ಬರವು ಲಾಗುವಾಡುಗಳ ಬೆಲೆಗಳನ್ನು ಕೈಗೆಟುಕಲಾರದಷ್ಟು ಮೇಲೆ ತಳ್ಳಿರುವುದರಿಂದಾಗಿ, ಲಾಗುವಾಡುಗಳ ಆ ಮಟ್ಟದ ಬೆಲೆಗಳಲ್ಲಿ ಉತ್ಪಾದಿಸಿದ ಸರಕು ಸೇವೆಗಳ ಬೆಲೆಗಳನ್ನು ಅನುಗುಣವಾದ ಪ್ರಮಾಣದಲ್ಲಿ ಏರಿಸುವುದು ಅಸಾಧ್ಯವೇ. ಕೊನೆಯದಾಗಿ, ವಿದೇಶಿ ಸಾಲ ಮಾಡಿದ ಖಾಸಗಿ ಕಂಪೆನಿ/ಸಂಸ್ಥೆಗಳು ತಮ್ಮ ಸಾಲದ ಸ್ವಲ್ಪ ಭಾಗವನ್ನಾದರೂ ಮರು ಪಾವತಿಸುವ ಸಾಧ್ಯತೆಗಳೂ ಕ್ಷೀಣಿಸುತ್ತಿವೆ, ಏಕೆಂದರೆ, ವಿದೇಶಿ ವಿನಿಮಯವು ಕೊಳ್ಳಲಾರದಷ್ಟು ಅತಿಯಾಗಿ ಶ್ರೀಲಂಕಾದ ಕರೆನ್ಸಿಯು ಅಪಮೌಲ್ಯಗೊಂಡಿದೆ. ಈ ಪ್ರವೃತ್ತಿಗಳು ದಿವಾಳಿಗಳ ಒಂದು ಅಲೆಯನ್ನೇ ಪ್ರಚೋದಿಸಬಹುದು. ಈ ಎಲ್ಲಾ ಸಂಕಷ್ಟಗಳೂ ಶ್ರೀಲಂಕಾವನ್ನು ಉಕ್ರೇನ್ ಯುದ್ಧ ಆರಂಭವಾಗುವ ಮೊದಲೇ ಬಾಧಿಸುತ್ತಿದ್ದವು. ಪರಿಸ್ಥಿತಿ ಈಗ ಮತ್ತಷ್ಟು ಹದಗೆಟ್ಟಿದೆ. ಏಕೆಂದರೆ, ರಷ್ಯಾ ಮತ್ತು ಉಕ್ರೇನ್ ಈ ಎರಡೂ ದೇಶಗಳೂ ಶ್ರೀಲಂಕಾದ ಪ್ರಮುಖ ವ್ಯಾಪಾರ ಪಾಲುದಾರರು ಮತ್ತು ಪ್ರವಾಸಿಗಳ ಒಂದು ದೊಡ್ಡ ಮೂಲವೂ ಹೌದು. ಈ ನಡುವೆ, ಮುಳುಗುತ್ತಿರುವ ತನ್ನ ಅರ್ಥವ್ಯವಸ್ಥೆಯನ್ನು ನೆರೆಯ ಚೀನಾ ಮತ್ತು ಭಾರತ

ಪುಟ 14 ಕ್ಕೆ



ಹಿಂದೂ–ಮುಸ್ಲಿಂ ಎಂದು ಜಪಿಸುತ್ತಿರುವ ಭಾರತದ ಮಂದಿಗೆ ಬಿಕ್ಕಟ್ಟು–ಪೀಡಿತ ಶ್ರೀಲಂಕಾದವರ ಸಲಹೆ:
"ತಮ್ಮಾ..ನೀನು ಕೇಳಿರದಿದ್ದರೂ ನನ್ನದೊಂದು ಸಲಹೆ..ಅರ್ಥವ್ಯವಸ್ಥೆಯ ಮೇಲೆ ಗಮನ ಕೇಂದ್ರೀಕರಿಸಿ"
ವ್ಯಂಗ್ಯಚಿತ್ರ: ಅಲೋಕ್ ನಿರಂತರ್, ಫೇಸ್‌ಬುಕ್

ಶ್ರೀಲಂಕಾ: ಸಾರ್ವಭೌಮತ್ವಕ್ಕೇ ಕುತ್ತು ತರಬಹುದಾದ ಆರ್ಥಿಕ ಬಿಕ್ಕಟ್ಟು.......

ಪುಟ 13 ರಿಂದ

ದೇಶಗಳ ಸಹಾಯದಿಂದ ಮೇಲೆತ್ತಲು ಶ್ರೀಲಂಕಾದ ಸರ್ಕಾರವು ತಿಣುಕಾಡುತ್ತಿದೆ. ಸಾಲಗಾರರ ಮೇಲೆ ಐಎಂಎಫ್ ವಿಧಿಸುವ ಷರತ್ತುಗಳ ಕಾರಣದಿಂದ ಐಎಂಎಫ್‌ನಿಂದ ದೂರವಿದ್ದ ಶ್ರೀಲಂಕಾ ಈಗ ಅದನ್ನೂ ಓಲೈಸಲಾರಂಭಿಸಿದೆ.

ಈ ಹಿಂದೆ ತನ್ನ ನೆರೆಯ ಎರಡೂ ದೇಶಗಳಿಂದಲೂ ಪಡೆಯುವ ಬೆಂಬಲವನ್ನು ಹೆಚ್ಚಿಸಿಕೊಳ್ಳಲು ಭಾರತ ಮತ್ತು ಚೀನಾ ದೇಶಗಳನ್ನು ಒಬ್ಬರ ವಿರುದ್ಧವಾಗಿ ಇನ್ನೊಬ್ಬರನ್ನು ಎತ್ತಿಕಟ್ಟಿ ಆಡಿಸುವಲ್ಲಿ ಶ್ರೀಲಂಕಾ ಯಶಸ್ವಿಯಾಗಿತ್ತು. ಒಟ್ಟಾರೆಯಾಗಿ ಹೇಳುವುದಾದರೆ, ಇತ್ತೀಚಿನವರೆಗೂ ಶ್ರೀಲಂಕಾವು ಭಾರತಕ್ಕಿಂತ ಚೀನಾದ ಕಡೆಗೇ ಹೆಚ್ಚು ವಾಲಿತ್ತು. ಚೀನಾದ ಬೆಲ್ಟ್ ಅಂಡ್ ರೋಡ್ ಇನಿಶಿಯೇಟಿವ್ ಅಡಿಯಲ್ಲಿನ ಯೋಜನೆಗಳಿಂದ ಶ್ರೀಲಂಕಾ ಪ್ರಯೋಜನ ಪಡೆಯಿತು ಮತ್ತು ಚೀನಾದ ಕೇಂದ್ರ ಬ್ಯಾಂಕಿನೊಂದಿಗೆ ವಿದೇಶಿ ವಿನಿಮಯ ಅದಲು-ಬದಲು ಮಾಡಿಕೊಳ್ಳುವ ಒಂದು ದೊಡ್ಡ ದ್ವಿಪಕ್ಷೀಯ ವ್ಯವಸ್ಥೆಯನ್ನೂ ಮಾಡಿಕೊಂಡಿತ್ತು. ಈ ಸಹಾಯಕ್ಕೆ ಪ್ರತಿಯಾಗಿ ಶ್ರೀಲಂಕಾವು ಚೀನಾವನ್ನು ಬೆಂಬಲಿಸಿತ್ತು. ಹಾಗಾಗಿ, ಕೊಲಂಬೊ ಬಂದರಿನ ಪೂರ್ವ ಕಂಟೈನರ್ ಟರ್ಮಿನಲ್‌ಅನ್ನು ಅಭಿವೃದ್ಧಿಪಡಿಸಲು ಭಾರತ ಮತ್ತು ಜಪಾನ್ ಜೊತೆಗಿನ ತ್ರಿಪಕ್ಷೀಯ ಒಪ್ಪಂದವನ್ನು ರಾಜಪಕ್ಸೆ ಸರ್ಕಾರವು ರದ್ದುಗೊಳಿಸಿತು ಮತ್ತು ಇದೇ ಗುತ್ತಿಗೆಯನ್ನು ಚೀನಾ ಸರ್ಕಾರದ ಒಡೆತನದ ಚೀನಾ ಹಾರ್ಬರ್ ಎಂಜಿನಿಯರಿಂಗ್ ಕಂಪನಿಗೆ ಹಸ್ತಾಂತರಿಸಿತು. ಈ ಕೃತ್ಯವು ಭಾರತವನ್ನು ಅಸಮಾಧಾನಗೊಳಿಸಿತು. ಈ ಹಿಂದೆಯೂ ಸಹ ಶ್ರೀಲಂಕಾ ಸರ್ಕಾರವು ಇಂಥದ್ದೇ ಕೆಲವು ಕೃತ್ಯಗಳಲ್ಲಿ ತೊಡಗಿತ್ತು. ಆದ್ದರಿಂದ, ಭಾರತದ ಮುನಿಸನ್ನು ತಿಳಿಗೊಳಿಸುವ ಸಲುವಾಗಿ, ಮೂಲ ಬಂದರಿನ ಹತ್ತಿರವೇ ಇನ್ನೊಂದು ಟರ್ಮಿನಲ್‌ಅನ್ನು ನಿರ್ಮಿಸುವ ಗುತ್ತಿಗೆಯನ್ನು ಅದಾನಿ ಕಂಪೆನಿಗೆ ಶ್ರೀಲಂಕಾ ಒದಗಿಸಿತ್ತಾದರೂ, ಎರಡೂ ದೇಶಗಳ ನಡುವಿನ ಹಳೆಯ ಜಗಳಗಳು ಇನ್ನೂ ಬಗೆಹರಿದಿಲ್ಲ. 2017 ರಲ್ಲಿ ಶ್ರೀಲಂಕಾದ ಹಿಂದಿನ ಪ್ರಧಾನಿ ರನಿಲ್ ವಿಕ್ರಮಸಿಂಘೆ ಅವರು ಹಿಂದಿನ ಮೋದಿ ಸರ್ಕಾರದೊಂದಿಗೆ ಸಹಿ ಹಾಕಿದ ತಿಳುವಳಿಕಾ ಒಡಂಬಡಿಕೆಯ ಆಧಾರದ ಮೇಲೆ ಭಾರತವು ದೇಶದಲ್ಲಿ ಪ್ರಾರಂಭಿಸಬೇಕಾಗಿರುವ ಹಲವಾರು ಯೋಜನೆಗಳ ಬಗ್ಗೆ ಶ್ರೀಲಂಕಾ ಸ್ವಲ್ಪವೂ ಉತ್ಸಾಹ ತೋರಿಸಿಲ್ಲ.

ಆದರೆ, ಈ ಪರಿಸ್ಥಿತಿ ಇತ್ತೀಚೆಗೆ ಬದಲಾಗುತ್ತಿದೆ ಎಂದು ತೋರುತ್ತದೆ. ಬೀಜಿಂಗ್ ಮತ್ತು ಕೊಲಂಬೊ ನಡುವೆ ಉದ್ವಿಗ್ನತೆ ಉಂಟಾಗಿರುವ ಸೂಚನೆಗಳಿವೆ. ಸಾವಯವ ಗೊಬ್ಬರವನ್ನು ಸರಬರಾಜು ಮಾಡುವಂತೆ ಚೀನಾದ ಒಂದು ಬಯೋಟೆಕ್ ಸಂಸ್ಥೆಯೊಂದಿಗಿನ ತನ್ನ ಕೋರಿಕೆಯನ್ನು ಶ್ರೀಲಂಕಾದ ಸರ್ಕಾರವು ರದ್ದುಗೊಳಿಸಿದೆ. ಶ್ರೀಲಂಕಾದ ಕೋರಿಕೆಯ ಮೇರೆಗೆ 20,000 ಟನ್ ಸಾವಯವ ಗೊಬ್ಬರ ಹೊತ್ತೊಯ್ದ ಚೀನಾದ ಹಡಗು ಶ್ರೀಲಂಕಾವನ್ನು ತಲುಪಿದ ನಂತರ, ಅದರಲ್ಲಿರುವ ಗೊಬ್ಬರವು ಬೆಳೆಗಳನ್ನು ನಾಶಪಡಿಸುವ ಬ್ಯಾಕ್ಟೀರಿಯಾದಿಂದ ಕೂಡಿದೆ ಎಂದು ಆರೋಪಿಸಿ ಅದನ್ನು ಹಡಗಿನಿಂದ ಇಳಿಸಲು ಶ್ರೀಲಂಕಾ ನಿರಾಕರಿಸಿತು. ಈ ವಿದ್ಯಮಾನದಲ್ಲಿ ಒಂದು ಅವಕಾಶವನ್ನು ಮನಗಂಡ ಭಾರತವು ಶ್ರೀಲಂಕಾದ ರೈತರ ಬೇಡಿಕೆಗಳನ್ನು ಪೂರೈಸಲು ನ್ಯಾನೋ ನೈಟ್ರೋಜನ್ ರಸಗೊಬ್ಬರವನ್ನು ತುರ್ತಾಗಿ ಸರಬರಾಜು ಮಾಡಿತು. ತನ್ನ ಕರಾವಳಿ ತೀರಕ್ಕೆ ಅತಿ ಸಮೀಪದಲ್ಲಿರುವ ಯೋಜನೆಗಳಲ್ಲಿ ಚೀನಾದ ಭಾಗೀದಾರಿಕೆಯ ಬಗ್ಗೆ ಭಾರತವು ಎತ್ತಿರುವ ಭದ್ರತಾ ಆಕ್ಷೇಪಣೆಗಳ ಕಾರಣದಿಂದಾಗಿ, ಉತ್ತರದ ಮೂರು ದ್ವೀಪಗಳಲ್ಲಿ ಸಿನೋ ಸೋಲಾರ್ ಹೈಬ್ರಿಡ್ ಟೆಕ್ನಾಲಜಿಯ ಹೈಬ್ರಿಡ್ ಇಂಧನ ವ್ಯವಸ್ಥೆಗಳ ಅಭಿವೃದ್ಧಿಯನ್ನು ಸ್ಥಗಿತಗೊಳಿಸಲು ಶ್ರೀಲಂಕಾ ನಿರ್ಧರಿಸಿದೆ. ಈ ಯೋಜನೆಗಳನ್ನು ತೃತೀಯ ವ್ಯಕ್ತಿಯ ಮಧ್ಯಪ್ರವೇಶದಿಂದಾಗಿ ಕೈಬಿಡಲಾಗಿದೆ ಎಂದು ಚೀನಾ ಆಕ್ಷೇಪಿಸಿದೆ. ಬದಲಿ ಯೋಜನೆಗಳನ್ನು ಈಗ ಭಾರತ ಕಾರ್ಯಗತಗೊಳಿಸುತ್ತಿದೆ. ಆದಾಗ್ಯೂ, ಶ್ರೀಲಂಕಾದ ಆಂತರಿಕ ಕೊರತೆಗಳನ್ನು ಕಡಿಮೆ ಮಾಡಲು, ಹಣದುಬ್ಬರವನ್ನು ತಗ್ಗಿಸಲು ಮತ್ತು ಶ್ರೀಲಂಕಾದ ವಿದೇಶಿ ವಿನಿಮಯ ಸಂಗ್ರಹವನ್ನು ಅದರ ಡಾಲರ್ ಗಳಿಕೆಯು ಚೇತರಿಸಿಕೊಂಡು ತನ್ನ ಮೊದಲಿನ ಸ್ಥಿತಿಗೆ ಮರಳುವವರೆಗೂ ಹೆಚ್ಚಿಸಲು ಚೀನಾ ಮತ್ತು ಭಾರತ ಎಷ್ಟೆಷ್ಟು ಬೆಂಬಲ ಒದಗಿಸುತ್ತವೆ ಎಂಬುದು ಸ್ಪಷ್ಟವಿಲ್ಲ. ಒಂದು ವೇಳೆ ಈ ಬೆಂಬಲವು ಅಸಮರ್ಪಕವಾದರೆ, ಶ್ರೀಲಂಕಾಗೆ ಉಳಿದ ಆಯ್ಕೆ ಎಂದರೆ, ಐಎಂಎಫ್ ಮಾತ್ರ. ಐಎಂಎಫ್ ವಿಧಿಸುವ ಷರತ್ತುಗಳಿಗೆ ಒಳಗಾಗುವುದರ ಬಗ್ಗೆ ಎಚ್ಚರಿಕೆ ವಹಿಸಿದ್ದ ರಾಜಪಕ್ಸೆ ಸರ್ಕಾರವು ಈಗ ಐಎಂಎಫ್‌ನೊಂದಿಗೆ ಮುಕ್ತ ಮಾತುಕತೆಗೆ ಮುಂದಾಗಿದೆ. ಒಂದು ವೇಳೆ ಐಎಂಎಫ್‌ನೊಂದಿಗೆ ಸಾಲದ ಒಪ್ಪಂದ ಮಾಡಿಕೊಂಡರೆ, ಜನ ಸಾಮಾನ್ಯರ ಮೇಲೆ ಹೆಚ್ಚು ಹೆಚ್ಚು ತೆರಿಗೆಗಳನ್ನು ಹೇರುವ ಮತ್ತು ಅವರಿಗೆ ದೊರಕಿಸಿದ ಸಬ್ಸಿಡಿಗಳನ್ನು ಕಡಿತಗೊಳಿಸುವ ಕ್ರಮಗಳನ್ನು, ಅಂದರೆ, ಜನರ ಸಂಕಷ್ಟಗಳನ್ನು ತೀವ್ರಗೊಳಿಸುವ ಕ್ರಮಗಳನ್ನು, ಅಳವಡಿಸಿಕೊಳ್ಳುವಂತೆ ಐಎಂಎಫ್ ಒತ್ತಾಯಿಸುವ ಸಾಧ್ಯತೆಯಿದೆ.

ಸಮಸ್ಯೆಯೆಂದರೆ, ಈ ಎಲ್ಲ ಬಿಕ್ಕಟ್ಟುಗಳಿಂದ ಉಂಟಾದ ಅಡ್ಡ ಪರಿಣಾಮಗಳನ್ನು ತಗ್ಗಿಸುವುದು ಶ್ರೀಲಂಕಾದ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಸ್ವತಃ ಅದರ ವಿತ್ತೀಯ ಪರಿಸ್ಥಿತಿಯೇ ಹದಗೆಟ್ಟಿದೆ. ಹಿಂದಿನ ಸಾಲಗಳು ಮತ್ತು ಹೊಸದಾಗಿ ಎತ್ತಿದ ಸಾಲಗಳ ಭಾರವು ಹೊರಲಾರದಷ್ಟಿದ್ದರೂ ಸಹ, ಪ್ರಸ್ತುತ ರಾಜಪಕ್ಸೆ ಸರ್ಕಾರವು 2019ರ ಡಿಸೆಂಬರ್‌ನಲ್ಲಿ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ದರವನ್ನು 15% ನಿಂದ 8%ಗೆ ಇಳಿಸಿತು. ಸರಕು-ಸೇವೆಗಳ ಮೇಲಿನ 2% ರಾಷ್ಟ್ರ ನಿರ್ಮಾಣ ತೆರಿಗೆಯನ್ನು ರದ್ದುಗೊಳಿಸಿತು. ಷೇರು ಮಾರುಕಟ್ಟೆ ಲಾಭಗಳ ಮೇಲಿನ ತೆರಿಗೆಯನ್ನು ರದ್ದುಗೊಳಿಸಿತು. ಇನ್ನೂ ಕೆಲವು ತೆರಿಗೆ ರಿಯಾಯಿತಿಗಳನ್ನೂ ಒದಗಿಸಿತು. ಈ ಎಲ್ಲ ತೆರಿಗೆ ಉಡುಗರೆಗಳಿಂದಾಗಿ ಶ್ರೀಲಂಕಾದ ಸರ್ಕಾರವು ವಾರ್ಷಿಕ ಜಿಡಿಪಿಯ 4%ಗೆ ಸಮನಾದ ಆದಾಯ ನಷ್ಟ ಅನುಭವಿಸಲಿದೆ ಎಂದು ಅಂದಾಜು ಮಾಡಲಾಗಿದೆ. ಕೋವಿಡ್ ನಂತರ ಶ್ರೀಲಂಕಾದ ಆದಾಯವು ಮತ್ತಷ್ಟು ಕುಸಿದಿದೆ. 2022ರ ಬಜೆಟ್‌ನಲ್ಲಿ ಸೂಪರ್-ಶ್ರೀಮಂತರ ಮೇಲೆ ವಿಧಿಸಿದ ಸರ್ಚಾರ್ಜ್ ಮತ್ತು ಕೆಲವು ದೋಷಗಳನ್ನು ಸರಿಪಡಿಸಲು ಮಾಡಿದ ಇತರ ಪ್ರಯತ್ನಗಳು ತುಂಬಾ ತಡವೂ ಹೌದು ಮತ್ತು ತುಂಬಾ ಕಡಿಮೆಯೂ ಹೌದು.

ಆದಾಗ್ಯೂ, ವಿದೇಶಿ ವಿನಿಮಯ ಬಿಕ್ಕಟ್ಟೇ ಶ್ರೀಲಂಕಾ ಸರ್ಕಾರದ ಸಮಸ್ಯೆಯ ಕೇಂದ್ರಬಿಂದುವಾಗಿದೆ. ನೆರೆಯ ಪ್ರತಿಸ್ಪರ್ಧಿ ದೇಶಗಳಾದ ಚೀನಾ ಮತ್ತು ಭಾರತ ಮತ್ತು ಉಳಿದ ದೇಶಗಳು ತಮ್ಮ ತಮ್ಮ ಸಾಲಗಳ ಅವಧಿಯನ್ನು ವಿಸ್ತರಿಸದಿದ್ದರೆ ಮತ್ತು ತಮ್ಮ ನೆರವನ್ನು ಹೆಚ್ಚಿಸದಿದ್ದರೆ, ಶ್ರೀಲಂಕಾದ ಸಾರ್ವಭೌಮತ್ವವೇ ಹರಾಜಾಗಲಿದೆ.

ಆದಿವಾಸಿ ಮಹಿಳೆ ಮೇಲೆ ಹಲ್ಲೆ-ಅರೆಬೆತ್ತಲೆಗೊಳಿಸಿ ವಿಡಿಯೋ

ದುಷ್ಕರ್ಮಿಗಳ ವಿರುದ್ಧ ಶೇಖರ್ ಲಾಯಿಲ ಆಕ್ರೋಶ



ಸರ್ಕಾರಿ ಜಮೀನಿನಲ್ಲಿ ನಿವೇಶನದ ವಿಚಾರವಾಗಿ ದುಷ್ಕರ್ಮಿಗಳ ಗುಂಪೊಂದು ಆದಿವಾಸಿ ಸಮುದಾಯದ ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿ, ಸಾರ್ವಜನಿಕ ರಸ್ತೆಯಲ್ಲಿ ಆಕೆಯ ಉಟ್ಟ ಬಟ್ಟೆಗಳನ್ನು ಹರಿದು ಹಾಕಿ ಅರೆಬೆತ್ತಲೆಗೊಳಿಸಿ ಕೇಕೆ ಹಾಕಿದ್ದಲ್ಲದೆ, ವಿಡಿಯೋ ಚಿತ್ರೀಕರಣ ಮಾಡಿದ ಹೃದಯವಿದ್ರಾವಕ ಘಟನೆಯೊಂದು ಉಜಿರೆ ಗ್ರಾಮದ ಅಳಕೆ ಎಂಬಲ್ಲಿ ನಡೆದಿದೆ.

ಅಮಾನವೀಯ ಘಟನೆಯನ್ನು ಖಂಡಿಸಿರುವ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಆಕ್ರೋಶ ವ್ಯಕ್ತಪಡಿಸಿದೆ. ಆದಿವಾಸಿಗಳ ಮೇಲೆ ದಾಳಿ ನಡೆಸಿ ಮಹಿಳೆಯನ್ನು ಅರೆಬೆತ್ತಲೆಗೊಳಿಸಿದ ಕೃತ್ಯ ಅತ್ಯಂತ ಅಮಾನವೀಯವಾದುದು. ಇದರ ನೇತೃತ್ವವನ್ನು ಬಿಜೆಪಿ ಎಸ್‌ಟಿ ಮೋರ್ಚಾದ ಅಧ್ಯಕ್ಷ ವಹಿಸಿರುವುದು, ಮಹಿಳೆಯರನ್ನು ಮಾತೆ, ದೇವತೆ ಎನ್ನುವವರ ನಿಜ ಬಣ್ಣ ಬಯಲಾಗಿದೆ ಎಂದು ಖಂಡಿಸಿದೆ.

ಉಜಿರೆಗ್ರಾಮದಲ್ಲಿನಡೆದ ಈ ಅಮಾನವೀಯ ಕೃತ್ಯ ಇಡೀ ಮಾನವ ಸಮಾಜವೇ ತಲೆ ತಗ್ಗಿಸುವಂತಾಗಿದೆ. ಮಹಿಳೆಯರನ್ನು ಮಾತೆ, ದೇವತೆ ಎನ್ನುವ ಬಿಜೆಪಿ ಪಕ್ಷದ ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚೆನ್ನಕೇಶವ ಎಂಬಾತನ ನೇತೃತ್ವದಲ್ಲಿ ಮಹಿಳೆಯನ್ನು ನಡು ರಸ್ತೆಯಲ್ಲಿ ಅರೆಬೆತ್ತಲೆಗೊಳಿಸಿರುವುದು ರಾಮರಾಜ್ಯದ ಪರಿಕಲ್ಪನೆಯೇ? ಮಹಿಳೆಯರರನ್ನು ಗೌರವಿಸುವ ಮೇಲ್ನೋಟದ ಹೇಳಿಕೆಗಳು ನಿಮ್ಮ ಕಪಟ ನಾಟಕವೇ? ಹಿಂದುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಶಾಸಕ ಹರೀಶ್ ಪೂಂಜಾರ ಮೌನ ಮಹಿಳೆಯನ್ನು ನಡು ಬೀದಿಯಲ್ಲಿ ಅರೆಬೆತ್ತಲೆಗೊಳಿಸಿರುವುದಕ್ಕೆ ಮೌನ ಸಮ್ಮತಿಯೇ? ಕಲ್ಲಡ್ಕ ಪ್ರಭಾಕರ ಭಟ್ ಸೇರಿದಂತೆ ಸಂಘಪರಿವಾರದ ಸಂಘಟನೆಗಳ ಹೋರಾಟ ಏಕಿಲ್ಲ? ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಂಚಾಲಕ ಶೇಖರ್ ಲಾಯಿಲ ಪ್ರಶ್ನಿಸಿದ್ದಾರೆ.

ಈ ಘಟನೆ ಉತ್ತರ ಪ್ರದೇಶ, ಗುಜರಾತ್ ಮಾದರಿಯಂತಿದೆ, ಇಂತಹ ಘಟನೆಯ ಹಿಂದೆ ಶಾಸಕ ಹರೀಶ್ ಪೂಂಜಾರ ಮುಂದಿನ ಚುನಾವಣಾ ರಾಜಕೀಯದ ಹಿಡನ್ ಅಜೆಂಡಾ ಅಡಗಿದೆ. ತಪ್ಪಿತಸ್ಥ ಆರೋಪಿಗಳನ್ನು 36 ಘಂಟೆಗಳಲ್ಲಿ ಬಂಧಿಸದಿದ್ದರೆ ಪೊಲೀಸ್ ಠಾಣೆ ಚಲೋ ಕಾರ್ಯಕ್ರಮ ಹಮ್ಮಿಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಆದಿವಾಸಿ ಮಹಿಳೆ ಅರೆಬೆತ್ತಲೆಗೊಳಿಸಿ-ಹಲ್ಲೆ: ಬಿಜೆಪಿ ಮುಖಂಡನ ಬಂಧನ

ಜಾಗದ ತಕರಾರಿನ ವಿಚಾರಕ್ಕೆ ಸಂಬಂಧಿಸಿದಂತೆ, ಆದಿವಾಸಿ ಮಹಿಳೆಯನ್ನು ಅರೆಬೆತ್ತಲೆಗೊಳಿಸಿ ಹಲ್ಲೆ ನಡೆಸಿದ ಪ್ರಕರಣದಲ್ಲಿ ಬಿಜೆಪಿ ಮುಖಂಡ ಸೇರಿದಂತೆ 9 ಮಂದಿ ಆರೋಪಿಗಳನ್ನು ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ಪೊಲೀಸರು ಬಂಧಿಸಿದ್ದಾರೆ.

ಬೆಳ್ತಂಗಡಿ ತಾಲೂಕಿನ ಗುರಿಪಳ್ಳ ಎಂಬಲ್ಲಿ ಘಟನೆ ನಡೆದಿದೆ. ನೆರೆಹೊರೆಯ ಮನೆಯವರ ಜಾಗದ ತಕರಾರಿನ ವಿಚಾರವಾಗಿ ಮಹಿಳೆಯರ ಬಟ್ಟೆ ಹರಿದು ಅರೆನಗ್ನಗೊಳಿಸಿ ಅಮಾನವೀಯವಾಗಿ ನಡೆದುಕೊಳ್ಳಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ಠಾಣಾ ಪೊಲೀಸರು ಬಿಜೆಪಿ ಎಸ್‌ಟಿ ಮೋರ್ಚಾದ ಅಧ್ಯಕ್ಷ ಸೇರಿದಂತೆ 9 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ. ಸಂದೀಪ್, ಸಂತೋಷ್, ಗುಲಾಬಿ, ಕುಸುಮ, ಸುಗುಣ, ಲೋಕಯ್ಯ, ಅನಿಲ್, ಲಲಿತ, ಚೆನ್ನಕೇಶವ ಎಂಬವರ ವಿರುದ್ಧ ಐಪಿಸಿ 143, 147, 148, 323, 324, 504, 354, 354(ಃ), 506, 149 ಅಡಿ ಪ್ರಕರಣ ದಾಖಲಾಗಿದೆ.

ಹಲ್ಲೆಗೊಳಗಾದ ಮಹಿಳೆಯ ಕುಟುಂಬಸ್ಥರು ಸಲ್ಲಿಸಿದ್ದ 94ಸಿ ಅರ್ಜಿಯ ಅಳತೆಗೆಂದು ಅಧಿಕಾರಿಗಳು ಬಂದಿದ್ದರು. ಈ ಸಂದರ್ಭ ಜಾಗದ ಬಗ್ಗೆ ಇನ್ನೊಂದು ತಂಡ ತಕರಾರು ತೆಗೆದಿದೆ. ಇದರಿಂದಾಗಿ ಅಳತೆಗೆ ಬಂದ ಅಧಿಕಾರಿಗಳು ಸಾಧ್ಯವಿಲ್ಲ ಎಂದು ಬಿಟ್ಟು ಹೋಗಿದ್ದಾರೆ. ಅಧಿಕಾರಿಗಳು ತೆರಳಿದ ಬಳಿಕ ಮಹಿಳೆಯ ಮೇಲೆ ಹಲ್ಲೆ ನಡೆಸಿದ್ದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸಂತ್ರಸ್ತ ಮಹಿಳೆಯ ಸಹೋದರಿ ಸುರೇಖಾ ಮಾತನಾಡಿ, "94ಸಿ ಜಾಗಕ್ಕಾಗಿ ಅರ್ಜಿ ಸಲ್ಲಿಸಿದ್ದೆವು. ಆದರೆ ಆ ಜಾಗಕ್ಕೆ ನೆರೆಹೊರೆಯವರ ಭಾರೀ ತಕರಾರು ಇತ್ತು. ಪಿಡಿಒ, ವಿಎ ಅಧಿಕಾರಿಗಳು ಜಾಗದ ಪರಿಶೀಲನೆಗೆ ಬಂದಿದ್ದರು. ಆದರೆ ಅಲ್ಲಿ ಮಾತಿಗೆ ಮಾತು ಬೆಳೆದಿದ್ದರಿಂದ ಪಿಡಿಒ ಮತ್ತು ಗ್ರಾಮ ಕರಣಿಕ ಅಧಿಕಾರಿಗಳು ಸ್ಥಳದಿಂದ ತೆರಳಿದ್ದರು" ಎಂದರು.

"ಆ ಬಳಿಕ ಸ್ಥಳೀಯ ಮುಖಂಡನ ಸೂಚನೆಯಂತೆ ಮಹಿಳೆಯರು ನನ್ನ ಸಹೋದರಿ ಮೇಲೆ ಹಲ್ಲೆ ಮಾಡಿದ್ದಾರೆ. ಬಟ್ಟೆಗಳನ್ನು ಹರಿದು ದೌರ್ಜನ್ಯ ಎಸಗಿದ್ದಾರೆ. ಈಗ ಕೇಸ್ ಹಿಂಪಡೆಯಲು ಒತ್ತಾಯ ಮಾಡಿದ್ದಾರೆ. ನಮಗೆ ನ್ಯಾಯ ಸಿಗಬೇಕು" ಎಂದು ಆಗ್ರಹಿಸಿದರು.

ಅರೆಬೆತ್ತಲೆಯಾಗಿದ್ದ ಮಹಿಳೆಯ ವಿಡಿಯೋ ಚಿತ್ರೀಕರಣ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಸಂತ್ರಸ್ತೆಯ ತಾಯಿಯ ಮೇಲೂ ಹಲ್ಲೆ ನಡೆದಿದೆ. ದುಷ್ಕರ್ಮಿಗಳ ತಂಡ ಅಲ್ಲಿಂದ ತೆರಳಿದ ಬಳಿಕವಷ್ಟೇ ಈ ಮಹಿಳೆಯರಿಗೆ ಮನೆಗೆ ಹೋಗಲು ಸಾಧ್ಯವಾಯಿತು ಎಂದು ಬೆಳ್ತಂಗಡಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಸಂಶೋಧನಾ ವಿದ್ಯಾರ್ಥಿಯ ನೊಂದಣಿ ರದ್ದು ಪ್ರಕರಣ: ಕುಲಸಚಿವರೊಂದಿಗೆ ಎಸ್‌ಎಫ್‌ಐ ಸಭೆ

ಸಂಶೋಧನಾ ವಿದ್ಯಾರ್ಥಿ ಎ.ಕೆ. ದೊಡ್ಡಬಸವರಾಜ ರವರ ಪಿಎಚ್‌ಡಿ ನೋಂದಣಿಯನ್ನು ರದ್ದು ಮಾಡಲು ಮುಂದಾಗಿರುವ ಕ್ರಮವನ್ನು ವಾಪಸ್ ಪಡೆಯಬೇಕು ಎಂದು ಎಸ್‌ಎಫ್‌ಐ ನಿಯೋಗ ಇಂದು ಕನ್ನಡ ವಿವಿಯ ಕುಲಸಚಿವರನ್ನು ಭೇಟಿ ಮಾಡಿ ಮನವಿ ನೀಡಿದೆ.

ಮುಖ್ಯಮಂತ್ರಿಗಳ ಭಾಷಣಕ್ಕೆ ದೊಡ್ಡಬಸವರಾಜ ಅಡ್ಡಿಪಡಿಸಿಲ್ಲ. ಆದರೆ, ಇದನ್ನು ನೆಪವಾಗಿಟ್ಟುಕೊಂಡು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಅಧ್ಯಯನ ಮಾಡುತ್ತಿರುವ ಎ.ಕೆ. ದೊಡ್ಡ ಬಸ್ಸಪ್ಪರವರ ಪಿಎಚ್.ಡಿ.ಯ ಖಾಯಂ ನೊಂದಣಿ ರದ್ದುಗೊಳಿಸುವ ಕುರಿತು ಇಲ್ಲ ಸಲ್ಲದ ಕುಂಟು ನೆಪವನ್ನು ಇಟ್ಟುಕೊಂಡು ನೋಟೀಸ್ ನೀಡಿರುವುದು ಅತ್ಯಂತ ಖಂಡನೀಯ ಎಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ನಿಯೋಗವು ಕುಲಸಚಿವರಾದ ಡಾ: ಸುಬ್ಬಣ್ಣ ರೈ ಅವರಿಗೆ ಮನವರಿಕೆ ಮಾಡಿಕೊಟ್ಟರು.

ಇತ್ತೀಚಿಗೆ ರಾಜ್ಯದ ಮುಖ್ಯಮಂತ್ರಿ ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾರ್ಯಕ್ರಮ ನಿಮಿತ್ತ ಭೇಟಿ ನೀಡಿದ್ದ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಸುಮಾರು 223, ಎಸ್‌ಸಿ/ಎಸ್‌ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ 40 ತಿಂಗಳಿಂದ ವಿದ್ಯಾರ್ಥಿ ವೇತನ ಬಾರದ ಕಾರಣ ಅವರ ಗಮನಕ್ಕೆ ತರಲು ಸಂಶೋಧನಾ ವಿದ್ಯಾರ್ಥಿ ಎ.ಕೆ ದೊಡ್ಡಬಸಪ್ಪ ನೇತೃತ್ವದಲ್ಲಿ ಎಲ್ಲಾ ವಿದ್ಯಾರ್ಥಿಗಳು ಸೇರಿಕೊಂಡು ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಕೊಟ್ಟಿದ್ದಾರೆ. ಬೇರ್‍ಯಾವುದೇ ದುರುದ್ದೇಶವನ್ನು ಹೊಂದಿರಲಿಲ್ಲ, ಮತ್ತು ಮುಖ್ಯಮಂತ್ರಿಗಳ ಭಾಷಣಕ್ಕೆ ಅಡ್ಡಿಪಡಿಸುವ ಕಾರಣ ಇರಲಿಲ್ಲ. ಅಂದು, ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ ಬಳಿಕ ಕನ್ನಡ ವಿಶ್ವವಿದ್ಯಾಲಯಕ್ಕೆ 20 ಕೋಟಿ ರೂಪಾಯಿ ಬಿಡುಗಡೆ ಮಾಡಲು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅಲ್ಲದೆ ಅದರಲ್ಲಿ 8 ಕೋಟಿ ರೂಪಾಯಿ ಹಣವನ್ನು ವಿದ್ಯಾರ್ಥಿಗಳಿಗೆ ಮಾಸಿಕ ಆರ್ಥಿಕ ಸಹಾಯಕ್ಕೆ ಬಳಕೆ ಮಾಡಿಕೊಳ್ಳಲು ಸೂಚನೆ ನೀಡಿದರು ಎಂದು ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ವಿದ್ಯಾರ್ಥಿಗಳು ಮನವಿ ನೀಡುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಯಾವುದೇ ನಿಯಮಗಳ ಉಲ್ಲಂಘನೆ ಆಗಿರುವುದಿಲ್ಲ. ಅಲ್ಲದೆ ವಿದ್ಯಾರ್ಥಿಗಳು ಒಂದು ವೇಳೆ ಮುಖ್ಯಮಂತ್ರಿಗಳ ಬಳಿ ತಮ್ಮ ನೋವನ್ನು (ಅಳಲು) ಹೇಳಿಕೊಳ್ಳದಿದ್ದರೆ ಇವತ್ತು ವಿಶ್ವವಿದ್ಯಾಲಯಕ್ಕೆ ದೊಡ್ಡ ಮಟ್ಟದ ಹಣ 20 ಕೋಟಿ ರೂಪಾಯಿ ಬರಲು ಸಾಧ್ಯವಿತ್ತೆ? ಉನ್ನತ ಸ್ಥಾನದಲ್ಲಿರುವ ತಾವುಗಳು ಒಂದು ಸಾರಿ ಮಾನವೀಯತೆ ದೃಷ್ಟಿಯಿಂದ ಯೋಚನೆ ಮಾಡಿ ಎಂದು ಎಸ್‌ಎಫ್‌ಐ ಖಾರವಾಗಿ ಎಚ್ಚರಿಸಿದೆ.

ವಿಶ್ವವಿದ್ಯಾಲಯದ ಅನುದಾನಕ್ಕಾಗಿ ಕುಲಪತಿಗಳಾದ ತಾವೂ ಸಹ ಎಷ್ಟು ಬಾರಿ ಸರಕಾರಕ್ಕೆ ಮನವಿ ಪತ್ರಗಳನ್ನು ಕೊಟ್ಟಿದ್ದಿರಿ, ಆದರೂ ಇಷ್ಟು ಮಟ್ಟದ ಅನುದಾನ ಬರಲು ಸಾಧ್ಯವಾಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರವೇ ವಿಶ್ವವಿದ್ಯಾಲಯದ ಒಳಗಡೆ ಬಂದಾಗ ಅವರಲ್ಲಿ ಮನವಿ ಮಾಡಲಾರದೆ ಮತ್ತೆ ಯಾರನ್ನು ಕೇಳಬೇಕು ಯಾರಲ್ಲಿ ಮನವಿ ಮಾಡಬೇಕು? ನೀವೇ ಹೇಳಿ ಎಂದು ತಿಳಿಸಿದರು.

ದಲಿತ ಸಮುದಾಯದ ವಿದ್ಯಾರ್ಥಿಯ ಉನ್ನತ ಶಿಕ್ಷಣವನ್ನು ರದ್ದು ಮಾಡಲು ಹೊರಟಿರುವ ವಿಶ್ವವಿದ್ಯಾಲಯದ ವಿದ್ಯಾರ್ಥಿ ವಿರೋಧಿ ನಡೆಯನ್ನು ಎಸ್‌ಎಫ್‌ಐ ರಾಜ್ಯ ಸಮಿತಿ ಖಂಡಿಸುತ್ತದೆ ಎಂದಿದ್ದಾರೆ.

ವಿದ್ಯಾರ್ಥಿಗೆ ನೀಡಲಾಗಿರುವ ನೋಟೀಸ್ ನಲ್ಲಿ, ಸಂಶೋಧನಾ ವಿದ್ಯಾರ್ಥಿಗಳು ಯಾವ ರೀತಿ ಭಯದ ವಾತಾವರಣದಲ್ಲಿ ಸಂಶೋಧನೆ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ವಿಶ್ವವಿದ್ಯಾಲಯದಲ್ಲಿ ದೇಶ ಹಾಗೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವ ಮತ್ತು ಉತ್ತಮ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸಂಶೋಧನೆಗಳು, ಚರ್ಚೆಗಳು ಆಗಬೇಕಾಗಿದೆ. ಆದರೆ ಅಂತಹ ಸಂಶೋಧನೆ ಮತ್ತು ಚರ್ಚೆ ಮಾಡುವ ಹಲವಾರು ದಲಿತ ಸಮುದಾಯದ ವಿದ್ಯಾರ್ಥಿಗಳಿಗೆ ಸುಮಾರು 40 ತಿಂಗಳನಿಂದ ವಿದ್ಯಾರ್ಥಿ ವೇತನ ಬಾರದಿರುವ ಕಾರಣ ವಿದ್ಯಾರ್ಥಿಗಳು ಸಾಲ ಮಾಡಿ ಅಧ್ಯಯನ ಮಾಡುತ್ತಿದ್ದಾರೆ. ಇನ್ನು ಕೆಲ ವಿದ್ಯಾರ್ಥಿಗಳಿಗೆ ಸಾಲ ಸಿಗದ ಕಾರಣ ಸಂಶೋಧನೆ ಮಾಡುವುದನ್ನು ಅರ್ಧಕ್ಕೆ ಬಿಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಅತ್ಯಂತ ಶೋಚನೀಯ ಸ್ಥಿತಿ. ಇಂತಹ ಗಂಭೀರ ಪರಿಸ್ಥಿತಿ ಇರುವ ಸಂದರ್ಭದಲ್ಲಿ ನಾಡಿನ ಮುಖ್ಯಮಂತ್ರಿಗಳು ವಿಶ್ವವಿದ್ಯಾಲಯಕ್ಕೆ ಬಂದಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪರವಾಗಿ ದೊಡ್ಡಬಸಪ್ಪ ಅವರ ಮನವಿ ಮಾಡಿದ್ದು ಸಮಯೋಚಿತ ಹಾಗೂ ನ್ಯಾಯೋಚಿತವಾದ ನಡೆಯಾಗಿದೆ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಶ್ವವಿದ್ಯಾಲಯದ ಸರ್ವಾಧಿಕಾರಿ ಧೋರಣೆಯನ್ನು ವಿದ್ಯಾರ್ಥಿ ಸಮುದಾಯ ಸಹಿಸುವುದಿಲ್ಲ ಎಂದಿದ್ದಾರೆ.

ಬಳ್ಳಾರಿಯ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಸತಿನಿಲಯ ಪಾಲಕರು ನೀಡಿದ ದೂರಿನ ಕುರಿತು ಮಾತ್ರ ಉಲ್ಲೇಖ ಮಾಡಿದ್ದೀರಿ ಈ ವಿದ್ಯಾರ್ಥಿಗೆ ವಸತಿನಿಲಯದ ನಿಲಯ ಪಾಲಕರು ಬಹಿರಂಗವಾಗಿ ಜೀವ ಬೆದರಿಕೆ ಹಾಕಿರುವ ವಸತಿ ನಿಲಯ ಪಾಲಕರ ಮೇಲೆ ಅದೇ ಪೊಲೀಸ್ ಠಾಣೆಯಲ್ಲಿ ಪ್ರತಿದೂರ ದಾಖಲು ಆಗಿದೆ ಅದು ಕೂಡ ನಿವು ಗಮನಿಸಿರಬಹುದು.

ಈ ದೇಶದಲ್ಲಿ ಉತ್ತಮ ವಾತವಾರಣ ನಿರ್ಮಾಣ ಮಾಡಲು ಎಲ್ಲಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕೊಡುಗೆ ಇದೆ. ಇಂತಹ ಸಂದರ್ಭದಲ್ಲಿ ರಾಜ್ಯದ ಕನ್ನಡ ಭಾಷೆ ಉಳಿವಿಗಾಗಿ, ಅಭಿವೃದ್ಧಿಗಾಗಿ ಇರುವಂತ ಏಕೈಕ ವಿಶ್ವವಿದ್ಯಾಲಯ ನಮ್ಮ ಹಂಪಿ ವಿ.ವಿ ಎಂದು ನಮಗೆ ಹೆಮ್ಮೆ ಇದೆ. ಈ ವಿಶ್ವವಿದ್ಯಾಲಯದಲ್ಲಿ ನಾಡಿನ ಹೆಸರಾಂತ ಗಣ್ಯರು ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಕೊಡುಗೆ ತುಂಬಾ ಇದೆ. ಇಂತಹ ಘನತೆಯುಳ್ಳ ವಿವಿಯಲ್ಲಿ ಇಲ್ಲಸಲ್ಲದ ಕುಂಟುನೆಪಗಳನ್ನು ಇಟ್ಟುಕೊಂಡು ವಿದ್ಯಾರ್ಥಿಗಳ ಹಕ್ಕುಗಳನ್ನು ದಮನ ಮಾಡುವುದು ನಿಲ್ಲಬೇಕಿದೆ.

ಇದು ವಿದ್ಯಾರ್ಥಿಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡುವ ಸೇಡಿನ ಕ್ರಮವಾಗಿದ್ದು, ಇದು ಸಂವಿಧಾನ ನೀಡಿರುವ ಶಿಕ್ಷಣದ ಹಕ್ಕು ಮತ್ತು ಹೋರಾಟದ ಹಕ್ಕಿನ ಮೇಲಿನ ದಾಳಿಯಾಗಿದೆ. ಹಾಗೂ ತಳ ಸಮುದಾಯಕ್ಕೆ ಸೇರಿದ ಇವರ ಉನ್ನತ ಶಿಕ್ಷಣವನ್ನು ಕಿತ್ತುಕೊಳ್ಳುವ ಷಡ್ಯಂತ್ರ ಆಗಿದೆ. ಕೂಡಲೇ ಈ ನೋಟಿಸ್ ವಾಪಸ್ ಪಡೆಯಲು ಎಸ್‌ಎಫ್‌ಐ ಒತ್ತಾಯಿಸಿದೆ.

ಸಂಶೋಧನಾ ವಿದ್ಯಾರ್ಥಿ ದೊಡ್ಡ ಬಸ್ಸಪ್ಪ ವಿದ್ಯಾರ್ಥಿ ಮುಖಂಡನಾಗಿ ಕಾನೂನು ಮತ್ತು ಸಂವಿಧಾನಿಕ ಚೌಕ್ಕಟ್ಟಿನಲ್ಲೆ ವಿದ್ಯಾರ್ಥಿಗಳಿಗೆ ಧಕ್ಕಬೇಕಾದ 40 ತಿಂಗಳ ಬಾಕಿ ಫೆಲೋಶಿಪ್ ಗಾಗಿ ಕಳೆದ ಮೂರು ನಾಲ್ಕು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡಿತ್ತಿದ್ದು, ಯಾವ ಪ್ರಮಾದವು ಅಲ್ಲ ಈ ಬೇಡಿಕೆಗೆ ಸ್ಪಂದಿಸಬೇಕಾದ ನೀವು ಈ ರೀತಿಯಲ್ಲಿ ಆ ವಿದ್ಯಾರ್ಥಿ ಮೇಲೆ ವೈಯಕ್ತಿಕವಾಗಿ ಸೇಡು ತೀರಿಸಿಕೊಳ್ಳುವುದು ನಿಮ್ಮ ವಿಶ್ವವಿದ್ಯಾಲಯ ಮತ್ತು ತಮ್ಮ ಹುದ್ದೆಗೆ ಶೋಭೆತರುವಂತದಲ್ಲ. ಅಲ್ಲದೆ ವಿಶ್ವವಿದ್ಯಾಲಯದ ಕನ್ನಡ ಭಾಷೆ, ನುಡಿ,ನಾಟಕ ಇತ್ಯಾದಿ ಹಿತಾಸಕ್ತಿಗೆ ಯಾವುದೇ ಧಕ್ಕೆಯನ್ನುಂಟು ಮಾಡಿರುವುದಿಲ್ಲ. ಆದ್ದರಿಂದ ಈ ಆದೇಶವನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಎಸ್‌ಎಫ್‌ಐ ಮನವಿ ಮಾಡಿದೆ.

ಇಲ್ಲವಾದಲ್ಲಿ ಅನಿವಾರ್ಯವಾಗಿ ಈ ದಲಿತ ಸಂಶೋದನಾ ವಿದ್ಯಾರ್ಥಿಯ ಉನ್ನತ ಶಿಕ್ಷಣ ಮುಂದುವರಿಕೆಗಾಗಿ, ವಿದ್ಯಾರ್ಥಿಗಳು ಮತ್ತು ಜನಪರ, ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಈ ನೋಟಿಸ್ ವಿರುದ್ದ ರಾಜ್ಯಾದ್ಯಂತ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದಿದ್ದಾರೆ.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ಅಮರೇಶ ಕಡಗದ ನೇತೃತ್ವದಲ್ಲಿನ ನಿಯೋಗದಲ್ಲಿ ಎಸ್‌ಎಫ್‌ಐ ಮುಖಂಡ ಹಾಗು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿ ವಸಂತ ಕಲಾಲ್, ಎಸ್‌ಎಫ್‌ಐ ಹೊಸಪೇಟೆ ತಾಲೂಕ ಉಪಾಧ್ಯಕ್ಷ ಪವನ ಕುಮಾರ, ಅಲ್ತಾಫ್ ಇತರರು ಇದ್ದರು.



ಜಹಾಂಗೀರ್‌ಪುರಿ ಹಿಂಸಾಚಾರ–ಪೊಲೀಸ್ ಪಾತ್ರದ ಬಗ್ಗೆ....... ಪುಟ 2 ರಿಂದ

ಮತ್ತು ನಿಯಮಾವಳಿಗಳಿಗೆ ವಿರುದ್ಧವಾಗಿದೆ. 17 ರಂದು ಜಹಾಂಗೀರ್‌ಪುರಿ ಪೊಲೀಸ್ ಸ್ಟೇಷನಿನಲ್ಲಿ ಹೆಚ್ಚುವರಿ ಡಿಸಿಪಿ ಶ್ರೀ ಕಿಶನ್ ಕುಮಾರ್ ಅವರನ್ನು ನಮ್ಮ ತಂಡದವರು ಇತರರೊಂದಿಗೆ ಭೇಟಿಯಾದಾಗ, ಬಿಜೆಪಿಯ ಮುಖಂಡರು ಠಾಣೆಯ ಆವರಣದೊಳಗೇ ಪತ್ರಿಕಾಗೋಷ್ಠಿ ನಡೆಸುತ್ತಿರುವುದನ್ನು ಕಂಡು ಆಘಾತಕ್ಕೊಳಗಾದರು. ಇದು ಅತ್ಯಂತ ನಿಯಮಬಾಹಿರವಾಗಿದೆ ಮತ್ತು ಪ್ರಸ್ತುತ ಪ್ರಕರಣದಲ್ಲಿ ಪೊಲೀಸ್ ಪಾತ್ರ ಸಂಪೂರ್ಣವಾಗಿ ಏಕಪಕ್ಷೀಯ ಮತ್ತು ಪಕ್ಷಪಾತದ್ದಾಗಿದೆ ಎಂಬ ಸಂದೇಹವನ್ನು ಬಲಪಡಿಸುತ್ತದೆ.

ಈ ಪತ್ರವನ್ನು (1) ಮೆರವಣಿಗೆಯಲ್ಲಿ ಆಯುಧಗಳನ್ನು ಹಿಡಿದಿರಲು ಅವಕಾಶ ನೀಡಿದ (2) ಸಾಕಷ್ಟು ಬಂದೋಬಸ್ತಿನ ಕೊರತೆಗೆ ಕಾರಣರಾದ (3) ಮೆರವಣಿಗೆಯನ್ನು ಮಸೀದಿಯ ಮುಂದೆ ನಿಲ್ಲಿಸಲು ಅನುಮತಿ ನೀಡಿದ ಮತ್ತು 4) ಏಕಪಕ್ಷೀಯ ಪಕ್ಷಪಾತದ ತನಿಖೆ ನಡೆಸುತ್ತಿರುವ ಪೊಲೀಸ್ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲು ಬರೆಯುತ್ತಿದ್ದೇವೆ. ಎರಡೂ ಸಮುದಾಯಗಳ ಜನರನ್ನು ಬಂಧಿಸಲಾಗಿದೆ ಎಂದು ಹೇಳಿದ್ದೀರಿ. ಎಲ್ಲ ತಪ್ಪಿತಸ್ಥರ ಬಂಧನ ಮತ್ತು ಶಿಕ್ಷೆ ಆಗಬೇಕು ಎಂಬುದು ನಮ್ಮ ನಿಲುವು ಕೂಡ. ಆದಾಗ್ಯೂ ಬಹುಪಾಲು ಬಂಧನಗಳು ಅಲ್ಪಸಂಖ್ಯಾತ ಸಮುದಾಯದಲ್ಲಿ ನಡೆದಿವೆ, ಆದರೆ ಘಟನೆಗಳು ಸಾಗಿದ ದಾರಿ ಪ್ರಮುಖ ಪ್ರಚೋದನೆಗಳು ಮತ್ತು ಯೋಜನೆ ಮೆರವಣಿಗೆಯನ್ನು ನಡೆಸಿದ ಸಂಘಟನೆಯದ್ದು, ಪೋಲೀಸರೇ ಹೇಳಿರುವಂತೆ ಬಜರಂಗ ದಳದ ಅಂಗಸಂಸ್ಥೆಯದ್ದು ಎಂದು ತೋರಿಸುತ್ತವೆ.

ತನಿಖೆಯನ್ನು ಯಾರಿಗೆ ಹಸ್ತಾಂತರಿಸ ಲಾಗಿದೆಯೋ ಆ ಕ್ರೈಂ ಬ್ರಾಂಚ್ ಜಹಾಂಗೀರ್‌ಪುರಿ ಘಟನೆಯ ಪ್ರಕರಣದಲ್ಲಿ ಜವಾಬ್ದಾರರಾಗಿರುವ ಪೋಲಿಸ್ ಪಡೆಯ ಒಟ್ಟಾರೆ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಕಾರಣಕ್ಕಾಗಿಯೇ ಸಿಪಿಐ(ಎಂ) ನಿರ್ದಿಷ್ಟ ಕಾಲಮಿತಿಯಲ್ಲಿ ನ್ಯಾಯಾಂಗ ತನಿಖೆ/ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿದೆ. ಈ ನಡುವೆ ಇದಕ್ಕೆ ಹೊಣೆಗಾರರಾದ ಪೋಲೀಸರ ವಿರುದ್ಧ ಕ್ರಮ ಜರುಗಿಸಬೇಕಾಗಿ ತಮ್ಮನ್ನು ವಿನಂತಿಸಿಕೊಳ್ಳುತ್ತೇವೆ.

ಅಮೆಝಾನ್ ಯೂನಿಯನ್ ಗೆಲುವು ರಾಷ್ಟ್ರೀಯ ಅಭಿಯಾನ ಆರಂಭಿಸಿದೆ............ ಪುಟ 16 ರಿಂದ

ಸ್ಥಾಪಿಸಿ ಅವರ ಪ್ರಶ್ನೆಗಳನ್ನು ಉತ್ತರಿಸುವುದಕ್ಕೆ, ಗೊಂದಲಗಳನ್ನು ನಿವಾರಿಸುವುದಕ್ಕೆ, ಅಮೆಝಾನ್ ಬೆದರಿಕೆಗಳ ವಿರುದ್ಧ ಪ್ರತಿರೋಧ ಒಡ್ಡಲಿಕ್ಕೆ ಧೈರ್ಯತುಂಬುವುದಕ್ಕೆ ಸಾಧ್ಯವಾಯಿತು. ಯುವ ಮತ್ತು ಕರಿಯ ಕಾರ್ಮಿಕರನ್ನು ಒಳಗೊಳ್ಳಲು ವಿಶೇಷ ಪ್ರಯತ್ನಗಳನ್ನು ಮಾಡಲಾಯಿತು. ನ್ಯೂಯಾರ್ಕಿನ ಚಾರಿತ್ರಿಕ ಯೂನಿಯನ್–ಪರ ಸಾಮಾನ್ಯ ಪ್ರಜ್ಞೆ ಸಹ ನೆರವಿಗೆ ಬಂತು ಎಂದು ಹೇಳಲಾಗಿದೆ.

ಇವೆರಡರಿಂದ ಮುಂದಿನ (ಸ್ಟೇಟೆನ್ ದ್ವೀಪದ ಇನ್ನೊಂದು ಅಮೆಜಾನ್ ಘಟಕದಲ್ಲಿ ಈಗಾಗಲೇ ಮುಂದಿನ ಮತದಾನಕ್ಕೆ ತಯಾರಿ ನಡೆದಿದೆ) ಕಾರ್ಮಿಕ ಯೂನಿಯನ್ ಅಭಿಯಾನಕ್ಕೆ ಯಾವ ಪಾಠಗಳನ್ನು ಕಲಿಯಬಹುದು? ಕಾರ್ಮಿಕರ ಜತೆ ವ್ಯಾಪಕವಾದ ನೇರ ಸಂಪರ್ಕ ಸ್ಥಾಪಿಸುವುದು ಅತ್ಯಂತ ಪ್ರಮುಖ ಅಂಶ. ಕಾರ್ಮಿಕರ ವರ್ಣ, ಲಿಂಗ, ವಯಸ್ಸು ಮುಂತಾದ ವಿಶಿಷ್ಟ ಅಂಶಗಳಿಗೆ ವಿಶೇಷ ಗಮನ ನೀಡಬೇಕು. ಸ್ಥಳೀಯವಾಗಿ ರಾಷ್ಟ್ರೀಯವಾಗಿ ಕಾರ್ಮಿಕರ ಹೋರಾಟವನ್ನು ಬೆಂಬಲಿಸಬಲ್ಲ ಇತರ ಸಮುದಾಯಗಳನ್ನು ಗುರುತಿಸಿ ಅಮೆಝಾನ್ ವಿರುದ್ಧ ಅವರ ಬೆಂಬಲ ಪಡೆಯಲು ಪ್ರಯತ್ನಿಸಬೇಕು. ಅಮೆಝಾನ್ ಕೇಂದ್ರಗಳಿರುವ ಸಮುದಾಯಗಳಿಗೆ ಅದು ತನ್ನ ಪ್ರಾಥಮಿಕ ಬಾಧ್ಯತೆಗಳನ್ನು ಪೂರೈಸುವುದಿಲ್ಲ. ಬದಲಿಗೆ ಹೆಚ್ಚಿಗೆ ಸವಲತ್ತುಗಳನ್ನು ರಿಯಾಯಿತಿಗಳನ್ನು ಪಡೆದುಕೊಳ್ಳಲು ಹವಣಿಸುತ್ತದೆ. ಖಾಸಗಿತನದ ಉಲ್ಲಂಘನೆ, ಇ–ವ್ಯಾಪಾರ ಕ್ಷೇತ್ರದಲ್ಲಿ ಏಕಸ್ವಾಮ್ಯಗಳಿಂದ ಸಂತ್ರಸ್ತರ ಸಾಮುದಾಯಿಕ ಬೆಂಬಲ ಸಹ ಪಡೆಯಲು ಪ್ರಯತ್ನಿಸಬೇಕು ಎನ್ನುತ್ತಾರೆ ಟ್ರೇಡ್ ಯೂನಿಯನ್ ಸಂಘಟಕ ಜಾನ್ ಕೇಸ್ 'ಪೀಪಲ್ಸ್ ವರ್ಲ್ಡ್' ಪತ್ರಿಕೆಯಲ್ಲಿ ಲೇಖನವೊಂದರಲ್ಲಿ.

JANASHAKTHI KANNADA VARA PATRIKE APRIL 25-MAY 01, 2022 Price: Rs. 10/- Date of Publication: 22 APRIL 2022 RNI No. KARKAN /2006/17926 Posted on 25-04-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2



ಅಮೆಝಾನ್ ಯೂನಿಯನ್ ಗೆಲುವು ರಾಷ್ಟ್ರೀಯ ಅಭಿಯಾನ ಆರಂಭಿಸಿದೆ

ಅಮೆಝಾನ್ ನ ಸ್ಟೇಟನ್ ದ್ವೀಪದ JFK8 ಘಟಕದ ಕಾರ್ಮಿಕರು ಯೂನಿಯನ್ ಹೊಂದುವುದನ್ನು ಶೇ. 60ಕ್ಕೂ ಹೆಚ್ಚು ಭಾರೀ ಬಹುಮತದಿಂದ ಬೆಂಬಲಿಸಿದ್ದಾರೆ. ಇದರಿಂದ ಯು.ಎಸ್ ನಲ್ಲಿರುವ ಅಮೆಝಾನ್ ನ ಸುಮಾರು 200 ಘಟಕಗಳ ಕಾರ್ಮಿಕರಲ್ಲಿ ಇದರಿಂದ ವಿದ್ಯುತ್ ಸಂಚಾರವಾಗಿದ್ದು, ಸ್ಟೇಟನ್ ದ್ವೀಪದ ಘಟಕದ ಕಾರ್ಮಿಕರು ಇದನ್ನು ಸಾಧಿಸುವುದು ಸಾಧ್ಯವಾದರೆ ನಮಗೆ ಯಾಕೆ ಸಾಧ್ಯವಿಲ್ಲವೆಂದು ಕೇಳುತ್ತಿದ್ದಾರೆ. ಸ್ಟಾರ್ ಬಕ್ಸ್ ಎಂಬ ಯು.ಎಸ್ ನಲ್ಲಿ ಹಲವು ಘಟಕಗಳನ್ನು ಹೊಂದಿರುವ ಇನ್ನೊಂದು ದೈತ್ಯ ಕಂಪನಿಯಲ್ಲಿ ಇದೇ ಪ್ರಕ್ರಿಯೆ ಆರಂಭವಾಗಿದೆ. ನ್ಯೂಯಾರ್ಕಿನ ಬಫೆಲೊ ದಲ್ಲಿ ಸ್ಟಾರ್ ಬಕ್ಸ್ ಘಟಕದಲ್ಲಿ ಕಾರ್ಮಿಕರು ಯೂನಿಯನ್ ಬೇಕು ಎಂದು ಡಿಸೆಂಬರಿನಲ್ಲಷ್ಟೇ ಬಹುಮತದಿಂದ ಆಯ್ಕೆ ಮಾಡಿದ್ದು, ಕೆಲವೇ ತಿಂಗಳುಗಳಲ್ಲಿ 12ಕ್ಕೂ ಹೆಚ್ಚು ಘಟಕಗಳಲ್ಲಿ ಕಾರ್ಮಿಕರ ಯೂನಿಯನ್ ಕಟ್ಟುವುದನ್ನು ಬಹುಮತದಿಂದ ಬೆಂಬಲಿಸಿದ್ದಾರೆ. ಕಾರ್ಮಿಕರು ಯು.ಎಸ್ ಕಾರ್ಪೊರೆಟ್ ಗಳ ಅತಿಯಾಸೆಯಿಂದ ಬೇಸತ್ತಿದ್ದಾರೆ, ಆಕ್ರೋಶಗೊಂಡಿದ್ದಾರೆ. ಒಂದು ಕಡೆ ಕೊವಿಡ್ ಅವಧಿಯಲ್ಲಿ ಬಿಕಟ್ಟನ್ನು ಪೂರ್ಣವಾಗಿ ಕಾರ್ಮಿಕರ ಮೇಲೆ ಹೊರಿಸಿ, ಇನ್ನೊಂದು ಕಡೆ ಸರಕಾರದ ವಿಶೇಷ ಕೊವಿಡ್ ಪ್ಯಾಕೇಜನ್ನು ಬಾಚಿಕೊಂಡದ್ದು ಇದಕ್ಕೆ ಕಾರಣವಾಗಿದೆ. ಈ ಬೇಜವಾಬ್ದಾರ ಕಾರ್ಪೊರೆಟ್ ಏಕಾಧಿಕಾರವನ್ನು ಕಾರ್ಮಿಕರ ನಿಜವಾದ ಪ್ರಜಾಪ್ರಭುತ್ವದಿಂದ ಎದುರಿಸಬೇಕೆಂಬ ಛಲ ಬಂದಿದೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ದೈತ್ಯ ಕಂಪನಿ ಅಮೆಝಾನ್ ನ ಸ್ಟೇಟನ್ ದ್ವೀಪದ JFK8 ಎಂಬ ಘಟಕದ ಕಾರ್ಮಿಕರ ಯೂನಿಯನ್ ಗೆಲುವು ಕಾರ್ಮಿಕರ ರಾಷ್ಟ್ರೀಯ ಯು.ಎಸ್ ನಲ್ಲೊಂದು ಕಾರ್ಮಿಕರ ಅಭಿಯಾನ ಆರಂಭಿಸಿದೆಯೆಂದು ಸೆನೆಟರ್ ಬರ್ನಿ ಸ್ಯಾಂಡರ್ಸ್ ಎಂಬ ಪ್ರಗತಿಪರ ಡೆಮೊಕ್ರಾಟಿಕ್ ಸೆನೆಟರ್ ಹೇಳಿದ್ದಾರೆ. ಅಮೆಝಾನ್ ನ ಸ್ಟೇಟನ್ ದ್ವೀಪದ JFK8 ಘಟಕದ ಕಾರ್ಮಿಕರು ಯೂನಿಯನ್ ಹೊಂದುವುದನ್ನು ಶೇ. 60ಕ್ಕೂ ಹೆಚ್ಚು ಭಾರೀ ಬಹುಮತದಿಂದ ಬೆಂಬಲಿಸಿದ್ದರ ಕುರಿತು ಅವರು ಉಲ್ಲೇಖಿಸುತ್ತಿದ್ದರು. ಯು.ಎಸ್. ನಲ್ಲಿರುವ ಅಮೆಝಾನ್ ನ ಸುಮಾರು 200 ಘಟಕಗಳ ಕಾರ್ಮಿಕರಲ್ಲಿ ಇದರಿಂದ ವಿದ್ಯುತ್ ಸಂಚಾರವಾಗಿದ್ದು, ಸ್ಟೇಟನ್ ದ್ವೀಪದ ಘಟಕದ ಕಾರ್ಮಿಕರು ಇದನ್ನು ಸಾಧಿಸುವುದು ಸಾಧ್ಯವಾದರೆ ನಮಗೆ ಯಾಕೆ ಸಾಧ್ಯವಿಲ್ಲವೆಂದು ಕೇಳುತ್ತಿದ್ದಾರೆ. ಯೂನಿಯನ್ ಆಯ್ಕೆಯ ಚುನಾವಣೆಗೆ ತಯಾರಾಗುತ್ತಿದ್ದಾರೆ. ಸ್ಟೇಟನ್ ದ್ವೀಪದ ಘಟಕದ ಯೂನಿಯನ್ ಸಂಘಟಕರನ್ನು ಸಂಪರ್ಕಿಸುತ್ತಿದ್ದಾರೆ. ಇದು ಅಮೆಝಾನ್ ಒಡೆಯ ಶತಕೋಟ್ಯಾಧೀಶ ಜೆಫ್ ಬೆಝೋಸ್ ಮತ್ತು ಅದರ ನಿರ್ವಹಣಾ ಮಂಡಳಿಯನ್ನು ಕಂಗೆಡಿಸಿದೆ.

ಇಷ್ಟು ಮಾತ್ರವಲ್ಲ ಸ್ಟಾರ್ ಬಕ್ಸ್ ಎಂಬ ಯು. ಎಸ್ ನಲ್ಲಿ ಹಲವು ಘಟಕಗಳನ್ನು ಹೊಂದಿರುವ ಇನ್ನೊಂದು ದೈತ್ಯ ಕಂಪನಿಯಲ್ಲಿ ಇದೇ ಪ್ರಕ್ರಿಯೆ ಆರಂಭವಾಗಿದ್ದು ಯು.ಎಸ್ ನ ಎಲ್ಲ ಶತಕೋಟ್ಯಾಧೀಶರ ನಿದ್ದೆಯನ್ನೂ ಕೆಡಿಸಿದೆ. ನ್ಯೂಯಾರ್ಕಿನ ಬಫೆಲೊ ದಲ್ಲಿ ಸ್ಟಾರ್ ಬಕ್ಸ್ ಘಟಕದಲ್ಲಿ ಕಾರ್ಮಿಕರು ಯೂನಿಯನ್ ಬೇಕು ಎಂದು ಡಿಸೆಂಬರಿನಲ್ಲಷ್ಟೇ ಬಹುಮತದಿಂದ ಆಯ್ಕೆ ಮಾಡಿದ್ದು, ಕೆಲವೇ ತಿಂಗಳುಗಳಲ್ಲಿ 12ಕ್ಕೂ ಹೆಚ್ಚು ಘಟಕಗಳಲ್ಲಿ ಕಾರ್ಮಿಕರ ಯೂನಿಯನ್ ಕಟ್ಟುವುದನ್ನು ಬಹುಮತದಿಂದ ಬೆಂಬಲಿಸಿದ್ದಾರೆ. ಅಮೆರಿಕದ ಕಾರ್ಮಿಕ ಕಾನೂನುಗಳ ಪ್ರಕಾರ ಒಂದು ಕಂಪನಿ ಅಥವಾ ಘಟಕದಲ್ಲಿ ಯೂನಿಯನ್ ಮಾಡಬೇಕಾದರೆ ಕಾರ್ಮಿಕರಲ್ಲಿ ಅವರು 'ಯೂನಿಯನ್ ಸೇರಲು ಬಯಸುತ್ತಾರಾ?' ಎಂಬುದರ ಕುರಿತು ಗುಪ್ತ ಮತದಾನದ ಮೂಲಕ ಅಭಿಪ್ರಾಯ ಸಂಗ್ರಹ ಮಾಡಬೇಕು. ಅದರಲ್ಲಿ "ಯೂನಿಯನ್ ಸೇರಲು ಬಯಸುವ" ಕುರಿತು ಬಹುಮತ ಬಂದರೆ ಯೂನಿಯನ್ ರಚಿಸಬಹುದು ಮತ್ತು ಅದನ್ನು NLRB (ನೇಶನಲ್ ಲೇಬರ್ ರಿಲೇಶನ್ಸ್ ಬೋರ್ಡ್) ರಿಜಿಸ್ಟರ್ ಮಾಡುತ್ತದೆ. ಆಗ ಮಾತ್ರ ಕಂಪನಿಯ ಜೊತೆಗೆ ಸಾಮೂಹಿಕ ಚೌಕಾಶಿ ಮಾಡುವ ಅವಕಾಶವಿರುತ್ತದೆ.

ಯು.ಎಸ್.ನ ಎರಡನೇ ಅತಿ ದೊಡ್ಡ ಸಂಖ್ಯೆಯ (8 ಲಕ್ಷ) ಕಾರ್ಮಿಕರನ್ನು ಹೊಂದಿರುವ ಮತ್ತು ಜಗತ್ತಿನ ಅತಿ ದೊಡ್ಡ ಇ-ವ್ಯಾಪಾರ ಕಂಪನಿ ಆಗಿರುವ 'ಅಮೆಝಾನ್' ತನ್ನ ಯಾವುದೇ ಘಟಕದಲ್ಲಿ ಯೂನಿಯನ್ ಸಂಘಟಿಸುವುದರ ವಿರುದ್ಧ ತೀವ್ರ ಕ್ರಮ ಕೈಗೊಳ್ಳುತ್ತಾ ಬಂದಿದೆ. ಯು.ಎಸ್. ನ ಅಲಬಾಮಾ ರಾಜ್ಯದ ಬೆಸ್ಸೆಮರ್ ನಲ್ಲಿರು ಅಮೆಝಾನ್ ನ ಅತಿ ದೊಡ್ಡ ಗೋದಾಮಿ (ವೇರ್ ಹೌಸ್) ನಲ್ಲಿ ಯೂನಿಯನ್ ಮಾಡುವುದರ ಕುರಿತು ನಡೆದ ಕಾರ್ಮಿಕರ ಅಭಿಪ್ರಾಯ ಸಂಗ್ರಹದಲ್ಲಿ ಆ ಕಂಪನಿ ಕಾರ್ಮಿಕರ ಮೇಲೆ ಒತ್ತಡ ಮತ್ತು ದಮನಕಾರಿ ಕ್ರಮಗಳ ಮೂಲಕ ಯೂನಿಯನ್ ಗೆ ಸೇರುವುದಿಲ್ಲವೆಂಬ ಅಭಿಮತಕ್ಕೆ ಬಹುಮತ ಬರುವಂತೆ ಆ ಪ್ರಕ್ರಿಯೆಯನ್ನು ತಿರುಚಿತ್ತು. ಇದರ ವಿರುದ್ಧ ಯೂನಿಯನ್ NLRB ನಲ್ಲಿ ಫಿರ್ಯಾದು ಸಲ್ಲಿಸಿದ್ದು ಅದು ಎರಡನೆಯ ಮತದಾನಕ್ಕೆ ಆಜ್ಞೆ ಮಾಡಿತು. ಆದರೆ ಎರಡನೆಯ ಮತದಾನದಲ್ಲಿ ಕಾರ್ಮಿಕರು 875-993 ಮತಗಳಿಂದ ಹಿಂದಿದ್ದಾರೆ. ಆದರೆ 416 ಮತಗಳ ಸಿಂದುತ್ವವನ್ನು ಪ್ರಶ್ನಿಸಲಾಗಿದೆ. ಈ ಕುರಿತು ನಿರ್ಧಾರ NLRB ನ ಅಂಗಳದಲ್ಲಿದೆ. ಸ್ಟೇಟನ್ ದ್ವೀಪದ ಘಟಕದಲ್ಲೂ ಅಮೆಝಾನ್ ಇಂತಹ ಎಲ್ಲ ಪ್ರಯತ್ನಗಳನ್ನು ಮಾಡಿತ್ತು. ಈಗ ಕಾರ್ಮಿಕರ ವಿಜಯವನ್ನು ಮುಕ್ತಮನಸ್ಸಿನಿಂದ ಸ್ವೀಕರಿಸಿಲ್ಲ. ಅದರ ವಿರುದ್ಧ NLRB ನಲ್ಲಿ ಫಿರ್ಯಾದು ಸಲ್ಲಿಸಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಸ್ಟೇಟನ್ ದ್ವೀಪದ ವ ಅಮೆಜಾನ್ ಘಟಕದ ಕಾರ್ಮಿಕರ ಯೂನಿಯನ್ ಗೆಲುವು ಗಮನಾರ್ಹವಾದುದು. ಕಾರ್ಮಿಕರು ಯು. ಎಸ್. ಕಾರ್ಪೊರೆಟ್ ಗಳ ಅತಿಯಾಸೆಯಿಂದ ಬೇಸತ್ತಿದ್ದಾರೆ, ಆಕ್ರೋಶಗೊಂಡಿದ್ದಾರೆ. ಒಂದು ಕಡೆ ಕೊವಿಡ್ ಅವಧಿಯಲ್ಲಿ ಬಿಕಟ್ಟನ್ನು ಪೂರ್ಣವಾಗಿ ಕಾರ್ಮಿಕರ ಮೇಲೆ ಹೊರಿಸಿ, ಇನ್ನೊಂದು ಕಡೆ ಸರಕಾರದ ವಿಶೇಷ ಕೊವಿಡ್ ಪ್ಯಾಕೇಜನ್ನು ಬಾಚಿಕೊಂಡಿದ್ದು. ಇದಕ್ಕೆ ಕಾರಣವಾಗಿದೆ. ಈ ಬೇಜವಾಬ್ದಾರ ಕಾರ್ಪೊರೆಟ್ ಏಕಾಧಿಕಾರವನ್ನು ಕಾರ್ಮಿಕರ ನಿಜವಾದ ಪ್ರಜಾಪ್ರಭುತ್ವದಿಂದ ಎದುರಿಸಬೇಕೆಂಬ ಛಲ ಬಂದಿದೆ. ಜಗತ್ತಿಗೆಲ್ಲ ಮಾನವ ಹಕ್ಕುಗಳ ಪಾಠ ಮಾಡುವ ಯು.ಎಸ್ ಸರಕಾರ ಯೂನಿಯನ್ ಕಟ್ಟಿಕೊಂಡು ಸಾಮೂಹಿಕ ಚೌಕಾಶಿಯ ಮೂಲಭೂತ ಹಕ್ಕನ್ನು ಕೊಡದಿರುವ ಕಾರ್ಮಿಕ-ವಿರೋಧಿ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಲು ಹಿಂಜರಿಯುತ್ತಿರುವುದು ವಿರುದ್ಧ ಸಹ ಆಕ್ರೋಶ ತಿರುಗುತ್ತಿದೆ.

ಬೆಸೆಮರ್ ಘಟಕದಲ್ಲಿ ಎರಡು



ಮತದಾನಗಳಲ್ಲೂ ನಿರ್ಣಾಯಕ ಬಹುಮತ ಸಾಧಿಸಲು ಸಾಧ್ಯವಾಗಲಿಲ್ಲ? ಭಾರೀ ಬಹುಮತವನ್ನು ಸ್ಟೇಟನ್ ದ್ವೀಪದ ಅಮೆಜಾನ್ ಘಟಕದಲ್ಲಿ ಕಾರ್ಮಿಕ ವಿಜಯ ಹೇಗೆ ಸಾಧ್ಯವಾಯಿತು? ಈ ಪ್ರಶ್ನೆಗಳತ್ತ ಈಗ ಕಾರ್ಮಿಕರ, ವಿಶ್ಲೇಷಕರ, ವೀಕ್ಷಕರ ಗಮನ ಹರಿದಿದೆ.

ಬೆಸೆಮರ್ ನಲ್ಲಿ ಹೋರಾಟವನ್ನು RWDSU (ರಿಟೈಲ್, ವೇರ್ ಹೌಸ್, ಡಿಪಾರ್ಟ್ ಮೆಂಟಲ್ ಸ್ಟೋರ್ ಯೂನಿಯನ್) ಎಂಬ ರಾಷ್ಟ್ರೀಯ ವ್ಯಾಪ್ತಿಯ ಯೂನಿಯನ್ ಮತ್ತು AFL-CIO ಎಂಬ ಎಲ್ಲ ಯೂನಿಯನ್ ಗಳ ಫೆಡರೇಶನ್ ನಡೆಸಿತು. ಈ ಎರಡೂ ಸಂಘಟನೆಗಳು ಪ್ರಚಾರದಲ್ಲಿ ಯಾವುದೇ ಕೊರತೆ ಮಾಡಲಿಲ್ಲ. ಆದರೆ ಅದೇ ಮುಳುವಾಯಿತೇನೋ ಎಂದು ಹೇಳಲಾಗಿದೆ. ಒಂದು ಕಡೆ ತೀವ್ರ ರಾಷ್ಟ್ರೀಯ ಪ್ರಚಾರದಿಂದಾಗಿ, ರಾಷ್ಟ್ರೀಯ ಮಾಧ್ಯಮಗಳಲ್ಲಿ ಗೊಂದಲಕಾರಿ ದಾರಿ ತಪ್ಪಿಸುವ ಕಾರ್ಮಿಕ ವಿರೋಧಿ ಪ್ರಚಾರಗಳು ಮತ್ತು ಅಮೆಝಾನ್ ನಿಂದ ಬಂದ ಕಾರ್ಮಿಕರನ್ನು ಬೆದರಿಸುವ ತೀಕ್ಷ್ಣ ಪ್ರತಿಕ್ರಿಯೆಗೆ ಪ್ರತಿರೋಧ ಒಡ್ಡುವಷ್ಟು ಶಕ್ತಿ ಸ್ಥಳೀಯ ಸಂಘಟಕರಿಗಿರಲಿಲ್ಲ. ಪ್ರಮುಖವಾಗಿ 'ಹೊರಗಿನವರು ಬಂದು ತಮ್ಮ ಹಿತಾಸಕ್ತಿಗಳಿಗಗಾಗಿ ಈ ಘಟಕವನ್ನು ಮುಚ್ಚಲು ಕಾರ್ಮಿಕರನ್ನು ಹೀಗೆ ಪ್ರಚೋದಿಸುತ್ತಿದ್ದಾರೆ' ಎಂಬ ಪ್ರಚಾರ ಮಾಡಲಾಗಿತ್ತು. ರಾಷ್ಟ್ರೀಯ ಯೂನಿಯನ್ ಮತ್ತು AFL-CIO ಗಳ ಕುರಿತು ಕಾರ್ಮಿಕರಿಗೆ ಪೂರ್ಣ ವಿಶ್ವಾಸವಿರಲಿಲ್ಲ. ಸ್ಥಳೀಯವಾಗಿ ಕಾರ್ಮಿಕರ ಜತೆ ನೇರ ಸಂಪರ್ಕದಲ್ಲಿ ಮತ್ತು ಯೂನಿಯನ್ ಪರ ಅವರ ಮನವೊಲಿಸುವುದರಲ್ಲಿ ಸಹ ಬಹಳಷ್ಟು ಕೊರತೆಗಳಿದ್ದವು. ಬೆಸ್ಸೆಮರ್ ಅಮೆಜಾನ್ ಗೋದಾಮಿನ ಉದ್ಯೋಗಿಗಳಲ್ಲಿ ಸುಮಾರು ಶೇ. 80ರಷ್ಟು ಕರಿಯರಾಗಿದ್ದು, ಅಮೆಜಾನ್ ನ "ಗೊಂದಲ ಉಂಟು ಮಾಡುವ, ಜುಲುಮೆ, ಪ್ರತೀಕಾರದ ಬೆದರಿಕೆಗಳ" ತೀವ್ರ ಕ್ರಮಗಳ ಅನಿರೀಕ್ಷಿತ ಪರಿಣಾಮಕಾರಿತನವು ಇಂದಿನ ಅದರಲ್ಲೂ ಕರಿಯರ ದಿನೇ ಹದಗೆಡುತ್ತಿರುವ ಅಭದ್ರ ಜೀವನೋಪಾಯದ ಪರಿಸ್ಥಿತಿಯ ಫಲ. ಅಲ್ಲದೆ ಅಲಬಾಮಾ ದಂತಹ ದಕ್ಷಿಣ ಪ್ರಾಂತ್ಯಗಳಲ್ಲಿ ಕಾರ್ಮಿಕರಲ್ಲಿ ವ್ಯಾಪಕವಾಗಿರುವ ಸಾಮಾನ್ಯ ಯೂನಿಯನ್-ವಿರೋಧಿ ಮತ್ತು ವರ್ಣಬೇಧದ ದಾಳಿಗಳಿಂದ ಜರ್ಝರಿತವಾದ ಕರಿಯರ ಆತಂಕದ ಧೋರಣೆಯೂ ಕಾರಣವಾಗಿತ್ತು.

ಸ್ಟೇಟನ್ ದ್ವೀಪದ ಅಮೆಜಾನ್ ಘಟಕದಲ್ಲಿ ಸ್ಥಳೀಯ ಸ್ವತಂತ್ರ ಯೂನಿಯನ್ ಪ್ರಚಾರ ಸಂಘಟನೆಗಳನ್ನು ನಡೆಸಿತು. ರಾಷ್ಟ್ರೀಯ ಪ್ರಚಾರವನ್ನು ಉದ್ದೇಶಪೂರ್ವಕವಾಗಿ ಹೆಚ್ಚಾಗಿ ಮಾಡಲಿಲ್ಲ. ಬದಲಾಗಿ ಕಾರ್ಮಿಕರ ಜತೆ ವ್ಯಾಪಕವಾದ ನೇರ ಸಂಪರ್ಕ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**